ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಶತಮಾನೋತ್ಸವದ ಸಡಗರದಲ್ಲಿ ಸ್ಪೆಲ್ಲಿಂಗ್ ಬೀ ಸ್ಪರ್ಧೆ

ಆಳ-ಅಗಲ
ಹಣಕಾಸು ಆರೋಗ್ಯ ಸೂಚ್ಯಂಕ ಕರ್ನಾಟಕದ ಸ್ಥಿತಿ ಹೇಗಿದೆ?

ಕಾಲ್ತುಳಿತ ದುರಂತ: ಪಿತೂರಿ ಕುರಿತು ತನಿಖೆ 9
'ರೂಪಾಯಿ ಮೌಲ್ಯ ಸ್ಥಿರ' 8
'ಹಗೆತನ ಅಭಿವೃದ್ಧಿಗೆ ಅಡ್ಡಿ' 5
'ಮತದಾನದ ಹಕ್ಕು ಕಸಿಯಲು ಸಂಚು' 9

ಮೈಕ್ರೊ ಫೈನಾನ್ಸ್ ಕಂಪನಿಯ ಸಾಲಗಾರರ ರಕ್ಷಣೆಗೆ 'ಸುಗ್ರೀವಾಜ್ಞೆ' ಕರಡು ಸಿದ್ಧ

ನೋಂದಣಿರಹಿತರ ಮೇಲೆ ಪ್ರಹಾರ

• ರಾಜೇಶ್ ರೈ ಚಟ್ಲ

ಬೆಂಗಳೂರು: ನೋಂದಣಿರಹಿತ ಮತ್ತು ಪರವಾನಗಿರಹಿತ ಮೈಕ್ರೊ ಫೈನಾನ್ಸ್ ಕಂಪನಿಗಳು, ಲೇವಾದೇವಿದಾರರು ನೀಡಿರುವ ಸಾಲದ ಅಸಲು ಹಾಗೂ ಬಡ್ಡಿಯ ಮೊತ್ತವನ್ನು ಸಾಲಗಾರರು ಮರುಪಾವತಿ ಮಾಡಬೇಕಿಲ್ಲ ಎಂಬ ನಿಯಮ ಜಾರಿಗೆ ತರಲು ರಾಜ್ಯ ಸರ್ಕಾರ ಮುಂದಾಗಿದೆ. ಈ ಅಂಶವನ್ನು ಮೈಕ್ರೊ ಫೈನಾನ್ಸ್ ಕಂಪನಿಗಳ ನಿಯಂತ್ರಣಕ್ಕೆ ಸಂಬಂಧಿಸಿದ ಸುಗ್ರೀವಾಜ್ಞೆ ಕರಡಿನಲ್ಲಿ ಸೇರಿಸಲಾಗಿದೆ.

ಮೈಕ್ರೊ ಫೈನಾನ್ಸ್ ಕಂಪನಿಗಳು ಮತ್ತು ಲೇವಾದೇವಿದಾರರು ನೀಡುತ್ತಿರುವ ಕಿರುಕುಳದಿಂದ ಸಾಲಗಾರರನ್ನು ರಕ್ಷಿಸುವ ಉದ್ದೇಶದಿಂದ 'ಕರ್ನಾಟಕ ಮೈಕ್ರೊ ಫೈನಾನ್ಸ್ (ಬಲವಂತದ ಕ್ರಮಗಳ ತಡೆ) ಸುಗ್ರೀವಾಜ್ಞೆ-2025' ಅನ್ನು ಹೊರಡಿಸಲು ರಾಜ್ಯ ಸರ್ಕಾರ ಪ್ರಕ್ರಿಯೆ ಆರಂಭಿಸಿದೆ. ಸುಗ್ರೀವಾಜ್ಞೆಯ ಕರಡನ್ನು ಭಾನುವಾರ ಅಂತಿಮಗೊಳಿಸಲಾಗಿದೆ.

8ನೇ ಪುಟ ನೋಡಿ

ಸುಗ್ರೀವಾಜ್ಞೆಯಲ್ಲಿ ಏನಿದೆ?

- ಎಲ್ಲ ಮೈಕ್ರೊ ಫೈನಾನ್ಸ್ ಕಂಪನಿಗಳು, ಲೇವಾದೇವಿದಾರ ಸಂಸ್ಥೆಗಳು ಸುಗ್ರೀವಾಜ್ಞೆ ಹೊರಡಿಸಿದ 30 ದಿನಗಳ ಒಳಗೆ ಆಯಾ ನೋಂದಣಿ ಪ್ರಾಧಿಕಾರದಲ್ಲಿ (ಜಿಲ್ಲಾಧಿಕಾರಿ) ನೋಂದಣಿ ಮಾಡಿಕೊಳ್ಳಬೇಕು
- ಸಾಲಗಾರರ ಸಂಪೂರ್ಣ ಮಾಹಿತಿ, ಸಾಲದ ಮೊತ್ತ, ಬಡ್ಡಿ ದರ, ವಸೂಲಿಗೆ ಬಾಕಿ, ಸಾಲ ಪಡೆಯುವಾಗ ಸಂಗ್ರಹಿಸಿದ ಲಿಖಿತ ಮುಚ್ಚಳಿಕೆ ನೀಡಬೇಕು
- ಸುಗ್ರೀವಾಜ್ಞೆ ಜಾರಿಯಾದ ಬಳಿಕ ಮೈಕ್ರೊ ಫೈನಾನ್ಸ್ ಕಂಪನಿ, ಲೇವಾ ದೇವಿದಾರರು ನೋಂದಣಿ ಮಾಡದೆ ಸಾಲ ವಹಿವಾಟು ಮಾಡುವಂತಿಲ್ಲ
- ನೋಂದಣಿ ಅವಧಿ ಒಂದು ವರ್ಷ ಮಾತ್ರ. ಅವಧಿ ಮುಗಿಯುವ 60 ದಿನಗಳ ಮೊದಲು ಮರು ನವೀಕರಣಕ್ಕೆ ಅರ್ಜಿ ಸಲ್ಲಿಸಬೇಕು. ಅರ್ಜಿ ಪರಿಶೀಲಿಸಿದ ಬಳಿಕ ಪ್ರಾಧಿಕಾರವು ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಿದೆ
- ದೂರು ಬಂದರೆ ಅಥವಾ ಸ್ವಯಂಪ್ರೇರಿತವಾಗಿ ನೋಂದಣಿ ರದ್ದು ಮಾಡುವ ಅಧಿಕಾರವು ಪ್ರಾಧಿಕಾರಕ್ಕೆ ಇರಲಿದೆ
- ಸುಗ್ರೀವಾಜ್ಞೆಯಲ್ಲಿರುವ ಯಾವುದೇ ನಿಯಮವನ್ನು ಉಲ್ಲಂಘಿಸಿದರೆ, ಪ್ರಾಧಿಕಾರವು ನೋಟಿಸ್ ನೀಡದೆ ನೋಂದಣಿಯನ್ನು ಅಮಾನತು ಅಥವಾ ರದ್ದು ಮಾಡಬಹುದು
- ಸಾಲ ನೀಡುವ ಮತ್ತು ವಸೂಲು ಮಾಡುವ ನಿಯಮಗಳನ್ನು ಅಧಿಸೂಚನೆ ಮೂಲಕ ಸರ್ಕಾರ ರೂಪಿಸಬಹುದು
- ಸಾಲಗಾರರಿಂದ ಭದ್ರತೆಯಾಗಿ ಯಾವುದೇ ವಸ್ತು ಅಥವಾ ಆಸ್ತಿ ಅಡಮಾನ ಇಟ್ಟುಕೊಳ್ಳಬಾರದು. ಅಡಮಾನ ಇಟ್ಟು ಕೊಂಡಿದ್ದರೆ ಅದನ್ನು ಸಾಲಗಾರರಿಗೆ ಹಿಂದಿರುಗಿಸಬೇಕು

ಯಾವುದಕ್ಕೆಲ್ಲ ನಿರ್ಬಂಧ?

- ಸಾಲಗಾರರು ಅಥವಾ ಅವರ ಕುಟುಂಬದ ಸದಸ್ಯರ ಮೇಲೆ ಒತ್ತಡ ಹೇರುವುದು, ಅವಮಾನಿಸುವುದು, ಅಡ್ಡಿಪಡಿಸುವುದು, ಹಿಂಸಿಸುವುದು
- ಸಾಲಗಾರರು ಅಥವಾ ಅವರ ಕುಟುಂಬದ ಸದಸ್ಯರನ್ನು ನಿರಂತರವಾಗಿ ಹಿಂಬಾಲಿಸುವುದು, ಅವರ ಸ್ವಾಧೀನ ದಲ್ಲಿರುವ ಸ್ವತ್ತುಗಳ ಬಳಕೆಗೆ ಅಡ್ಡಿಪಡಿಸುವುದು
- ಸಾಲಗಾರರು ಅಥವಾ ಅವರ ಕುಟುಂಬದವರು ವಾಸಿಸುವ, ಕೆಲಸ ಮಾಡುವ ಸ್ಥಳಕ್ಕೆ ನಿರಂತರವಾಗಿ ಭೇಟಿ ನೀಡಿ ಚಟುವಟಿಕೆಗಳಿಗೆ ಅಡ್ಡಿಪಡಿಸುವುದು
- ಬಲವಂತದಿಂದ ಸಾಲ ವಸೂಲಿ ಮಾಡಲು ಹೊರಗುತ್ತಿಗೆ ಸಿಬ್ಬಂದಿ ಬಳಕೆ, ಅಪರಾಧ ಹಿನ್ನೆಲೆಯ ವ್ಯಕ್ತಿಗಳನ್ನು ಬಳಸಿಕೊಳ್ಳುವುದು
- ಸಾಲಗಾರನು ಸರ್ಕಾರದಿಂದ ಯಾವುದೇ ಸೌಲಭ್ಯ ಪಡೆಯಲು ಅಗತ್ಯವಿರುವ ದಾಖಲೆಗಳನ್ನು ಸಾಲದಾತ ಅಥವಾ ಅವರ ಸಿಬ್ಬಂದಿ ಕಿತ್ತುಕೊಳ್ಳುವುದು

ದೂರು ಎಲ್ಲಿ ಸಲ್ಲಿಸಬಹುದು?

ಸಾಲದಾತರು ಕಿರುಕುಳ ನೀಡಿದರೆ ಸಾಲಗಾರರು ತಮ್ಮ ವ್ಯಾಪ್ತಿಯ ಪೊಲೀಸ್ ಠಾಣೆಗೆ ತೆರಳಿ ದೂರು ನೀಡಬಹುದು. ಪೊಲೀಸ್ ಅಧಿಕಾರಿಯು ಪ್ರಕರಣ ದಾಖಲಿಸಲು ನಿರಾಕರಿಸ ಬಾರದು. ಅಲ್ಲದೆ, ಡಿವೈಎಸ್‌ಪಿ ಶ್ರೇಣಿಗಿಂತ ಮೇಲಿನ ಪೊಲೀಸ್ ಅಧಿಕಾರಿಗಳಿಗೆ ಸ್ವಯಂಪ್ರೇರಿತ ವಾಗಿ ದೂರು ದಾಖಲಿಸಿಕೊಳ್ಳಲು ಕೂಡಾ ಅವಕಾಶ ನೀಡಲಾಗಿದೆ.

ಒಂಬುಡ್ಸ್‌ಮನ್ ನೇಮಕ: ಸಾಲದಾತ ಮತ್ತು ಸಾಲಗಾರನ ನಡುವಿನ ವಿವಾದಗಳನ್ನು ಇತ್ಯರ್ಥಪಡಿಸಲು ಮಧ್ಯವರ್ತಿ ಯಾಗಿ ರಾಜ್ಯ ಸರ್ಕಾರವು ಒಂಬುಡ್ಸ್‌ಮನ್ ನೇಮಕ ಮಾಡಲು ಕೂಡಾ ಅವಕಾಶವಿದೆ.

ಭಾರತ ತರುಣಿಯರಿಗೆ ವಿಶ್ವಕಪ್

ಕ್ವಾಲಾಲಂಪುರ (ಪಿಟಿಐ): ಬೆಂಗಳೂರಿನ ನಿಕಿ ಪ್ರಸಾದ್ ನಾಯಕತ್ವದ ಭಾರತ ಯೂತ್ ಮಹಿಳೆಯರ ತಂಡವು 19 ವರ್ಷದೊಳಗಿನ ಮಹಿಳಾ ಟಿ20 ಕ್ರಿಕೆಟ್ ವಿಶ್ವಕಪ್ ಜಯಿಸಿತು. ಸತತ ಎರಡನೇ ಬಾರಿ ಈ ಸಾಧನೆ ಮಾಡಿತು. ಭಾನುವಾರ ನಡೆದ ಫೈನಲ್‌ನಲ್ಲಿ ಭಾರತ ತಂಡವು ದಕ್ಷಿಣ ಆಫ್ರಿಕಾ ವಿರುದ್ಧ ಗೆದ್ದಿತು.

ಚಿತ್ರ: ಬಿಸಿಸಿಐ ಎಕ್ಸ್ ಖಾತೆಯಿಂದ

ಫೈನಲ್ ಸ್ಕೋರ್
ದ.ಆಫ್ರಿಕಾ **82** (20 ಓವರ್‌ಗಳಲ್ಲಿ)
ಭಾರತ 1 ವಿಕೆಟ್‌ಗೆ **84** (11.2 ಓವರ್‌ಗಳಲ್ಲಿ)

ಜಿ. ತ್ರಿಷಾ
15ಕ್ಕೆ3 ಹಾಗೂ ಅಜೇಯ 44 (33ಎ, 4x8)

ಫಲಿತಾಂಶ: ಭಾರತಕ್ಕೆ 9 ವಿಕೆಟ್ ಜಯ.

ಯತ್ನಾಳ ಬಣ ಇಂದು ದೆಹಲಿಗೆ

ಪ್ರಜಾವಾಣಿ ವಾರ್ತೆ

ಬಸನಗೌಡ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ಸಮರ ಸಾರಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಣ ಸೋಮವಾರ ದೆಹಲಿಗೆ ತೆರಳಲಿದ್ದು, ವರಿಷ್ಠರನ್ನು ಭೇಟಿ ಮಾಡುವ ಸಾಧ್ಯತೆ ಇದೆ.

ಯತ್ನಾಳ ಅಲ್ಲದೇ, ರಮೇಶ ಜಾರಕಿ ಹೊಳಿ, ಕುಮಾರ್ ಬಂಗಾರಪ್ಪ, ಬಿ.ಪಿ. ಹರೀಶ್, ಜಿ.ಎಂ.ಸಿದ್ದೇಶ್ವರ ಮತ್ತಿತರರು ದೆಹಲಿಗೆ ಹೋಗಲಿದ್ದಾರೆ. ದೆಹಲಿಯಲ್ಲಿ 3-4 ದಿನ ಇದ್ದು, ವರಿಷ್ಠರ ಭೇಟಿಗೆ ಅವಕಾಶ ಸಿಕ್ಕಿದ ತಕ್ಷಣ ಮಾತು ಕತೆ ನಡೆಸ ಲಿದ್ದಾರೆ ಎಂದು ಮೂಲಗಳು ಹೇಳಿವೆ.

ರಮೇಶ ಜಾರಕಿಹೊಳಿ, ಕುಮಾರ್ ಬಂಗಾರಪ್ಪ ಮತ್ತು ಇತರರು ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಚಾಮುಂಡೇಶ್ವರಿ ಭಾನುವಾರ ಬೆಳಿಗ್ಗೆ ದೇವಿಯ ದರ್ಶನ ಪಡೆದರು. ಮತ್ತೊಂದು ಸುತ್ತಿನ ಸಮಾ ಲೋಚನೆ ಬೆಂಗಳೂರಿನಲ್ಲಿ ನಡೆಯಿತು.

ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಯಾರನ್ನು ಕಣಕ್ಕೆ ಇಳಿಸಬೇಕು ಮತ್ತು ಇತರ ವಿಚಾರಗಳನ್ನು ದೆಹಲಿಯಲ್ಲೇ ಚರ್ಚಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

5ನೇ ಪುಟ ನೋಡಿ

ನನ್ನದು ಬಿಜೆಪಿ ಗುಂಪು: ಪ್ರಭು ಚವ್ಹಾಣ

ಕೂಡಲಸಂಗಮ (ಬಾಗಲಕೋಟೆ ಜಿಲ್ಲೆ): 'ನಾನು ವಿಜಯೇಂದ್ರ, ಯತ್ನಾಳ ಗುಂಪಿನವನಲ್ಲ. ನನ್ನದು ಬಿಜೆಪಿ ಗುಂಪು. ಆದರೆ ಎರಡೂ ಗುಂಪಿನ ಕಿತ್ತಾಟದಲ್ಲಿ ಕಾರ್ಯಕರ್ತರು ಗೊಂದಲ ಅನುಭವಿಸುತ್ತಿದ್ದಾರೆ. ವ್ಯಕ್ತಿಗಿಂತ ಪಕ್ಷ ಮುಖ್ಯ' ಎಂದು ಮಾಜಿ ಸಚಿವ ಪ್ರಭು ಚವ್ಹಾಣ ಹೇಳಿದರು.

ಕೂಡಲಸಂಗಮ ಬಸವ ಧರ್ಮ ಪೀಠದ ಗೋಶಾಲೆಗೆ ಭಾನುವಾರ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 'ವಿಜಯೇಂದ್ರ ರಾಜ್ಯ ಘಟಕದ ಅಧ್ಯಕ್ಷರಾಗಿ ಉತ್ತಮವಾಗಿ ಪಕ್ಷ ಸಂಘಟನೆ ಮಾಡಿದ್ದಾರೆ. ಯತ್ನಾಳರಿಗೂ ರಾಜ್ಯ ಘಟಕದ ಅಧ್ಯಕ್ಷ ರಾಗುವ ಅರ್ಹತೆ ಇದೆ. ಆದರೆ ಅಧಿಕ ಮಾತಿನಿಂದ ಎಲ್ಲವನ್ನೂ ಕಳೆದುಕೊಳ್ಳುತ್ತಿದ್ದಾರೆ' ಎಂದರು.

5ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

'ಎ++' ಗ್ರೇಡ್ ನೀಡಲು ಲಂಚ ಪಡೆದ ಆರೋಪ: ಸಿಬಿಐ ಕಾರ್ಯಾಚರಣೆ

ನ್ಯಾಕ್ ಪರಿಶೀಲನಾ ಸಮಿತಿ ಅಧ್ಯಕ್ಷ ಸೆರೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಮಂಡಳಿ (ನ್ಯಾಕ್) ಪರಿಶೀಲನಾ ಸಮಿತಿಯ ಅಧ್ಯಕ್ಷ, ಆರು ಸದಸ್ಯರು ಸೇರಿದಂತೆ 10 ಮಂದಿಯನ್ನು ಸಿಬಿಐ ಅಧಿಕಾರಿಗಳ ತಂಡವು ಭ್ರಷ್ಟಾಚಾರ ಪ್ರಕರಣದಲ್ಲಿ ಶನಿವಾರ ಬಂಧಿಸಿದೆ.

10 ಮಂದಿ ಬಂಧನ

ದಾವಣಗೆರೆ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಗಾಯತ್ರಿ ದೇವರಾಜ, ನವದೆಹಲಿಯ ಜವಾಹರಲಾಲ್ ನೆಹರೂ ವಿ.ವಿ (ಜೆಎನ್‌ಯು) ಪ್ರಾಧ್ಯಾಪಕ, ಆಂಧ್ರಪ್ರದೇಶದ ಗುಂಟೂರಿನಲ್ಲಿರುವ ಕೋನೇರು ಲಕ್ಷ್ಮಯ್ಯ ಎಜುಕೇಷನ್ ಫೌಂಡೇಷನ್‌ನ (ಕೆಎಲ್‌ಇಎಫ್) ಕುಲಪತಿ ಬಂಧಿತರಲ್ಲಿ ಸೇರಿದ್ದಾರೆ.

'ನ್ಯಾಕ್ ಎ++' ಗ್ರೇಡ್ ಪಡೆಯಲು ನ್ಯಾಕ್ ಪರಿಶೀಲನಾ ಸಮಿತಿಯ ಸದಸ್ಯರಿಗೆ ಲಂಚ ನೀಡಿದ ಆರೋಪದಲ್ಲಿ ಕೆಎಲ್ ಇಎಫ್ ಕುಲಪತಿ ಜಿ.ಪಿ.ಸಾರಥಿ ವರ್ಮಾ, ಉಪಾಧ್ಯಕ್ಷ ಕೋನೇರು ರಾಜಾ ಹರೀನ್, ಕೆ.ಎಲ್ ವಿಶ್ವವಿದ್ಯಾಲಯದ ಹೈದರಾಬಾದ್ ಕ್ಯಾಂಪಸ್‌ನ ನಿರ್ದೇಶಕ ಎ.ರಾಮಕೃಷ್ಣ ಅವರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

9ನೇ ಪುಟ ನೋಡಿ

20 ಸ್ಥಳಗಳಲ್ಲಿ ಶೋಧ

ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಅಧಿಕಾರಿಗಳ ತಂಡವು ದೇಶದ 20 ಸ್ಥಳಗಳಲ್ಲಿ ಶೋಧ ಕಾರ್ಯ ನಡೆಸಿದೆ. ಚೆನ್ನೈ, ಬೆಂಗಳೂರು, ವಿಜಯವಾಡ, ಪಲಾಮು, ಸಂಬಲ್‌ಪುರ, ಭೋಪಾಲ್, ಬಿಲಾಸಪುರ, ಗೌತಮ ಬುದ್ಧ ನಗರ ಮತ್ತು ನವದೆಹಲಿಯಲ್ಲಿ ಆರೋಪಿಗಳಿಗೆ ಸೇರಿದ ಸ್ಥಳಗಳಲ್ಲಿ ಶೋಧ ನಡೆದಿದೆ ಎಂದು ಸಿಬಿಐ ವಕ್ತಾರರು ತಿಳಿಸಿದ್ದಾರೆ.

'₹37 ಲಕ್ಷ ನಗದು, ಆರು ಲ್ಯಾಪ್‌ಟಾಪ್‌ಗಳು, ಒಂದು ಐಫೋನ್ ಮತ್ತು ಇತರ ಕೆಲವು ವಸ್ತುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಮಾಹಿತಿ ನೀಡಿದರು.

INVEST KARNATAKA

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಭವಿಷ್ಯದ ಪ್ರಗತಿಯನ್ನು ಒಟ್ಟಾಗಿ ರೂಪಿಸೋಣ

ಶ್ರೀ ಎಂ.ಬಿ. ಪಾಟೀಲ
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯರವರೊಡನೆ ಸಂವಾದ ನಡೆಸುತ್ತಿರುವುದು

ಸಮರ್ಥ, ಸಮಗ್ರ, ಸದೃಢ ಹಾಗೂ ತಂತ್ರಜ್ಞಾನ ಆಧಾರಿತ ಭವಿಷ್ಯವನ್ನು ಮರುಕಲ್ಪಿಸುವ ಸಲುವಾಗಿ ಜಾಗತಿಕ ಕೈಗಾರಿಕಾ ಪ್ರವರ್ತಕರೆಲ್ಲರೂ ಇನ್ವೆಸ್ಟ್ ಕರ್ನಾಟಕ 2025 ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದು, ಈ ಸಮಾವೇಶದಲ್ಲಿ ನೀವೂ ಭಾಗವಹಿಸಿ ಹೊಸ ಅವಕಾಶಗಳು ಮತ್ತು ಜಾಗತಿಕ ಪಾಲುದಾರಿಕೆಗಳನ್ನು ಬೆಳೆಸಿಕೊಳ್ಳುವುದರೊಂದಿಗೆ ಕರ್ನಾಟಕದ ಪರಿವರ್ತನಾತ್ಮಕ ಪ್ರಗತಿಯಲ್ಲಿ ಭಾಗಿಯಾಗಿ.

ಪ್ರಗತಿಯ ಮರುಕಲ್ಪನೆ

ಇನ್ವೆಸ್ಟ್ ಕರ್ನಾಟಕ 2025 | ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ | ಬೆಂಗಳೂರು ಅರಮನೆ ಬೆಂಗಳೂರು 12 ರಿಂದ 14 ಫೆಬ್ರವರಿ 2025

ಉದ್ಘಾಟನೆ: 11 ಫೆಬ್ರವರಿ 2025, ಸಂಜೆ 4 ಗಂಟೆಗೆ

ಇಲ್ಲಿ ನೋಂದಾಯಿಸಿಕೊಳ್ಳಿ

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು.
– ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಗುಂಜನ್ ಕೃಷ್ಣ, ಭಾ.ಆ.ಸೇ
ಕೈಗಾರಿಕಾಭಿವೃದ್ಧಿ ಆಯುಕ್ತರು ಮತ್ತು ನಿರ್ದೇಶಕರು
ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ
ಕರ್ನಾಟಕ ಸರ್ಕಾರ

ಡಾ. ಎಸ್. ಸೆಲ್ವಕುಮಾರ್, ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
ಕರ್ನಾಟಕ ಸರ್ಕಾರ

ಸಂಘಟನೆ
ಸಂಸ್ಕಾರ
ಶಿಕ್ಷಣ
ಶ್ರೀ ಸೋಮೇಶ್ವರಸ್ವಾಮೀಜಿ
ಮಹಾಪುರ ಗುರುಪೀಠ
ಶ್ರೀ ಹುಲಜಂತಿ ಮಾಳಿಂಗರಾಯರು
ಶ್ರೀ ಮಾಧುಲಿಂಗ ಮಹಾರಾಜರು
ಸಿದ್ದಗೊಂಡ ಆಶ್ರಮ, ಜಿಕನೂರು
ಶ್ರೀ ಅಮರೇಶ್ವರ ಸ್ವಾಮೀಜಿ
ಸಿದ್ಧಶ್ರೀ ಆಶ್ರಮ, ಕವಲಗುಡ್ಡ
ಶ್ರೀ ಕೆಂಚರಾಯ ಪೂಜಾರಿಗಳು
ಸುರಪುರ
ಶ್ರೀ ಮಹಾವೀರ ಪ್ರಭು ಸ್ವಾಮೀಜಿ
ಶ್ರೀ ಅಲಮಪ್ರಭು ಮಠ
ಲಕ್ಷ್ಮಣ್ ಮುತ್ಯ
ಪೂಜ್ಯ ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ
ಸಿದ್ಧಗಿರಿ ಮಠ ಕನೇರಿ, ಕೊಲ್ಹಾಪುರ
ಪೂಜ್ಯ ಶ್ರೀ ಸಿದ್ದರಾಮಾನಂದಪುರಿ ಸ್ವಾಮೀಜಿ
ಕಾಗಿನೆಲೆ ಮಹಾಸಂಸ್ಥಾನ, ಕನಕಗುರು ಪೀಠ,
ತಿಂಥಣಿ ಶಾಖಾ ಮಠ
ಕ್ರಾಂತಿವೀರ ಬ್ರಿಗೇಡ್
ಕರ್ನಾಟಕ
ಕೇಂದ್ರ ಕಾರ್ಯಾಲಯ, ಬೆಂಗಳೂರು
ವಿಭಾಗೀಯ ಕಾರ್ಯಾಲಯ, ವಿಜಯಪುರ
ಉದ್ಘಾಟನಾ ಸಮಾರಂಭ
ದಿನಾಂಕ: 04–02–2025ರ ಮಂಗಳವಾರ ಬೆಳಗ್ಗೆ 11.00ಕ್ಕೆ
ಸ್ಥಳ: ಬಸವನ ಬಾಗೇವಾಡಿ, ವಿಜಯಪುರ ಜಿಲ್ಲೆ
ಶ್ರೀ ಜಗದೀಶ್ ಆನಂದ್ ಸ್ವಾಮೀಜಿ
ವರ್ಚಗಲ್ ಮಠ, ಲೋಕಾಪುರ
ಕ್ರಾಂತಿವೀರ ಬ್ರಿಗೇಡಿನ ರಾಜ್ಯ ಮುಖಂಡರುಗಳು :
ನಮ್ಮಕ್ರಾಂತಿ ವೀರ ಬ್ರಿಗೇಡಿನ
ಪ್ರಮುಖ ಉದ್ದೇಶಗಳು
ನಮ್ಮ ನಾಡಿನ ಶ್ರದ್ಧಾ ಕೇಂದ್ರಗಳಾದ ಮಠ-ಮಂದಿರಗಳ ರಕ್ಷಣೆ ಹಾಗೂ ಅಭಿವೃದ್ಧಿಗೊಳಿಸುವುದು
ನಮ್ಮ ಹಿಂದೂಧರ್ಮದ ಸರ್ವಸಮಾಜದ ಪೂಜ್ಯಸ್ವಾಮೀಜಿಗಳನ್ನು ಗೌರವಿಸುವುದು.
ಹಿಂದುಳಿದ ಮತ್ತು ಶೋಷಿತ ಸಮಾಜದ ಸಮಾಜಿಕ ಸಮಾನತೆಗೆ ಶ್ರಮಿಸುವುದು
ಈ ಸಮುದಾಯಗಳ ಆರ್ಥಿಕ ಮತ್ತು ಶೈಕ್ಷಣಿಕ ಪ್ರಗತಿಗೆ ಸಹಾಯ-ಸಹಕಾರ ನೀಡುವುದು
ಈ ಸಮುದಾಯಗಳ ಸಂಘಟನೆ ಹಾಗೂ ಸಂಸ್ಕಾರ ನೀಡಲು ಪ್ರ.ಶಿಕ್ಷಣ ಶಿಬಿರಗಳನ್ನು ಆಯೋಜಿಸುವುದು
ಸರ್ವರಿಗೂ ಆದರದ ಸ್ವಾಗತ
ಬನ್ನಿ.. ಭಾಗವಹಿಸಿ...
ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ...
ಶ್ರೀ ಕೆ. ಈ. ಕಾಂತೇಶ್
ಕಾರ್ಯಾಧ್ಯಕ್ಷರು
ಶ್ರೀ ಕೆ.ಎಸ್. ಈಶ್ವರಪ್ಪರವರು
ಮಾಜಿ. ಉಪ ಮುಖ್ಯಮಂತ್ರಿಗಳು
ರಾಜ್ಯ ಸಂಚಾಲಕರು
ಶ್ರೀ ಕೆ. ಮುಕುಡಪ್ಪ
ರಾಜ್ಯ ಸಂಚಾಲಕರು
ಶ್ರೀ ಗೂಳಿಹಟ್ಟಿ ಶೇಖರ್
ಮಾಜಿ.ಸಚಿವರು
ರಾಜ್ಯ ಸಂಚಾಲಕರು
ಶ್ರೀಮತಿ ಶಿಲ್ಪ ಕುದರಗೊಂಡ
ರಾಜ್ಯಾಧ್ಯಕ್ಷರು, ಮಹಿಳಾ ಘಟಕ
ಶ್ರೀ ಎಂಜೇರಪ್ಪ
ರಾಜ್ಯ ಸಂಚಾಲಕರು
ಶ್ರೀ ಬಸವರಾಜ ಬಾಳಿಕಾಯಿ
ರಾಜ್ಯಾಧ್ಯಕ್ಷರು

‘ಯುಜಿಸಿ ತಿದ್ದುಪಡಿ ತಿರಸ್ಕರಿಸಿ’

‘ಜಾಗೃತ ನಾಗರಿಕರು ಕರ್ನಾಟಕ ವೇದಿಕೆ’ ಒತ್ತಾಯ

ಪ್ರಜಾವಾಣಿ ವಾರ್ತೆ

ಜಾಗೃತ ನಾಗರಿಕರು ಕರ್ನಾಟಕ ವೇದಿಕೆಯು ಗಾಂಧಿಭವನದಲ್ಲಿ ಭಾನುವಾರ ಆಯೋಜಿಸಿದ್ದ ಯುಜಿಸಿ ನಿಯಮಾವಳಿಗೆ ತಿದ್ದುಪಡಿಗಳ ಕುರಿತು ಸಮಾಲೋಚನಾ ಸಭೆ ನಡೆಯಿತು ಪ್ರಜಾವಾಣಿ ಚಿತ್ರ

ಬೆಂಗಳೂರು: ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ನಿಯಮಾವಳಿಗಳಿಗೆ ತರಲು ಹೊರಟಿರುವ ತಿದ್ದುಪಡಿಯು ಪ್ರತಿಗಾಮಿತನದಿಂದ ಕೂಡಿದೆ. ಈ ತಿದ್ದುಪಡಿಗಳನ್ನು ರಾಜ್ಯ ಸರ್ಕಾರವು ಸಾರಾಸಗಟಾಗಿ ತಿರಸ್ಕರಿಸಬೇಕು ಎಂದು ‘ಜಾಗೃತ ನಾಗರಿಕರು ಕರ್ನಾಟಕ ವೇದಿಕೆ’ ಒತ್ತಾಯಿಸಿದೆ.

ಯುಜಿಸಿ ನಿಯಮಾವಳಿಗಳ ತಿದ್ದುಪಡಿ ಕುರಿತು ಚರ್ಚಿಸಲು ನಗರದ ಗಾಂಧಿ ಭವನದಲ್ಲಿ ವೇದಿಕೆಯು ಭಾನುವಾರ ಆಯೋಜಿಸಿದ್ದ ಸಮಾಲೋಚನಾ ಸಭೆಯಲ್ಲಿ, ತಿದ್ದುಪಡಿಗಳ ಕುರಿತು ಆತಂಕ ವ್ಯಕ್ತವಾಯಿತು.

ಸಾಹಿತಿಗಳಾದ ಪ್ರೊ.ಎಸ್.ಜಿ. ಸಿದ್ದರಾಮಯ್ಯ, ಜಿ.ರಾಮಕೃಷ್ಣ, ನಿರಂಜನಾರಾಧ್ಯ, ಕೆ.ಎಸ್.ವಿಮಲಾ, ಸಬೀಹಾ ಭೂಮಿಗೌಡ, ಮೀನಾಕ್ಷಿ ಬಾಳಿ, ಎಂ.ಎಸ್.ಆಶಾದೇವಿ, ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಸೇರಿ ಹಲವರು ಸಂವಾದದಲ್ಲಿ ಭಾಗಿಯಾಗಿ, ನೂತನ ನಿಯಮಗಳಲ್ಲಿ ಇರುವ ಅಂಶಗಳ ಪ್ರಸ್ತಾಪಿಸಿದರು.

‘ಕೇಂದ್ರ ಸರ್ಕಾರವು 2020ರಲ್ಲಿ ನೂತನ ಶಿಕ್ಷಣ ನೀತಿಯನ್ನು (ಎನ್‌ಇಪಿ) ಜಾರಿಗೆ ತಂದಿತ್ತು. ಅದನ್ನು ಹತ್ತಾರು ರಾಜ್ಯಗಳು ತಿರಸ್ಕರಿಸಿದ್ದವು. ಹೀಗಾಗಿ ಅದೇ ನಿಯಮಗಳನ್ನು ಹಿಂಬಾಗಿಲಿನ ಮೂಲಕ ಜಾರಿಗೆ ತರಲು ಯುಜಿಸಿ ನಿಯಮಗಳಿಗೆ ತಿದ್ದುಪಡಿ ತಂದಿದೆ. ಶಿಕ್ಷಣ ಕ್ಷೇತ್ರದಲ್ಲಿ ರಾಜ್ಯಗಳ ಅಧಿಕಾರವನ್ನು ಕಸಿದುಕೊಳ್ಳಲು ಈ ಮೂಲಕ ಸಂಚು ನಡೆಸಿದೆ’ ಎಂಬ ಅಭಿಪ್ರಾಯ ಸಂವಾದದಲ್ಲಿ ವ್ಯಕ್ತವಾಯಿತು.

‘ತಿದ್ದುಪಡಿ ನಿಯಮಗಳು ಕೋಮುವಾದ, ಕಾರ್ಪೊರೇಟ್ ಸಿದ್ಧಾಂತಗಳ ತದ್ರೂಪದಂತಿದೆ. ಶಿಕ್ಷಣ ಕ್ಷೇತ್ರಕ್ಕೆ ಸಂಬಂಧವೇ ಇಲ್ಲದ ಕಾರ್ಪೊರೇಟ್ ದೈತ್ಯರಿಗೆ ಹೆಚ್ಚಿನ ಹಿಡಿತ ಕೊಡುತ್ತವೆ. ಒಟ್ಟಾರೆಯಾಗಿ ದೇಶದ ಸಾಮಾಜಿಕ ನ್ಯಾಯ ಪರಿಕಲ್ಪನೆ, ವ್ಯವಸ್ಥೆಯನ್ನು ಬುಡಮೇಲು ಮಾಡುವ ಹುನ್ನಾರದ ಭಾಗ ಇದು’ ಎಂಬ ಆತಂಕ ವ್ಯಕ್ತವಾಯಿತು.

‘ಈ ತಿದ್ದುಪಡಿ ನಿಯಮಗಳನ್ನು ತಿರಸ್ಕರಿಸಬೇಕು. ಮತ್ತು ಈ ಸಂಬಂಧ ವಿಸ್ತೃತ ವರದಿಯನ್ನು ಸಿದ್ಧಪಡಿಸಿ, ರಾಜ್ಯ ಸರ್ಕಾರಕ್ಕೆ ಅದನ್ನು ಸಲ್ಲಿಸಬೇಕೆಂಬ ನಿರ್ಣಯ ಕೈಗೊಳ್ಳಲಾಗಿದೆ’ ಎಂದು ವೇದಿಕೆಯ ಮೀನಾಕ್ಷಿ ಬಾಳಿ ಹೇಳಿದರು.

ಯುಜಿಸಿ ಕರಡು: ಉದ್ಯಮಿಗಳು ಕುಲಪತಿಯಾಗಲು ವಿರೋಧ

ಪ್ರಜಾವಾಣಿ ವಾರ್ತೆ

ದುಂಡು ಮೇಜಿನ ಸಭೆ

ಬೆಂಗಳೂರು: ಯುಜಿಸಿ ಕರಡು–2025ರಲ್ಲಿರುವ ‘ಕೈಗಾರಿಕಾ ಕ್ಷೇತ್ರದಲ್ಲಿ 10 ವರ್ಷ ಅನುಭವವುಳ್ಳವರು ಕುಲಪತಿ ಆಗಬಹುದು’ ಎಂಬ ನಿಯಮ ಸೇರಿದಂತೆ ಅನೇಕ ಶಿಕ್ಷಣ ವಿರೋಧಿ, ಜನವಿರೋಧಿ ನೀತಿಗಳಿವೆ ಎಂದು ವಿವಿಧ ಶಿಕ್ಷಣ ತಜ್ಞರು ವಿರೋಧಿಸಿದರು.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ (ಎಐಎಸ್‌ಇಸಿ) ಶನಿವಾರ ಹಮ್ಮಿಕೊಂಡಿದ್ದ ‘ವಿಶ್ವವಿದ್ಯಾಲಯದ ಸ್ವಾಯತ್ತತೆಯನ್ನು ಹಿಂಪಡೆಯೋಣ’ ದುಂಡುಮೇಜಿನ ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು.

ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ಸಾರ್ವಜನಿಕ ಸಮಾಲೋಚನೆಗೆ ಹೊಸ ಕರಡನ್ನು ಬಿಡುಗಡೆ ಮಾಡಿದೆ. ಫೆ.5ರ ಒಳಗೆ ಸಲಹೆ, ಸೂಚನೆಗಳನ್ನು ನೀಡಲು ಅವಕಾಶ ನೀಡಿದೆ. ಹೀಗಾಗಿ, ದುಂಡು ಮೇಜಿನ ಸಭೆ ಹಮ್ಮಿಕೊಳ್ಳಲಾಗಿತ್ತು.

ಕುಲಾಧಿಪತಿಗೆ ಸರ್ವ ಅಧಿಕಾರವನ್ನು ನೀಡಲಾಗಿದೆ. ಸರ್ಕಾರಿ ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದಂತೆ ರಾಜ್ಯಪಾಲರಿಗೆ ಇದರಿಂದ ಹೆಚ್ಚಿನ ಅಧಿಕಾರ ಬರುವುದು ಒಂದು ಕಡೆಯಾದರೆ, ಖಾಸಗಿ ವಿಶ್ವವಿದ್ಯಾಲಯಗಳಿಗೆ ರಾಜ್ಯಪಾಲರು ಕುಲಾಧಿಪತಿ ಆಗಿರುವುದಿಲ್ಲ. ಅದನ್ನು ನಿಯಂತ್ರಿಸುವವರೇ ಇಲ್ಲದಾಗುತ್ತದೆ ಎಂಬ ಆತಂಕವು ವ್ಯಕ್ತವಾಯಿತು.

ಅಧ್ಯಾಪಕರ ನೇಮಕಾತಿಗೆ ನಿಗದಿ ಪಡಿಸಿದ ಅರ್ಹತೆಗಳೂ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿಗೊಳಿಸುವ ಒತ್ತಡದ ಭಾಗವಾಗಿವೆ. ಎನ್‌ಇಪಿಯಲ್ಲಿ ನ್ಯಾಷನಲ್ ಕ್ರೆಡಿಟ್ ಫ್ರೇಂವರ್ಕ್ ನಿಗದಿ ಪಡಿಸಿರುವುದು ಇದಕ್ಕೆ ಸಾಕ್ಷಿ. ಎನ್‌ಇಪಿ ಅಳವಡಿಸದ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ಮಾಡಿದವರಿಗೆ ಮಾನ್ಯತೆ ಇಲ್ಲದಂತೆ ಮಾಡುವ ಹುನ್ನಾರ ಇದು ಎಂದು ತಜ್ಞರು ಅಸಮಾಧಾನ ವ್ಯಕ್ತಪಡಿಸಿದರು.

ಪ್ರಾದೇಶಿಕ ಭಾಷೆಗೆ ಮಾನ್ಯತೆ ಇಲ್ಲ, ರಾಜ್ಯ ಸರ್ಕಾರಕ್ಕೆ ಪ್ರಾತಿನಿಧ್ಯ ಇಲ್ಲ. 3000ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿದ್ದರೆ ಮಾನ್ಯತೆ ಇಲ್ಲ. ಈ ಎಲ್ಲವೂ ಶಿಕ್ಷಣ ತಜ್ಞರು ರೂಪಿಸಿದ ಕರಡಿನಂತೆ ಕಾಣುತ್ತಿಲ್ಲ. ಇದು ರಾಜಕೀಯ ಕರಡು. ಶಿಕ್ಷಣ ವ್ಯವಸ್ಥೆಯನ್ನು ಪೂರ್ಣವಾಗಿ ಕೇಂದ್ರ ಸರ್ಕಾರ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಮಾಡಿದ ಕರಡು ಇದು. ಇದು ಜಾರಿಯಾದರೆ, ಅನೇಕ ವಿಶ್ವವಿದ್ಯಾಲಯಗಳು ಮುಚ್ಚಿ ಹೋಗಲಿವೆ ಎಂದು ಎಚ್ಚರಿಸಿದರು.

ದುರ್ಬಲ ವರ್ಗದವರು, ಮಹಿಳೆ, ಗ್ರಾಮೀಣ, ಹಿಂದುಳಿದ ವರ್ಗಗಳ, ಅಂಗವಿಕಲರನ್ನು ಶಿಕ್ಷಣದಿಂದ ವಂಚಿತರನ್ನಾಗಿಸಲು ಅಪ್ರಜಾತಾಂತ್ರಿಕ ಕ್ರಮದಲ್ಲಿ ಕರಡು ರೂಪಿಸಲಾಗಿದೆ. ವಿದ್ಯಾರ್ಥಿಗಳು, ಅಧ್ಯಾಪಕರು ಮಾತ್ರವಲ್ಲ ರಾಜ್ಯ ಸರ್ಕಾರ ಕೂಡ ಎಚ್ಚೆತ್ತುಕೊಂಡು ಇದರ ವಿರುದ್ಧ ಹೋರಾಟ ಮಾಡಬೇಕು ಎಂದು ಒತ್ತಾಯಿಸಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಎ.ಮುರಿಗೆಪ್ಪ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಮಾಜಿ ಕುಲಪತಿಗಳ ವೇದಿಕೆಯ ಅಧ್ಯಕ್ಷ ಡಾ.ಎಸ್. ಚಂದ್ರಶೇಖರ ಶೆಟ್ಟಿ, ಎಐಎಸ್‌ಇಸಿ ಅಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು, ನಿವೃತ್ತ ಕುಲಪತಿ ಎ.ಎಚ್. ರಾಜಾಸಾಬ್, ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯದ ಕುಲಪತಿ ವಿಕ್ಟರ್ ಲೋಬೊ, ನಿವೃತ್ತ ಕುಲಪತಿ ಟಿ.ಡಿ. ಕೆಂಪರಾಜ್, ಪ್ರಾಧ್ಯಾಪಕರಾದ ಎಂ.ಎಸ್. ಆಶಾದೇವಿ, ಎಲ್.ಜಿ. ಮೀರಾ, ಮಾಜಿ ಪ್ರಧಾನ ವಿಜ್ಞಾನಿ ಆರ್.ಎಲ್. ಮೌರ್ಯನ್, ಎಐಎಸ್‌ಇಸಿ ಉಪಾಧ್ಯಕ್ಷ ರಾಜಶೇಖರ್ ವಿ.ಎನ್., ಎಐಸಿಯುಟಿಎ ಅಧ್ಯಕ್ಷೆ ಸುನೀತಾ ಭಾಗವಹಿಸಿದ್ದರು.

ಕಸಗುಡಿಸುವ 20 ಯಂತ್ರಗಳಿಗೆ ಏಳು ವರ್ಷಕ್ಕೆ ವ್ಯಯವಾಗಲಿದೆ ₹764 ಕೋಟಿ

ಬಿಬಿಎಂಪಿ: ದುಬಾರಿ ಯಂತ್ರ ಬಾಡಿಗೆಗೆ

• ನವೀನ್ ಮಿನೇಜಸ್

ಮುಖ್ಯಾಂಶಗಳು

- ಪ್ರಸ್ತುತ 26 ಯಂತ್ರಗಳು ಬಳಕೆಯಲ್ಲಿ
- ವಿದೇಶದ ಯಂತ್ರಗಳಿಂದ ಆರ್ಥಿಕ ಹೊರೆ: ಜನರ ಅಸಮಾಧಾನ
- ಆರ್ಥಿಕ ಮಿತವ್ಯಯಕ್ಕೆ ಪೂರಕ: ಬಿಬಿಎಂಪಿ ಮುಖ್ಯ ಆಯುಕ್ತರ ಸಮರ್ಥನೆ

ಬೆಂಗಳೂರು: ದುಬಾರಿ ಬೆಲೆಯ 20 ಕಸ ಗುಡಿಸುವ (ಮೆಕ್ಯಾನಿಕಲ್ ಸ್ವೀಪಿಂಗ್) ಯಂತ್ರಗಳನ್ನು ವಿದೇಶದಿಂದ ಬಾಡಿಗೆಗೆ ಪಡೆಯಲು ಬಿಬಿಎಂಪಿ ಮುಂದಾಗಿದೆ. ಅದಕ್ಕಾಗಿ ಮುಂದಿನ ಏಳು ವರ್ಷಕ್ಕೆ ₹764 ಕೋಟಿ ವ್ಯಯಿಸಲು ನಿರ್ಧರಿಸಿದೆ.

ಈ ಯಂತ್ರಗಳ ಮೂಲಕ ಕಸ ಗುಡಿಸಲು ಪ್ರತಿ ಕಿ.ಮೀ.ಗೆ ಅಂದಾಜು ₹1,000 ಬಾಡಿಗೆ ದರ ನಿಗದಿಪಡಿಸಬಹುದು ಎಂದು ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವ ಸಲ್ಲಿಸಿರುವ ಆರ್‌ಐಟಿಇಎಸ್ ಲಿಮಿಟೆಡ್ ಸಂಸ್ಥೆ ತಿಳಿಸಿದೆ.

ರಸ್ತೆಗಳನ್ನು ದೂಳಿನಿಂದ ಮುಕ್ತಗೊಳಿಸಲು 2024-25ರ ಬಜೆಟ್‌ನಲ್ಲಿ ಬಿಬಿಎಂಪಿಯು ‘ಬ್ರ್ಯಾಂಡ್ ಬೆಂಗಳೂರು’ ಕಾರ್ಯಕ್ರಮದ ಅಡಿಯಲ್ಲಿ ಮೆಕ್ಯಾನಿಕಲ್ ಸ್ವೀಪಿಂಗ್ ಯಂತ್ರಗಳ ಖರೀದಿಗೆ ₹30 ಕೋಟಿ ಮೀಸಲಿಟ್ಟಿತ್ತು. ಇದು ಮುಂದಿನ ಆರ್ಥಿಕ ವರ್ಷದಲ್ಲಿ ದುಪ್ಪಟ್ಟಾಗಲಿದೆ ಎಂದು ಬಿಬಿಎಂಪಿ ಅಂದಾಜಿಸಿದೆ. ಮೆಕ್ಯಾನಿಕಲ್ ಸ್ವೀಪಿಂಗ್ ಯಂತ್ರಕ್ಕಾಗಿ ಮೊದಲ ಎರಡು ವರ್ಷ ₹60 ಕೋಟಿ ವ್ಯಯವಾಗುತ್ತದೆ. ಆನಂತರದ ಐದು ವರ್ಷಗಳಲ್ಲಿ ಈ ವೆಚ್ಚ ಪ್ರತಿ ವರ್ಷ ಮೂರು ಪಟ್ಟು ಹೆಚ್ಚಾಗಲಿದೆ ಎಂದು ಅಂದಾಜು ಮಾಡಲಾಗಿದೆ.

2017-18ನೇ ಸಾಲಿನಲ್ಲಿ ಖರೀದಿಸಿದ್ದ 26 ಯಂತ್ರಗಳು ಪ್ರಸ್ತುತ ಬಳಕೆಯಲ್ಲಿವೆ. ಹೊಸ ಯಂತ್ರಗಳನ್ನು ಖರೀದಿಸಲು ಪೌರಕಾರ್ಮಿಕರು ಪ್ರಸ್ತಾವ ಮುಂದಿಟ್ಟಿದ್ದರು. ಪ್ರತಿ ಯಂತ್ರಕ್ಕೆ ₹1.8 ಕೋಟಿ ನೀಡಬೇಕಿದ್ದು, ಪ್ರತಿ ತಿಂಗಳ ಅಂದಾಜು ವೆಚ್ಚ ₹6 ಲಕ್ಷ ವ್ಯಯವಾಗುತ್ತದೆ. ಈ ಯಂತ್ರಗಳು ಭಾರತದಲ್ಲಿಯೇ ತಯಾರಾಗುವಂಥವು. ವೆಚ್ಚವೂ ಕಡಿಮೆಯಾಗಿದೆ. ಆಮದು ಮಾಡಿಕೊಳ್ಳಲು ನಿರ್ಧರಿಸಿರುವ ಯಂತ್ರಗಳ ವೆಚ್ಚವು ಭಾರತದ ಯಂತ್ರಗಳಿಗಿಂತ ಹಲವಾರು ಪಟ್ಟು ಅಧಿಕವಾಗಿದೆ. ಈ ಆರ್ಥಿಕ ಹೊರೆಯನ್ನು ನಿಭಾಯಿಸಲು ಬಿಬಿಎಂಪಿಗೆ ಕಷ್ಟ ಆಗಬಹುದು ಎಂದು ಸಾರ್ವಜನಿಕರು ಪ್ರತಿಕ್ರಿಯಿಸಿದ್ದಾರೆ.

ರಸ್ತೆಗಳನ್ನು ಗುಡಿಸಲು 17 ಸಾವಿರ ಉದ್ಯೋಗಿಗಳಿದ್ದಾರೆ. ಅವರನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ. ಅಲ್ಲದೇ ವಿದೇಶಿ ಯಂತ್ರಗಳು ಭಾರತದ ರಸ್ತೆಗಳಲ್ಲಿ ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ಪ್ರಾಯೋಗಿಕವಾಗಿ ಪರೀಕ್ಷೆ ಮಾಡದೇ ಆಮದು ಮಾಡಿಕೊಳ್ಳಲು ಮುಂದಾಗುವ ಅಗತ್ಯ ಇರಲಿಲ್ಲ. ಇದು ಮೇಕ್ ಇನ್ ಇಂಡಿಯಾಕ್ಕೆ ವಿರುದ್ಧವಾದ ಕ್ರಮ ಎಂದು ತಜ್ಞರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಇದು ಆರ್ಥಿಕ ಮಿತವ್ಯಯಕ್ಕೆ ಪೂರಕವಾದ ಕ್ರಮ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಈ ಪ್ರಸ್ತಾವವನ್ನು ಸಮರ್ಥಿಸಿಕೊಂಡಿದ್ದಾರೆ.

‘ರೈಟ್ಸ್ ಲಿಮಿಟೆಡ್ ಮತ್ತು ಬೋಸ್ಟನ್ ಕನ್ಸಲ್ಟಿಂಗ್ ಗ್ರೂಪ್‌ನಂತಹ ಎರಡು ಸಲಹಾ ಸಂಸ್ಥೆಗಳಿಂದ ಬೆಲೆ ಕುರಿತು ಅಧ್ಯಯನ ಮಾಡಲಾಗಿದೆ. ಪ್ರಮುಖ ರಸ್ತೆಗಳನ್ನು ದೂಳು ಮುಕ್ತ ಮಾಡಲು ಮೆಕ್ಯಾನಿಕಲ್ ಸ್ವೀಪಿಂಗ್ ಯಂತ್ರಗಳ ಅಗತ್ಯವಿದೆ’ ಎಂದು ತಿಳಿಸಿದರು.

‘ದೂಳು ಗುಡಿಸಲು ₹764 ಕೋಟಿ ವೆಚ್ಚ ಮಾಡುವ ಅಗತ್ಯವಿದೆಯೇ’ ಎಂದು ಸಮಾಜಸೇವಕ ವಿ. ರಾಮಪ್ರಸಾದ್ ಅಚ್ಚರಿ ವ್ಯಕ್ತಪಡಿಸಿದರು.

ಪ್ರಾಯೋಗಿಕ ಅಧ್ಯಯನ ಎಲ್ಲಿ ನಡೆದಿದೆ? ಈ ವೆಚ್ಚವನ್ನು ಸರಿ ಹೊಂದಿಸಲು ಪೌರಕಾರ್ಮಿಕರ ಸಂಖ್ಯೆಯನ್ನು ಕಡಿಮೆಗೊಳಿಸುವ ಯೋಜನೆ ಏನಾದರೂ ಇದೆಯೇ ಎಂದು ಪ್ರಶ್ನಿಸಿದರು.

‘ಭವಿಷ್ಯ ಹೇಳುವುದನ್ನು ಅಶೋಕ ಯಾವಾಗ ಕಲಿತರೊ ಗೊತ್ತಿಲ್ಲ’

ಪ್ರಜಾವಾಣಿ ವಾರ್ತೆ

ಪರಮೇಶ್ವರ

ಬೆಂಗಳೂರು: ‘ವಿಪಕ್ಷ ನಾಯಕ ಅಶೋಕ ಅವರು ಯಾವಾಗ ಭವಿಷ್ಯ ಹೇಳುವುದನ್ನು ಕಲಿತರೊ ಗೊತ್ತಿಲ್ಲ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

‘ಸಿದ್ದರಾಮಯ್ಯ ಅವರ ಮುಖ್ಯಮಂತ್ರಿ ಅವಧಿ ನವೆಂಬರ್‌ನಲ್ಲಿ ಮುಕ್ತಾಯವಾಗಲಿದೆ’ ಎಂಬ ಆರ್. ಅಶೋಕ ಹೇಳಿಕೆಗೆ ಪ್ರತಿಕ್ರಿಯಿಸಿದ ಪರಮೇಶ್ವರ, ‘ಅಂಥ ಯಾವುದೇ ಬೆಳವಣಿಗೆ ನಡೆದಿಲ್ಲ’ ಎಂದರು.

‘ಶಾಸಕಾಂಗ ಪಕ್ಷದ ಸಭೆಯಲ್ಲಿ ಅವರು ಆಯ್ಕೆಯಾದಾಗ, ಮುಖ್ಯಮಂತ್ರಿಯಾಗಿ ಎರಡೂವರೆ ವರ್ಷ ಮಾತ್ರ ಇರುತ್ತಾರೆ ಎಂದು ನಮಗೇನೂ ಹೈಕಮಾಂಡ್ ಹೇಳಿಲ್ಲ. ಹೀಗಾಗಿ ನಾವೆಲ್ಲರೂ ಸಿದ್ದರಾಮಯ್ಯ ಅವರೇ ಐದು ವರ್ಷ ಮುಖ್ಯಮಂತ್ರಿ ಆಗಿರುತ್ತಾರೆ ಎಂದು ಅಂದುಕೊಂಡಿದ್ದೇವೆ. ಈ ಮಧ್ಯೆ, ಹೈಕಮಾಂಡ್ ಏನು ತೀರ್ಮಾನ ಮಾಡುತ್ತೊ ಗೊತ್ತಿಲ್ಲ’ ಎಂದರು.

ಮುಖ್ಯಮಂತ್ರಿಯ ರಾಜಕೀಯ ಸಲಹೆಗಾರ ಸ್ಥಾನಕ್ಕೆ ಶಾಸಕ ಬಿ.ಆರ್. ಪಾಟೀಲ ರಾಜೀನಾಮೆ ನೀಡಿರುವ ವಿಚಾರವಾಗಿ ಪ್ರತಿಕ್ರಿಯಿಸಿದ ಪಾಟೀಲ, ‘ಅವರು ರಾಜೀನಾಮೆ ಕೊಟ್ಟಿರುವ ವಿಷಯ ನನಗೆ ಗೊತ್ತಿಲ್ಲ. ಅವರಿಗೆ ಏನು ಅಸಮಾಧಾನ ಎನ್ನುವುದೂ ಗೊತ್ತಿಲ್ಲ. ಈ ಬಗ್ಗೆ ಮುಖ್ಯಮಂತ್ರಿಗೆ ಹೇಳಿರುತ್ತಾರೆ’ ಎಂದರು.

ಮೈಕ್ರೊ ಫೈನಾನ್ಸ್ ಕಂಪನಿಗಳ ಕಿರುಕುಳ ತಡೆಗೆ ಸುಗ್ರೀವಾಜ್ಞೆ ಹೊರಡಿಸುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಸುಗ್ರೀವಾಜ್ಞೆಗೆ ನ್ಯಾಯಾಲಯದಲ್ಲಿ ತಡೆ ಆಗಬಾರದು ಎಂಬ ಕಾರಣಕ್ಕೆ ಈಗ ಇರುವ ಬೇರೆ ಬೇರೆ ಕಾನೂನುಗಳನ್ನು ಆಧರಿಸಿ ಸುಗ್ರೀವಾಜ್ಞೆ ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ. ಕರಡು ಸಿದ್ಧವಾದ ಬಳಿಕ ರಾಜ್ಯಪಾಲರ ಒಪ್ಪಿಗೆಗೆ ಕಳುಹಿಸಲಾಗುವುದು’ ಎಂದು ಹೇಳಿದರು.

‘ನವದೆಹಲಿಗೆ ಹೋಗುವ ಯೋಚನೆ ಇದೆಯೇ’ ಎಂಬ ಪ್ರಶ್ನೆಗೆ, ‘ಇಲಾಖೆಯ ಕೆಲಸಗಳಿಗೆ ದೆಹಲಿಗೆ ಹೋಗಬೇಕಿದೆ. ಆದರೆ, ಯಾವಾಗ ಎಂದು ಇನ್ನೂ ನಿರ್ಧರಿಸಿಲ್ಲ. ಹಾಗೆಂದು, ರಾಜಕೀಯ ಕಾರಣಕ್ಕೆ ಹೋಗುವುದಿಲ್ಲ. ಎಐಸಿಸಿ ಅಧ್ಯಕ್ಷರು, ಪಕ್ಷದ ಉಸ್ತುವಾರಿ ರಾಜ್ಯಕ್ಕೆ ಬರಲಿದ್ದಾರೆ. ಏನಾದರೂ ವಿಷಯಗಳಿದ್ದರೆ ಆಗ ಚರ್ಚೆ ಮಾಡುತ್ತೇನೆ’ ಎಂದೂ ತಿಳಿಸಿದರು.

ಸರ್ಕಾರ ದ್ವಿಭಾಷಾ ಸೂತ್ರದ ವಾದ ಮಂಡಿಸಲಿ: ಬಿಳಿಮಲೆ ಒತ್ತಾಯ

ಪ್ರಜಾವಾಣಿ ವಾರ್ತೆ

ಕನ್ನಡ ಜನಶಕ್ತಿ ಕೇಂದ್ರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ವಾಂಸ ಗುರುಪಾದ ಮರಿಗುದ್ದಿ ಅವರಿಗೆ ಕುವೆಂಪು ಸಾಹಿತ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. (ಎಡದಿಂದ) ಸಿ.ಕೆ ರಾಮೇಗೌಡ, ಪುರುಷೋತ್ತಮ ಬಿಳಿಮಲೆ, ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಕೋಶಾಧ್ಯಕ್ಷ ಪಿ. ಮಲ್ಲಿಕಾರ್ಜುನಪ್ಪ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಕನ್ನಡ ಜನಶಕ್ತಿ ಕೇಂದ್ರದ ಉಪಾಧ್ಯಕ್ಷ ಶಂಕರ್ ಹೂಗಾರ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: ‘ದ್ವಿಭಾಷಾ ಸೂತ್ರ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಬಲವಾದ ವಾದ ಮಂಡಿಸಬೇಕು’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಹೇಳಿದರು.

ಕನ್ನಡ ಜನಶಕ್ತಿ ಕೇಂದ್ರ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ವಾಂಸ ಗುರುಪಾದ ಮರಿಗುದ್ದಿ ಅವರಿಗೆ ಕುವೆಂಪು ಸಾಹಿತ್ಯ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

‘ಕುವೆಂಪು ಅವರು ದ್ವಿಭಾಷಾ ಸೂತ್ರವನ್ನು ಅನುಸರಿಸುವಂತೆ ಮೊದಲಿನಿಂದಲೂ ಹೇಳಿಕೊಂಡು ಬಂದಿದ್ದಾರೆ. ಆದ್ದರಿಂದ ರಾಜ್ಯ ಸರ್ಕಾರ ಈ ಬಗ್ಗೆ ಗಂಭೀರವಾಗಿ ಚರ್ಚಿಸಬೇಕು. ಕರ್ನಾಟಕ ದ್ವಿಭಾಷಾ ಸೂತ್ರದ ಪರ ವಾದ ಮಂಡಿಸುವ ಮೂಲಕ ಕೇಂದ್ರ ಸರ್ಕಾರದ ವಿರುದ್ಧ ಹೋರಾಟ ನಡೆಸಬೇಕು. ಇಲ್ಲದಿದ್ದರೆ ನಾವೆಲ್ಲರೂ ಸೇರಿ ಗೋಕಾಕ್ ಮಾದರಿ ಚಳವಳಿ ನಡೆಸಬೇಕಾಗುತ್ತದೆ’ ಎಂದು ಹೇಳಿದರು.

‘1968ರಿಂದ ನಾವು ತ್ರಿಭಾಷಾ ಸೂತ್ರವನ್ನು ಅನುಸರಿಸಿಕೊಂಡು ಬಂದಿದ್ದೇವೆ. ಆದರೆ, ತಮಿಳುನಾಡು ಈ ಸೂತ್ರವನ್ನು ಅನುಸರಿಸುತ್ತಿಲ್ಲ. ತ್ರಿಭಾಷಾ ಸೂತ್ರದ ಮೌಲ್ಯಮಾಪನ ಮಾಡಬೇಕು. ನಾವು ತ್ರಿಭಾಷಾ ಸೂತ್ರ ಅನುಸರಿಸಿದ ಪರಿಣಾಮ ಭಾಷೆ, ಸಾಹಿತ್ಯ, ಸಂಸ್ಕೃತಿ, ಉದ್ಯೋಗಕ್ಕೆ ಸಂಬಂಧಿಸಿದಂತೆ ರಾಜ್ಯಕ್ಕೆ ಏನು ಲಾಭವಾಗಿದೆ? ಇದನ್ನು ತಿರಸ್ಕರಿಸಿದ ತಮಿಳುನಾಡಿಗೆ ಏನು ನಷ್ಟವಾಗಿದೆ? ಎಂಬುದರ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ ನಡೆಸಬೇಕು’ ಎಂದರು.

ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

वित्त मंत्रालय
MINISTRY OF FINANCE

Union
BUDGET
2025-26

ಉತ್ತಮ ಪರೋಕ್ಷ ತೆರಿಗೆಗಳು, ಮಜಬೂತಾದ ಆರ್ಥಿಕ ಬೆಳವಣಿಗೆ

ಟ್ರೇಡ್ ಫೆಸಿಲಿಟೇಶನ್
- ತಾತ್ಕಾಲಿಕ ಸುಂಕಗಳ ಮೌಲ್ಯಮಾಪನಕ್ಕೆ 2 ವರ್ಷಗಳ ನಿಗದಿತ ಕಾಲಾವಧಿ ವಿಸ್ತರಣೆ (1 ವರ್ಷ ವಿಸ್ತರಿಸಲಾಗಿದೆ)
- ಸ್ವಯಂಪ್ರೇರಿತ ಅನುಸರಣೆ: ಆಮದುದಾರರು/ರಫ್ತುದಾರರು ವಾಸ್ತವಿಕ ಅಂಶಗಳನ್ನು ಘೋಷಿಸಬಹುದು ಮತ್ತು ಬಡ್ಡಿ ಹಾಗೂ ದಂಡ ರಹಿತವಾಗಿ ಕರ ಪಾವತಿಸಬಹುದು.
- ಆಮದು ಇನ್‌ಪುಟ್‌ಗಳ ಬಳಕೆಯ ಕಾಲಾವಧಿ ವಿಸ್ತರಣೆ: 6 ತಿಂಗಳಿಂದ ಒಂದು ವರ್ಷ; ಮಾಸಿಕ ಫೈಲಿಂಗ್ ಬದಲಾಗಿ ತ್ರೈಮಾಸಿಕ ಫೈಲಿಂಗ್.

ರಫ್ತುಗಳಿಗೆ ಉತ್ತೇಜನ
- ಕರಕುಶಲಗಳ ರಫ್ತು ಕಾಲಮಿತಿಯನ್ನು 1 ವರ್ಷಕ್ಕೆ ವಿಸ್ತರಿಸಲಾಗಿದೆ (+3 ತಿಂಗಳ ವಿಸ್ತರಣೆ).
- ದೇಸಿ ಮೌಲ್ಯ ಸೇರ್ಪಡೆಗಾಗಿ ವೆಟ್ ಬ್ಲ್ಯೂ ಲೆದರ್ ಮೇಲಿನ ಸಂಪೂರ್ಣ ಬಿಸಿಡಿ'ಗೆ ವಿನಾಯಿತಿ.
- ಶೀಥಲ ಮೀನು ಗೊಜ್ಜಿನ (ಸುರಿಮಿ)ಮೇಲಿನ ಬಿಸಿಡಿಯನ್ನು 30% ರಿಂದ 5%ಗೆ ಇಳಿಸಲಾಗಿದೆ.
- ದುರಸ್ತಿಗಳಿಗಾಗಿ ಆಮದು ಮಾಡಿಕೊಂಡ ರೈಲ್ವೆ ಸರಕುಗಳಿಗೆ ರಫ್ತು ಗವಾಕ್ಷಿ ವಿಸ್ತರಣೆ: 6 ತಿಂಗಳಿಂದ 1 ವರ್ಷ (+1 ವರ್ಷ ವಿಸ್ತರಣೆ).

ದೇಸಿ ಉತ್ಪಾದನೆಯ ಸಂವರ್ಧನೆ
- ಕೋಬಾಲ್ಟ್ ಪೌಡರ್, 12 ಪ್ರಮುಖ ಖನಿಜಗಳು, ಲೀಥಿಯಂ-ಅಯಾನ್ ಬ್ಯಾಟರಿ ವೇಸ್ಟ್, ಲೀಡ್ ಮತ್ತು ಝಿಂಕ್ ಸ್ಕ್ರ್ಯಾಪ್ ಮೇಲಿನ ಬಿಸಿಡಿ'ಗೆ ವಿನಾಯಿತಿ.
- ಅಧಿಕ ಶಟಲ್-ರಹಿತ ಮಗ್ಗಳ ಜವಳಿ ಯಂತ್ರೋಪಕರಣಗಳ ವಿನಾಯಿತಿ ವಿಸ್ತರಣೆ.
- ಎಲ್‌ಸಿಡಿ/ಎಲ್‌ಇಡಿ ಟಿವಿ ಪ್ಯಾನೆಲ್‌ಗಳ ಒಪನ್ ಸೆಲ್ ಬಿಡಿಭಾಗಗಳ ಮೇಲಿನ ಬಿಸಿಡಿ'ಗೆ ವಿನಾಯಿತಿ.
- ಹಡಗು ನಿರ್ಮಾಣಕ್ಕೆ ಮತ್ತು ವೆಸೆಲ್ ಒಡೆಯುವಿಕೆಗೆ 10 ವರ್ಷ ಬಿಸಿಡಿ ವಿನಾಯಿತಿ ವಿಸ್ತರಣೆ.

ಸೀಮಾ ಸುಂಕ ಮತ್ತು ವ್ಯಾಪಾರ ಸುಧಾರಣೆಗಳು
- ಜಾಗತಿಕ ವ್ಯಾಪಾರ ಸರಾಗಗೊಳಿಸಲು ಎಕ್ಸ್‌ಪೋರ್ಟ್ ಕ್ರೆಡಿಟ್, ಎಂಎಸ್‌ಎಂಇ ಬೆಂಬಲ ಮತ್ತು ಕ್ರಾಸ್-ಬಾರ್ಡರ್ ಫ್ಯಾಕ್ಟರಿಂಗ್.
- ಅಸೀಮಿತ ಡಿಜಿಟಲ್ ಟ್ರೇಡ್ ಡಾಕ್ಯುಮೆಂಟೇಶನ್ ಹಾಗೂ ಫೈನಾನ್ಸಿಂಗ್‌ಗಾಗಿ ಭಾರತ್ ಟ್ರೇಡ್ ನೆಟ್ (ಬಿಟಿಎನ್) ಪೋರ್ಟಲ್‌ಗೆ ಚಾಲನೆ.
- ಪ್ರಮುಖ ಪೂರೈಕೆ ಸರಣಿಗಳು ಮತ್ತು ಕೈಗಾರಿಕೆಗಳಿಗೆ ಸೌಲಭ್ಯ ಒದಗಿಸುವ ಸಮೂಹಗಳು.
- ದೇಸಿ ಇಲೆಕ್ಟ್ರಾನಿಕ್ ಕೈಗಾರಿಕೆ ಮತ್ತು ಇಂಡಸ್ಟ್ರಿ 4.0 ಅಳವಡಿಕೆಗೆ ಸರಕಾರದಿಂದ ಉತ್ತೇಜನ.
- ಟಿಯರ್-2 ನಗರಗಳಲ್ಲಿ ಗ್ಲೋಬಲ್ ಕೆಪಾಬಿಲಿಟಿ ಸೆಂಟರ್‌ಗಳ ಉತ್ತೇಜನಕ್ಕಾಗಿ ನ್ಯಾಷನಲ್ ಫ್ರೇಮ್‌ವರ್ಕ್.

ಆರೋಗ್ಯ ಆರೈಕೆ ಮತ್ತು ಜೀವರಕ್ಷಕ ಔಷಧಿಗಳು
- 36 ಜೀವರಕ್ಷಕ ಔಷಧಿಗಳು ಮತ್ತು 13 ರೋಗಿ ಸಹಾಯಕ ಕಾರ್ಯಕ್ರಮಗಳ ಮೇಲಿನ ಬಿಸಿಡಿ'ಗೆ ವಿನಾಯಿತಿ.
- 5% ರಿಯಾಯತಿಯುಳ್ಳ ಬಿಸಿಡಿ ಪಟ್ಟಿಗೆ ಹೆಚ್ಚುವರಿ 6 ಔಷಧಿಗಳ ಸೇರ್ಪಡೆ.

CBC 15502/13/0005/2425

SCAN ME

@cbic_india @cbicindia @cbicindia @CBICINDIA @CBIC india

ನಗರದ ವಿವಿಧೆಡೆ ಜಾಗೃತಿ ಕಾರ್ಯಕ್ರಮದಲ್ಲಿ ಕ್ಯಾನ್ಸರ್‌ನಿಂದ ಗುಣಮುಖರಾದವರು ಭಾಗಿ • ವಾಕಥಾನ್ ಆಯೋಜನೆ

‘ಕ್ಯಾನ್ಸರ್ ವಿರುದ್ಧ ಒಗ್ಗಟ್ಟಿನ ಹೋರಾಟ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಕ್ಯಾನ್ಸರ್ ಜಾಗೃತಿ ಅಭಿಯಾನದ ಅಂಗವಾಗಿ ನಗರದಲ್ಲಿ ರಾಮಯ್ಯ ಮೆಮೋರಿಯಲ್ ಆಸ್ಪತ್ರೆ (ಆರ್‌ಎಂಎಚ್) ಭಾನುವಾರ ಹಮ್ಮಿಕೊಂಡಿದ್ದ ವಾಕಥಾನ್‌ನಲ್ಲಿ ಕ್ಯಾನ್ಸರ್ ರೋಗದ ಬಗ್ಗೆ ಜಾಗೃತಿ ಮೂಡಿಸಲಾಯಿತು.

‘ರಾಮಯ್ಯ ಹೋಪ್-ಎ-ಥಾನ್: ಕಾನ್ಸರ್ ವಿರುದ್ಧ ಗೆಲ್ಲಲು ಬನ್ನಿ ಒಗ್ಗೂಡಿ ನಡೆಯೋಣ’ ಎಂಬ ಶೀರ್ಷಿಕೆಯಡಿ ನಡೆದ ಈ ವಾಕಥಾನ್‌ಗೆ ಆಸ್ಪತ್ರೆಯ ಅಧ್ಯಕ್ಷ ಡಾ.ಎಸ್.ಜಿ.ನಾಗೇಂದ್ರ ಸ್ವಾಮಿ ಮತ್ತು ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಆಂಕೋಸೈನ್ಸ್‌ನ ಮುಖ್ಯಸ್ಥ ಡಾ.ಕೆ.ಹರೀಶ್ ಚಾಲನೆ ನೀಡಿದರು.

ಆಸ್ಪತ್ರೆಯ ಸಿಬ್ಬಂದಿ, ವೈದ್ಯರು, ಕ್ಯಾನ್ಸರ್ ಗುಣಮುಖರಾದವರು ಹಾಗೂ ಅವರ ಕುಟುಂಬ ಸದಸ್ಯರು ಸೇರಿ 500ಕ್ಕೂ ಅಧಿಕ ಜನರು ಈ ವಾಕಥಾನ್‌ನಲ್ಲಿ 5 ಕಿ.ಮೀ. ಹೆಜ್ಜೆ ಹಾಕಿದರು. ಆರಂಭಿಕ ಹಂತದಲ್ಲಿಯೇ ರೋಗ ಪತ್ತೆ ಮಾಡಿದಲ್ಲಿ ಚಿಕಿತ್ಸೆ ಸುಲಭ ಸಾಧ್ಯ ಎಂದು ಜಾಗೃತಿ ಮೂಡಿಸಲಾಯಿತು.

ವಾಕಥಾನ್‌ನಲ್ಲಿ ಆಸ್ಪತ್ರೆಯ ಸಿಬ್ಬಂದಿ, ವೈದ್ಯರು, ಕ್ಯಾನ್ಸರ್‌ನಿಂದ ಗುಣಮುಖರಾದವರು ಹಾಗೂ ಅವರ ಕುಟುಂಬ ಸದಸ್ಯರು ಕ್ಯಾನ್ಸರ್ ರೋಗದ ಬಗ್ಗೆ ಜಾಗೃತಿ ಮೂಡಿಸಿದರು

‘ಕ್ಯಾನ್ಸರ್ ವಿರುದ್ಧ ಎಲ್ಲರೂ ಒಗ್ಗೂಡಿ ಹೋರಾಡಿದಲ್ಲಿ ಈ ಕಾಯಿಲೆಯನ್ನು ಜಯಿಸಲು ಸಾಧ್ಯ. ಕ್ಯಾನ್ಸರ್ ಪೀಡಿತರಿಗೆ ಕುಟುಂಬದ ಬೆಂಬಲ ಹಾಗೂ ಕಾಳಜಿ ಅತ್ಯಗತ್ಯ’ ಎಂದು ರಾಮಯ್ಯ ಸಮೂಹ ಸಂಸ್ಥೆಗಳ ಅಧ್ಯಕ್ಷ ಎಂ.ಆರ್.ಜಯರಾಮ್ ಹೇಳಿದರು.

ಆಸ್ಪತ್ರೆಯ ಅಧ್ಯಕ್ಷ ಡಾ.ಎಸ್. ಜಿ.ನಾಗೇಂದ್ರ ಸ್ವಾಮಿ, ‘ಆಸ್ಪತ್ರೆಯು ಕ್ಯಾನ್ಸರ್ ಗೆಲ್ಲಲು ನೆರವಾಗುವ ಜತೆಗೆ ಸಮುದಾಯದಲ್ಲಿ ರೋಗದ ಬಗ್ಗೆ ಜಾಗೃತಿ ಮೂಡಿಸುತ್ತಿದೆ. ಆರಂಭಿಕ ಹಂತದಲ್ಲಿಯೇ ಕ್ಯಾನ್ಸರ್ ಪತ್ತೆ ಮಾಡಿದಲ್ಲಿ ಸುಲಭವಾಗಿ ಕಾಯಿಲೆಯನ್ನು ವಾಸಿ ಮಾಡಬಹುದು. ಹಾಗಾಗಿ, ರೋಗದ ಲಕ್ಷಣಗಳು ಕಾಣಿಸಿಕೊಂಡಾಗ ಕಡೆಗಣಿಸಬಾರದು’ ಎಂದು ತಿಳಿಸಿದರು.

‘ಕ್ಯಾನ್ಸರ್ ವಿರುದ್ಧ ನಡೆಯಿರಿ’

ವಿಶ್ವ ಕ್ಯಾನ್ಸರ್ ನಿಯಂತ್ರಣ ದಿನಾಚರಣೆಯ ಪ್ರಯುಕ್ತ ‘ಅದ್ವೈಕಾ ಕೇರ್ ಫೌಂಡೇಶನ್ ವತಿಯಿಂದ ಭಾನುವಾರ ನಡೆದ ‘ಕ್ಯಾನ್ಸರ್ ವಿರುದ್ಧ ನಡೆಯಿರಿ’ ವಾಕಥಾನ್‌ನಲ್ಲಿ ಭಾಗವಹಿಸಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು

ಬೆಂಗಳೂರು: ವಿಶ್ವ ಕ್ಯಾನ್ಸರ್ ನಿಯಂತ್ರಣ ದಿನಾಚರಣೆಯ ಪ್ರಯುಕ್ತ ‘ಅದ್ವೈಕಾ ಕೇರ್ ಫೌಂಡೇಶನ್’ ವತಿಯಿಂದ ‘ಕ್ಯಾನ್ಸರ್ ವಿರುದ್ಧ ನಡೆಯಿರಿ’ ವಾಕಥಾನ್ ಭಾನುವಾರ ನಡೆಯಿತು.

ವಿಧಾನಸೌಧ ಮುಂಭಾಗದಲ್ಲಿ ವಾಕಥಾನ್ ಆರಂಭಗೊಂಡಿತು. ಕೆ.ಆರ್. ಸರ್ಕಲ್, ನೃಪತುಂಗ ರಸ್ತೆ, ಹಡ್ಸನ್ ವೃತ್ತ, ಕಸ್ತೂರ ಬಾ ರಸ್ತೆ ಮೂಲಕ ಸಾಗಿ ಬಾಲಭವನದಲ್ಲಿ ಕೊನೆಗೊಂಡಿತು.

ವಾಕಥಾನ್‌ಗೆ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್. ಈ ಸುಧೀಂದ್ರ ಚಾಲನೆ ನೀಡಿ ಮಾತನಾಡಿ, ‘ದೇಶದಲ್ಲಿ ಅತಿಹೆಚ್ಚು ಬಲಿ ಪಡೆಯುತ್ತಿರುವ ಕಾಯಿಲೆಗಳಲ್ಲಿ ಕ್ಯಾನ್ಸರ್ ಎರಡನೇ ಸ್ಥಾನವನ್ನು ಪಡೆದಿದೆ. ರಾಜ್ಯದಲ್ಲಿ ಹೆಚ್ಚುತ್ತಿರುವ ಕ್ಯಾನ್ಸರ್ ಹೆಮ್ಮಾರಿಯನ್ನು ನಿಯಂತ್ರಿಸಲು ಅಧ್ಯಯನ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ. ರಾಜ್ಯ ಸರ್ಕಾರ ಆ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಂಡಿದೆ’ ಎಂದು ತಿಳಿಸಿದರು.

ಪ್ರಕ್ರಿಯಾ ಆಸ್ಪತ್ರೆಯ ಸಿಇಒ ಡಾ. ಶ್ರೀನಿವಾಸ ಚಿಲಕೂರಿ, ಅದ್ವೈಕಾ ಕೇರ್ ಫೌಂಡೇಶನ್ ಸಿಇಒ ರಾಜಶ್ರೀ ವಾರಿಯರ್, ಟ್ರಸ್ಟಿಗಳಾದ ಬಾಲಾ ವಾರಿಯರ್, ಎಲ್‌ಎನ್‌ಸಿಎಚ್ ಕೃಷ್ಣವಂಶಿ ಭಾಗವಹಿಸಿದ್ದರು.

ಸುದ್ದಿ 2 ನಿಮಿಷ

ವಿದ್ಯಾರ್ಥಿಗೆ ನಿರ್ವಾಹಕ ಒದ್ದಿದ್ದರೆ ಶಿಸ್ತುಕ್ರಮ: ರಾಮಲಿಂಗಾರೆಡ್ಡಿ

ಬೆಂಗಳೂರು: ಶಾಲಾ ವಿದ್ಯಾರ್ಥಿಗೆ ಬಿಎಂಟಿಸಿ ನಿರ್ವಾಹಕ ಒದ್ದಿರುವುದು ದೃಢಪಟ್ಟಲ್ಲಿ ನಿರ್ವಾಹಕನ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿದ್ದಾರೆ.

ಶಾಲಾ ಹುಡುಗನಿಗೆ ನಿರ್ವಾಹಕ ಒದ್ದಿದ್ದಾರೆ ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವುದನ್ನು ಕಂಡು ಅವರು ಈ ಸೂಚನೆ ನೀಡಿದ್ದಾರೆ.

ಬಿಎಂಟಿಸಿ ಬಸ್‌ಗಳಲ್ಲಿ ನಿತ್ಯ 40 ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಿದ್ದು, ಇದರಲ್ಲಿ 1.60 ಲಕ್ಷ ವಿದ್ಯಾರ್ಥಿಗಳಾಗಿದ್ದಾರೆ. 6,500 ಬಸ್‌ಗಳು ಪ್ರತಿದಿನ 5,830 ಅನುಸೂಚಿಗಳಿಂದ 60,000 ಟ್ರಿಪ್‌ಗಳನ್ನು ನಡೆಸುತ್ತಿವೆ. ಈ ರೀತಿಯ ಘಟನೆ ಹಿಂದೆ ನಡೆದಿಲ್ಲ. ಆದ್ದರಿಂದ ಈ ವಿಡಿಯೊ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಬೇಕು. ಬಸ್ ನಿರ್ವಾಹಕರು ವಿದ್ಯಾರ್ಥಿ ಮೇಲೆ ದೌರ್ಜನ್ಯ ನಡೆಸಿರುವುದು ದೃಢಪಟ್ಟಲ್ಲಿ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದ್ದಾರೆ.

ಕೆಎಸ್‌ಆರ್‌ಟಿಸಿಗೆ ಮಹಾರಾಷ್ಟ್ರ ಸಾರಿಗೆ ನಿಯೋಗ ಭೇಟಿ

ಬೆಂಗಳೂರು: ಕೆಎಸ್‌ಆರ್‌ಟಿಸಿಗೆ ಮಹಾರಾಷ್ಟ್ರದ ಸಾರಿಗೆ ಸಚಿವರು, ಸಾರಿಗೆ ಅಧಿಕಾರಿಗಳು ಭೇಟಿ ನೀಡಿ ನಿಗಮದ ಪ್ರತಿಷ್ಠಿತ ವಾಹನಗಳ ಕಾರ್ಯಾಚರಣೆ ಬಗ್ಗೆ ಮಾಹಿತಿ ಪಡೆದರು.

ಮಹಾರಾಷ್ಟ್ರದ ಸಾರಿಗೆ ಸಚಿವ ಪ್ರತಾಪ್ ಸರ್‌ನಾಯಕ್, ಎಂಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಮಾಧವ್ ಕುಸೆಕರ್ ಮತ್ತು ಅಧಿಕಾರಿಗಳನ್ನು ಒಳಗೊಂಡ ನಿಯೋಗವು ನಿಗಮದ ಕಚೇರಿ, ಘಟಕ ಹಾಗೂ ಕಾರ್ಯಾಗಾರಕ್ಕೆ ಭೇಟಿ ನೀಡಿತು

ಕಾರ್ಮಿಕ ಕಲ್ಯಾಣ ಉಪಕ್ರಮಗಳು, ವಾಣಿಜ್ಯ ಆದಾಯ, ಬಸ್‌ಗಳ ನವೀಕರಣ, ಎಚ್‌ಆರ್‌ಎಂಎಸ್, ಇ-ಟಿಕೆಟಿಂಗ್, ₹1 ಕೋಟಿ ಅಪಘಾತ ವಿಮೆ, ಇತರ ಯೋಜನೆಗಳ ಬಗ್ಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಕೆಎಸ್‌ಆರ್‌ಟಿಸಿ ಉಪಾಧ್ಯಕ್ಷ ರಿಜ್ವಾನ್ ನವಾಬ್, ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಅವರೊಂದಿಗೆ ಚರ್ಚಿಸಿತು.

ರಾಜ್ಯದ ಸಾರಿಗೆ ಬಸ್‌ಗಳಾದ ಐರಾವತ ಕ್ಲಬ್ ಕ್ಲಾಸ್, ಐರಾವತ ಕ್ಲಬ್ ಕ್ಲಾಸ್ 2.0, ಅಂಬಾರಿ ಡ್ರೀಮ್ ಕ್ಲಾಸ್, ಪಲ್ಲಕ್ಕಿ, ಅಂಬಾರಿ ಉತ್ಸವ, ಫ್ಲೈ ಬಸ್, ನಗರ ಸಾರಿಗೆ, ರಾಜಹಂಸ ಹಾಗೂ ಅಶ್ವಮೇಧ ವಾಹನಗಳನ್ನು ವೀಕ್ಷಿಸಿದರು.

ಕೆಎಸ್‌ಆರ್‌ಟಿಸಿ ಘಟಕ ಹಾಗೂ ಕಾರ್ಯಾಗಾರ ನಿರ್ವಹಣೆ, ವಾಹನಗಳಿಗೆ ನೀಡಿರುವ ಬ್ರ್ಯಾಂಡಿಂಗ್, ವಾಹನಗಳ ಪುನಶ್ಚೇತನ ಕಾರ್ಯಗಳ ಬಗ್ಗೆ ಮಹಾರಾಷ್ಟ್ರದ ಸಾರಿಗೆ ಸಚಿವರು, ಸಾರಿಗೆ ಅಧಿಕಾರಿಗಳು ಮಾಹಿತಿ ಪಡೆದರು.

ಚಿತ್ರನಟ ವಿಕ್ರಮಾದಿತ್ಯ ಅವರು ಲಕ್ಷ್ಮಿದೇವಿನಗರದಲ್ಲಿ ಪೌರಕಾರ್ಮಿಕರಿಗೆ ಆರೋಗ್ಯದ ಅರಿವು ಮೂಡಿಸಿದರು

ಪೌರಕಾರ್ಮಿಕರಿಗೆ ಸಮವಸ್ತ್ರ ವಿತರಣೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ‘ಬಡತನ, ನೋವು, ಹಸಿವು, ಆರೋಗ್ಯವನ್ನು ಲೆಕ್ಕಿಸದೇ ನಗರಗಳನ್ನು ಸ್ವಚ್ಛವಾಗಿ ಇಡುವ ಪೌರಕಾರ್ಮಿಕರು ದೇವರಂತೆ’ ಎಂದು ಚಿತ್ರನಟ ವಿಕ್ರಮಾದಿತ್ಯ ತಿಳಿಸಿದರು.

ಲಕ್ಷ್ಮಿದೇವಿನಗರದಲ್ಲಿ ಪೌರಕಾರ್ಮಿಕರು, ಮನೆ ಮನೆಯಿಂದ ಕಸ ಸಂಗ್ರಹಿಸುವವರಿಗೆ ಮತ್ತು ಆಟೊ ಚಾಲಕರಿಗೆ ಹಮ್ಮಿಕೊಂಡಿದ್ದ ಆರೋಗ್ಯ ಜಾಗೃತಿ ಮತ್ತು ನಿತ್ಯ ತಮ್ಮ ಸ್ವಚ್ಛತೆ ಕಾಪಾಡಿಕೊಳ್ಳುವ ಅರಿವು ಮೂಡಿಸುವ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು. 150 ಹೆಚ್ಚು ಪೌರಕಾರ್ಮಿಕರಿಗೆ ಚೆಲುವರಾಜು ಅವರು ಉಚಿತ ಸಮವಸ್ತ್ರ, ಶೂ, ಗ್ಲೌಸ್, ಮಾಸ್ಕ್‌ಗಳನ್ನು ವಿತರಿಸಿದರು. ಬಿಬಿಎಂಪಿ ಆರೋಗ್ಯ ನಿರೀಕ್ಷಕ ಮಣಿ ಮೇಘಾಲಯ, ಚಂದ್ರು, ಮಾರ್ಷಲ್ ಮಂಜುನಾಥ್ ಉಪಸ್ಥಿತರಿದ್ದರು.

ಬಾಗಲೂರು ಪಿಎಸಿಎಸ್‌ಗೆ ಅವಿರೋಧ ಆಯ್ಕೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಾಗಲೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎ.ವೆಂಕಟರಾಜು ಹಾಗೂ ಉಪಾಧ್ಯಕ್ಷರಾಗಿ ಸಿ.ಶಿವಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಮುಂದಿನ ಐದು ವರ್ಷಗಳ ಅವಧಿಗೆ ಚುನಾವಣಾ ಪ್ರಕ್ರಿಯೆ ಭಾನುವಾರ ನಡೆಯಿತು. ಒಟ್ಟು 11 ಸದಸ್ಯ ಬಲ ಹೊಂದಿರುವ ಸಂಘದಲ್ಲಿ ಇವರಿಬ್ಬರು ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧ ಆಯ್ಕೆ ನಡೆಯಿತು.

‘ಸಂಘದ ಆಸ್ತಿಗಳ ಪೋಡಿ ಮತ್ತು ಖಾತೆಗಳನ್ನು ಮಾಡಿಸುವ ಕಾರ್ಯಗಳನ್ನು ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ಎಲ್ಲ ನಿರ್ದೇಶಕರ ಸಹಕಾರದೊಂದಿಗೆ ಸಂಘದ ನೂತನ ಕಟ್ಟಡ ನಿರ್ಮಿಸಲು ಪ್ರಯತ್ನಿಸುತ್ತೇವೆ. ರೈತರು, ಬಡಜನರು ಹಾಗೂ ಮಹಿಳೆಯರಿಗೆ ಸಾಲಸೌಲಭ್ಯಗಳನ್ನು ನೀಡುವುದರ ಜೊತೆಗೆ ಸಂಘದ ಅಭಿವೃದ್ಧಿಗೆ ಶ್ರಮಿಸುತ್ತೇವೆ’ ಎಂದು ಅಧ್ಯಕ್ಷ ವೆಂಕಟರಾಜು ತಿಳಿಸಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಎ.ಕೆಂಪೇಗೌಡ, ಮಾಜಿ ಅಧ್ಯಕ್ಷ ಡಿ.ಜಗನ್ನಾಥ್, ಸದಸ್ಯರಾದ ಬಿ.ಎಸ್.ಪ್ರಭುಸ್ವಾಮಿ, ಸೈಯದ್ ಶಬ್ಬೀರ್, ಮುಖಂಡರಾದ ಅನಿಲ್‌ಕುಮಾರ್, ಸುಧೀಂದ್ರ, ಎ.ಮೂರ್ತಿ, ಬಿ.ಎಸ್. ಪಿಳ್ಳೇಗೌಡ, ಧನಂಜಯ, ಬಿ.ಸಿ. ಮಂಜುನಾಥ್, ಬಿ.ಸಿ. ನಾಗರಾಜು, ಟಿ.ವೆಂಕಟೇಶ್, ಮುನಿನಾರಾಯಣ, ಸಲ್ಲಪ್ಪ, ಮೌಲಾನಿ, ಚಾಂದ್‌ಪಾಷ ಉಪಸ್ಥಿತರಿದ್ದರು.

ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಾಗಲೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷ, ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಎ.ವೆಂಕಟರಾಜು ಮತ್ತು ಸಿ.ಶಿವಣ್ಣ ಹಾಗೂ ಗ್ರಾಮ ಪಂಚಾಯಿತಿ ಅಧ್ಯಕ್ಷ ಎ.ಕೆಂಪೇಗೌಡ, ಮಾಜಿ ಅಧ್ಯಕ್ಷ ಡಿ.ಜಗನ್ನಾಥ್ ಹಾಗೂ ಇತರರು ವಿಜಯೋತ್ಸವದಲ್ಲಿ ಪಾಲ್ಗೊಂಡಿದ್ದರು

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Engg/ Production Technical

PREM INDUSTRIES Plastic Injection Moulding Plant @ Mysore, Requires Production Head & Manager, Quality Head & Manager. Minimum 7 Years Experience in Operations & Position with Complete Knowledge in Process / Plastic Moulds. Contact: hr@premind.com 8105305827/ 9364005127

Factory

FACTORY WORKERS Needed Male Age Below 30 Eligibility: 10th Pass or PUC Pass Location: Rajajinagar Perks: Good Salary, Training Provided Contact: 9108458798/ 9845579620

Teachers/ Professors

TEACHERS REQUIRED for MATHS and HINDI for High school contact Kenmore school email kenmoreschool@gmail.com whatsapp 9901501185

BUSINESS

Business Offers

Finance

URGENT LOAN Avail @ 3.5% per annum Personal-Business Housing- Project Take Over all types loan. Good Finance. Phone:: 7678360713.

DH Classifieds | ಪ್ರಜಾವಾಣಿ
NAME CHANGE
@50/-* PER WORDS
Book your Name change Ad in DH All Karnataka + Prajavani Bengaluru City All Days
Conditions apply
www.dhclassifieds.com BOOK NOW
For more details contact: 7795158424 9900428036

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

‘ರಾಜ್ಯದಲ್ಲಿ ಮಹಿಳೆಯರಿಗಿಲ್ಲ ರಕ್ಷಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಮಹಿಳೆಯರಿಗೆ ರಕ್ಷಣೆ ಇಲ್ಲದಂತಾಗಿದೆ. ದಿನಕ್ಕೊಂದು ಅತ್ಯಾಚಾರಗಳು ನಡೆಯುತ್ತಿದ್ದು, ರಾಜ್ಯದ ಜನತೆಯನ್ನು ಬೆಚ್ಚಿ ಬೀಳಿಸುತ್ತಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆತಂಕ ವ್ಯಕ್ತಪಡಿಸಿದ್ದಾರೆ.

ಮಂಡ್ಯದಲ್ಲಿ 8 ವರ್ಷದ ಬಾಲಕಿ ಮೇಲೆ ನಡೆದ ಅತ್ಯಾಚಾರ ಕೃತ್ಯವನ್ನು ಖಂಡಿಸಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ‘ಶಾಲಾ ಆವರಣದಲ್ಲಿ, ಹಾಡಹಗಲೇ ನಡೆದಿರುವ ಈ ಕೃತ್ಯವು ರಾಜ್ಯದಲ್ಲಿನ ಅರಾಜಕತೆಗೆ ಹಿಡಿದ ಕನ್ನಡಿ. ಬಿಜೆಪಿ ಅವಧಿ ಯಲ್ಲಿ ಅತ್ಯಾಚಾರ ನಡೆದಿಲ್ಲವಾ ಎಂದು ಮುಖ್ಯಮಂತ್ರಿ ಪ್ರಶ್ನಿಸಿರುವುದು, ಸರ್ಕಾರದ ಸಂವೇದನಾರಹಿತ ಧೋರಣೆ ಮತ್ತು ಅಲಕ್ಷ್ಯವನ್ನು ತೋರಿಸುತ್ತಿದೆ’ ಎಂದಿದ್ದಾರೆ.

ಆರ್.ಅಶೋಕ

‘ಆಕಸ್ಮಿಕ ಗೃಹ ಸಚಿವ ಪರಮೇಶ್ವರ ಅವರೇ, ಮೂವರು ಕಾಮುಕರನ್ನು ಪತ್ತೆ ಹಚ್ಚಿ, ಕಾನೂನಿನ ವಶಕ್ಕೆ ಒಪ್ಪಿಸಿ. ಮಹಿಳೆಯರ ಸುರಕ್ಷತೆಯನ್ನು ಗಂಭೀರವಾಗಿ ಪರಿಗಣಿಸಿ, ನಾಡಿನ ಹೆಣ್ಣುಮಕ್ಕಳು ನಿರ್ಭೀತಿಯಿಂದ ಓಡಾಡುವ ಗ್ಯಾರಂಟಿ ನೀಡಿ’ ಎಂದು ಒತ್ತಾಯಿಸಿದ್ದಾರೆ.

ಇಸ್ರೊ: ನ್ಯಾವಿಗೇಷನ್ ಉಪಗ್ರಹ ಎನ್‌ವಿಎಸ್–02ರಲ್ಲಿ ತಾಂತ್ರಿಕ ದೋಷ

ನವದೆಹಲಿ(ಪಿಟಿಐ): ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ)ಉಡಾಯಿಸಿದ್ದ ‘ನ್ಯಾವಿಗೇಷನ್ ಉಪಗ್ರಹ’ದಲ್ಲಿ (ಎನ್‌ವಿಎಸ್–02) ಭಾನುವಾರ ತಾಂತ್ರಿಕ ದೋಷ ಎದುರಾಗಿದೆ.

ಜನವರಿ 29ರಂದು ಇಸ್ರೊ, ಈ ಉಪಗ್ರಹವನ್ನು ಜಿಎಸ್‌ಎಲ್‌ವಿ-ಎಫ್‌15 ರಾಕೆಟ್ ಮೂಲಕ ಯಶಸ್ವಿಯಾಗಿ ಉಡ್ಡಯನ ಮಾಡಿತ್ತು.

‘ಉಪಗ್ರಹವನ್ನು ನಿಗದಿತ ಕಕ್ಷೆಯ ಸ್ಲಾಟ್‌ನಲ್ಲಿ ಇರಿಸುವ ಕಾರ್ಯ ತಾಂತ್ರಿಕ ಕಾರಣಗಳಿಂದ ನೆರವೇರಿಲ್ಲ. ಆ ನಿಟ್ಟಿನಲ್ಲಿ ಯತ್ನಗಳು ನಡೆದಿವೆ’ ಎಂದು ಇಸ್ರೊ ತನ್ನ ವೆಬ್‌ಸೈಟ್‌ನಲ್ಲಿ ತಿಳಿಸಿದೆ.

ಎನ್‌ವಿಎಸ್‌-02 ಅನ್ನು ಭಾರತದ ಮೇಲೆ ಗೊತ್ತುಪಡಿಸಿದ ಭೂಸ್ಥಿರ ಕಕ್ಷೆಯಲ್ಲಿ ಇರಿಸಲಾಗಿದೆ. ಆದರೆ, ಅದರ ‘ಲಿಕ್ವಿಡ್ ಎಂಜಿನ್’ ಸಮರ್ಪಕವಾಗಿ ಕಾರ್ಯ ನಿರ್ವಹಿಸದ ಕಾರಣ, ಅದನ್ನು ಗೊತ್ತುಪಡಿಸಿದ ಕಕ್ಷೆಗೆ ಕಳುಹಿಸುವ ಯತ್ನ ವಿಳಂಬವಾಗುತ್ತದೆ ಅಥವಾ ಆ ಕಾರ್ಯವನ್ನು ಪೂರ್ಣವಾಗಿ ಕೈಬಿಡುವ ಸಾಧ್ಯತೆಯಿದೆ ಎನ್ನಲಾಗಿದೆ.

ಉಪಗ್ರಹವು ಪ್ರಸ್ತುತ ದೀರ್ಘವೃತ್ತಾಕಾರ ಕಕ್ಷೆಯಲ್ಲಿದೆ. ಇಂತಹ ಕಕ್ಷೆಯಲ್ಲಿ ಇರುವ ಉಪಗ್ರಹವನ್ನು ನ್ಯಾವಿಗೇಷನ್‌ಗಾಗಿ ಬಳಸಿಕೊಳ್ಳಲು ಅಗತ್ಯವಿರುವ ಪರ್ಯಾಯ ತಂತ್ರಗಳನ್ನು ರೂಪಿಸಲಾಗುತ್ತಿದೆ ಎಂದು ಇಸ್ರೊ ಹೇಳಿದೆ.

ಮನ್ವಂತ್–ಪಾರಸ್ ಜೊತೆಯಾಟ; ಕರ್ನಾಟಕ ಮುನ್ನಡೆ

ಬೆಂಗಳೂರು: ಎಲ್. ಮನ್ವಂತ್ ಕುಮಾರ್ ಮತ್ತು ಪಾರಸ್ ಗುರುಭಕ್ಷ್ ಆರ್ಯ ಕೊನೆ ವಿಕೆಟ್ ಜೊತೆಯಾಟದಲ್ಲಿ ಸೇರಿಸಿದ 41 ರನ್‌ಗಳಿಂದ ಕರ್ನಾಟಕವು ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಕೇರಳ ವಿರುದ್ಧದ ಪಂದ್ಯದಲ್ಲಿ ಮೊದಲ ಇನಿಂಗ್ಸ್ ಮುನ್ನಡೆ ಗಳಿಸಿತು.

ಆಲೂರಿನ 3ನೇ ಮೈದಾನದಲ್ಲಿ ನಡೆಯುತ್ತಿರುವ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಕೇರಳ ತಂಡವು 72.5 ಓವರ್‌ಗಳಲ್ಲಿ 327 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಬ್ಯಾಟಿಂಗ್ ಮಾಡಿದ ಕರ್ನಾಟಕ ತಂಡಕ್ಕೆ ಅನೀಶ್ವರ್ ಗೌತಮ್ (71 ರನ್) ಮತ್ತು ಕೃತಿಕ್ ಕೃಷ್ಣ (68 ರನ್) ಅರ್ಧಶತಕ ಗಳಿಸಿ ಆಸರೆಯಾದರು.

ಆದರೂ ತಂಡವು 294 ರನ್‌ಗಳಿಗೆ 9 ವಿಕೆಟ್ ಕಳೆದುಕೊಂಡಿತು. ಇನಿಂಗ್ಸ್ ಹಿನ್ನಡೆಯ ಆತಂಕ ಎದುರಿಸಿತು. ಈ ಹಂತದಲ್ಲಿ ಕ್ರೀಸ್‌ನಲ್ಲಿದ್ದ ಮನ್ವಂತ್ (57; 82ಎ) ಅರ್ಧಶತಕ ಗಳಿಸಿದರು. ಅವರಿಗೆ ಪಾರಸ್ ಗುರುಭಕ್ಸ್ ಆರ್ಯ (ಔಟಾಗದೆ 4; 23ಎಸೆತ) ಜೊತೆ ನೀಡಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕೇರಳ: 72.5 ಓವರ್‌ಗಳಲ್ಲಿ 327. ಕರ್ನಾಟಕ: 88.3 ಓವರ್‌ಗಳಲ್ಲಿ 335 (ಮೋನಿಷ್ ರೆಡ್ಡಿ 38, ಕೆ.ಪಿ. ಕಾರ್ತಿಕೇಯ 45, ಅನೀಶ್ವರ್ ಗೌತಮ್ 71, ಕೃತಿಕ್ ಕೃಷ್ಣ 68, ಎಲ್. ಮನ್ವಂತ್ ಕುಮಾರ್ 57, ಅಭಿಜಿತ್ ಪ್ರವೀಣ 35ಕ್ಕೆ2) ಎರಡನೇ ಇನಿಂಗ್ಸ್: ಕೇರಳ: 8 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 43 (ಒಮರ್ ಅಬುಬಕರ್ ಔಟಾಗದೆ 23, ಪವನ್ ಶ್ರೀಧರ್ ಔಟಾಗದೆ 19)

ನಗರದಲ್ಲಿ ಇಂದು

2023 ಮತ್ತು 2024ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಪ್ರಶಸ್ತಿ ಪುರಸ್ಕೃತರ ಪರಿಚಯ, ಪುಸ್ತಕ ಬಿಡುಗಡೆ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಡಾ.ಸಿ. ಎನ್. ಅಶ್ವತ್ಥನಾರಾಯಣ, ಅತಿಥಿಗಳು: ಶೋಭಾ ಕರಂದ್ಲಾಜೆ, ಕೆ.ವಿ. ಪ್ರಭಾಕರ್, ಬಿ.ಬಿ. ಕಾವೇರಿ, ಆಯೋಜನೆ: ಕರ್ನಾಟಕ ಮಾಧ್ಯಮ ಅಕಾಡೆಮಿ, ಆಶಯ ನುಡಿ: ಆಯೇಶಾ ಖಾನುಂ, ಸ್ಥಳ: ಜೆ.ಎನ್. ಟಾಟಾ ಸಭಾಂಗಣ, ಐಐಎಸ್‌ಸಿ, ಮಲ್ಲೇಶ್ವರ, ಬೆಳಿಗ್ಗೆ 10.30

13ನೇ ವಾರ್ಷಿಕೋತ್ಸವ, ತಿರುಕಲ್ಯಾಣೋತ್ಸವ: ಸಾನ್ನಿಧ್ಯ: ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ನಿರ್ಮಲಾನಂದನಾಥ ಸ್ವಾಮೀಜಿ, ಅಧ್ಯಕ್ಷತೆ: ಎಸ್. ಆರ್. ವಿಶ್ವನಾಥ್, ಅತಿಥಿಗಳು: ಡಾ.ಕೆ. ಸುಧಾಕರ್, ರಾಮಲಿಂಗಾರೆಡ್ಡಿ, ಗೋಪಿನಾಥ್ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಶ್ರೀದೇವಿ ಭೂದೇವಿ ಸಮೇತ ರಂಗನಾಥಸ್ವಾಮಿ ದೇವಾಲಯ, ದಾಸನಪುರ, ತುಮಕೂರು ರಸ್ತೆ, ಬೆಳಿಗ್ಗೆ 10.30



ನಿರ್ಮಲಾನಂದ ನಾಥ ಸ್ವಾಮೀಜಿ

ಕವಿ ಸಿದ್ಧಲಿಂಗಯ್ಯ ಅವರ ಜನ್ಮ ದಿನಾಚರಣೆ: ಉದ್ಘಾಟನೆ: ಎಂ. ವೆಂಕಟಸ್ವಾಮಿ, ರವೀಂದ್ರ ಕೆ.ವಿ., ಅವರ ‘ನೆಲದ ಕಾಲುಗಳ ನೆನೆದು’ ಪುಸ್ತಕ ಬಿಡುಗಡೆ: ಜಯಕರ ಎಸ್.ಎಂ., ಅತಿಥಿಗಳು: ಶೇಖ್ ಲತೀಫ್, ಎಚ್. ವಿಶ್ವನಾಥ್, ಎಸ್.ಆರ್. ವಿಜಯಶಂಕರ, ಕೆ. ಶರೀಫಾ, ಉಪಸ್ಥಿತಿ: ಮಾನಸಾ ಸಿದ್ಧಲಿಂಗಯ್ಯ, ರಮಾಕುಮಾರಿ ಸಿದ್ಧಲಿಂಗಯ್ಯ, ಆಯೋಜನೆ: ನಾಡೋಜ ಕವಿ ಡಾ. ಸಿದ್ಧಲಿಂಗಯ್ಯ ಸ್ಮಾರಕ ಪ್ರತಿಷ್ಠಾನ, ಸ್ಥಳ: ಪ್ರೊ. ವೆಂಕಟಗಿರಿಗೌಡ ಸ್ಮಾರಕ ಸಭಾಂಗಣ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11

ಲಿವಿಂಗ್ ಲೈಟ್ಲಿ: ಮಾತು ಕಥೆ: ಆಯೋಜನೆ: ಸೆಂಟರ್ ಫಾರ್ ಪೆಸ್ಟೊರಾಲಿಸ್ಮ್, ಸಹಜೀವನ್, ಸ್ಥಳ: ಇಂದಿರಾ ಗಾಂಧಿ ಕಲಾ ಕೇಂದ್ರದ ಪ್ರಾದೇಶಿಕ ಕಚೇರಿ, ಮಲ್ಲತ್ತಹಳ್ಳಿ, ಬೆಳಿಗ್ಗೆ 11

60ನೇ ನಾದಜ್ಯೋತಿ ಸಂಗೀತ ಸಂಭ್ರಮ–2025: ‘ಶ್ರೀ ಪ್ರಸನ್ನ ವೆಂಕಟದಾಸರು’ ಚಿತ್ರ ಪ್ರದರ್ಶನ: ನಿರ್ದೇಶನ: ಮಧುಸೂದನ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಸೇವಾ ಸದನ, 14ನೇ ಕ್ರಾಸ್, ಮಲ್ಲೇಶ್ವರ, ಸಂಜೆ 6

ಭಾರತ ರಂಗ ಮಹೋತ್ಸವ ಅಂತರರಾಷ್ಟ್ರೀಯ ನಾಟಕೋತ್ಸವ: ಉತ್ಸವದ ಗೌರವ: ಎಸ್.ಜಿ. ಸಿದ್ಧರಾಮಯ್ಯ, ‘ಮಾಯರಿ ಮೈ ಕಾ ಸೇ ಕಹು’ ನಾಟಕ ಪ್ರದರ್ಶನ: ಪ್ರಸ್ತುತಿ: ರಾಷ್ಟ್ರೀಯ ನಾಟಕ ಶಾಲೆ ನವದೆಹಲಿ, ನಿರ್ದೇಶನ: ಅಜಯ್ ಕುಮಾರ್, ಸ್ಥಳ: ಕಲಾ ಗ್ರಾಮ ಮಲ್ಲತ್ತಹಳ್ಳಿ, ಸಂಜೆ 5ರಿಂದ



ಎಸ್.ಜಿ. ಸಿದ್ಧರಾಮಯ್ಯ

‘ಕೋಮಲ ಗಾಂಧಾರ’ ನಾಟಕ ಪ್ರದರ್ಶನ: ರಚನೆ: ಮಾ.ಸು. ಕೃಷ್ಣಮೂರ್ತಿ, ನಿರ್ದೇಶನ: ಶೀಬಾ ಮೂರ್ತಿ, ಉದ್ಘಾಟನೆ: ಕೃಷ್ಣಮೂರ್ತಿ, ಅಧ್ಯಕ್ಷತೆ: ಚಂದ್ರಶೇಖರ್, ಆಯೋಜನೆ: ಸಿಂಧು ಭೈರವಿ ಕಲಾ ತಂಡ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಕುಂದು ಕೊರತೆ | ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಮೇಲ್ ಮಾಡಿ: peoplesproblem@prajavani.co.in ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

‘ಪಾದಚಾರಿ ಮಾರ್ಗದಲ್ಲಿ ವಿದ್ಯುತ್ ಪರಿವರ್ತಕ’

ಬಸವೇಶ್ವರ ನಗರದ 2ನೇ ಬ್ಲಾಕ್‌ನ 3ನೇ ಹಂತದ ಐದನೇ ಮುಖ್ಯರಸ್ತೆಯಲ್ಲಿ ಕಟ್ಟಡವೊಂದರ ಮುಂಭಾಗಕ್ಕೆ ತಾಗಿಕೊಂಡಂತೆ ಪಾದಚಾರಿ ಮಾರ್ಗದ ಮೇಲೆಯೇ ಅಪಾಯಕಾರಿ ರೀತಿಯಲ್ಲಿ ವಿದ್ಯುತ್ ಪರಿವರ್ತಕ ಅಳವಡಿಸಲಾಗಿದೆ. ಹಲವು ವರ್ಷಗಳಿಂದಲೂ ಇದೇ ರೀತಿ ಮಕ್ಕಳ ಕೈಗೆಟಕುವಷ್ಟು ಎತ್ತರದಲ್ಲೇ ವಿದ್ಯುತ್ ಪರಿವರ್ತಕವನ್ನು ಇರಿಸಲಾಗಿದೆ. ಇದರಿಂದ ಒಂದೆಡೆ ಪಾದಚಾರಿಗಳು ನಡೆದಾಡಲು ತೊಂದರೆ ಇದ್ದರೆ, ಮಕ್ಕಳು ವಿದ್ಯುತ್ ಪರಿವರ್ತಕವನ್ನು ಮುಟ್ಟಿ ಅಪಾಯಕ್ಕೆ ಸಿಲುಕುವ ಸಾಧ್ಯತೆಯೂ ಇದೆ. ವಿದ್ಯುತ್ ಪರಿವರ್ತಕಕ್ಕೆ ಹೊಂದಿಕೊಂಡಿರುವ ವಸತಿ ಕಟ್ಟಡದಲ್ಲಿರುವವರು ಅಪಾಯದ ಜೊತೆಯಲ್ಲೇ ಬದುಕುವಂತಾಗಿದೆ. ವಿದ್ಯುತ್ ಪರಿವರ್ತಕವನ್ನು ಪಾದಚಾರಿ ಮಾರ್ಗದಿಂದ ತೆರವುಗೊಳಿಸುವಂತೆ ಬೆಸ್ಕಾಂ ಹಿರಿಯ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಸ್ಪಂದನ ದೊರಕಿಲ್ಲ. ಅಪಾಯಕಾರಿ ಸ್ಥಿತಿಯಲ್ಲಿರುವ ಈ ವಿದ್ಯುತ್ ಪರಿವರ್ತಕವನ್ನು ತಕ್ಷಣವೇ ತೆರವುಗೊಳಿಸಿ ಪಾದಚಾರಿಗಳು, ಮಕ್ಕಳು ಮತ್ತು ಸ್ಥಳೀಯ ನಿವಾಸಿಗಳನ್ನು ಆತಂಕದಿಂದ ಪಾರು ಮಾಡಬೇಕು.

ಸುರೇಶ್, ಬಸವೇಶ್ವರನಗರ

‘ರಸ್ತೆ ಮಧ್ಯದಲ್ಲಿರುವ ಈಚಲು ಮರ ತೆರವುಗೊಳಿಸಿ’



ಸರ್ವಜ್ಞನಗರ ವಿಧಾನಸಭೆ ಕ್ಷೇತ್ರದ ಕಾಚರಕನಹಳ್ಳಿ ವಾರ್ಡ್ ಸಂಖ್ಯೆ 29ರ ಮಂಗಳಾ ಬಡಾವಣೆಯ ವೈ ಕ್ರಾಸ್ ಹಾಗೂ 18ನೇ ಕ್ರಾಸ್‌ನ ರಸ್ತೆಯ ಮಧ್ಯದಲ್ಲಿ ಈಚಲು ಮರವಿದೆ. ಇಲ್ಲಿ ಮಂಗಳಾ ಬಡಾವಣೆ ನಿರ್ಮಾಣವಾಗಿ ಸುಮಾರು 30 ವರ್ಷಗಳಾಗಿವೆ. ಈ ಬಡಾವಣೆಗೆ ಸಂಪರ್ಕಿಸುವ ರಸ್ತೆಯ ಮಧ್ಯದಲ್ಲಿಯೇ ಈಚಲು ಮರವಿದ್ದು, ವಾಹನ ಸಂಚಾರಕ್ಕೆ ಅಡಚಣೆಯಾಗುತ್ತಿದೆ. ರಸ್ತೆಯಲ್ಲಿ ಮರ ಇರುವುದರಿಂದ ಅಪಘಾತಗಳು ಸಂಭವಿಸುತ್ತಿವೆ. ಈ ಬಗ್ಗೆ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಸಾರ್ವಜನಿಕರ ಸುಗಮ ಸಂಚಾರಕ್ಕಾಗಿ ಇಲ್ಲಿನ ಈಚಲು ಮರವನ್ನು ತೆರವುಗೊಳಿಸಬೇಕು.

ಬಿ. ಗೋಪಾಲ್ ರೆಡ್ಡಿ, ರಾಮಸ್ವಾಮಿಪಾಳ್ಯ

‘ಪಾದಚಾರಿ ಮಾರ್ಗ: ಕಿತ್ತುಹೋದ ಸ್ಲ್ಯಾಬ್’

ಶೇಷಾದ್ರಿ ರಸ್ತೆಯ ಸ್ವಾತಂತ್ರ್ಯ ಉದ್ಯಾನದಿಂದ ಕೆ.ಆರ್. ವೃತ್ತಕ್ಕೆ ಸಂಪರ್ಕಿಸುವ ರಸ್ತೆಯ ಮಹಾರಾಣಿ ಕಾಲೇಜಿನ ಬಳಿ ಪಾದಚಾರಿ ಸುರಂಗ ಮಾರ್ಗವಿದೆ. ಅದರ ಪಕ್ಕದಲ್ಲಿರುವ ಕಿರಿದಾದ ಪಾದಚಾರಿ ಮಾರ್ಗದಲ್ಲಿ ಹಾಕಿರುವ ಸಿಮೆಂಟ್ ಸ್ಲ್ಯಾಬ್ ಒಡೆದಿದೆ. ಇದರಿಂದ ಪಾದಚಾರಿಗಳ ಓಡಾಟಕ್ಕೆ ಸಮಸ್ಯೆಯಾಗಿದೆ. ಗುಂಡಿಯ ಒಂದು ಭಾಗದಲ್ಲಿ ಕಂಬಿಗಳಿದ್ದು, ಅದರ ಮೇಲೆ ಪುಟ್ಟದೊಂದು ಕಲ್ಲು ಇಟ್ಟಿದ್ದಾರೆ. ಉಳಿದ ಭಾಗ ಬಾಯ್ದೆರೆದಿದೆ. ಬೆಳಕಿನ ವ್ಯವಸ್ಥೆ ಇಲ್ಲದ ಕಾರಣ ರಾತ್ರಿ ವೇಳೆ ಓಡಾಡುವ ಪಾದಚಾರಿಗಳು ಈ ಗುಂಡಿಯಲ್ಲಿ ಬೀಳುವ ಅಪಾಯವಿದೆ. ಬಿಬಿಎಂಪಿ ಕೂಡಲೇ ಇಲ್ಲಿ ಪಾದಚಾರಿ ಮಾರ್ಗವನ್ನು ದುರಸ್ತಿಗೊಳಿಸಬೇಕು.

ದೇವರಾಜ, ಕಾಲೇಜು ವಿದ್ಯಾರ್ಥಿ

‘ಮರ ನೆಲಕ್ಕುರುಳುವ ಸಾಧ್ಯತೆ’

ಎನ್.ಆರ್. ಕಾಲೊನಿಯ ಬಸ್ ನಿಲ್ದಾಣದ ಸಮೀಪದಲ್ಲಿರುವ ಮರವೊಂದು ರಸ್ತೆಯ ಕಡೆಗೆ ವಾಲಿಕೊಂಡಿದೆ. ಇದರ ಬೇರುಗಳು ಮೇಲೆ ಬಂದಿದ್ದು, ಬುಡಕ್ಕೆ ಗೆದ್ದಲು ಹಿಡಿದಿದೆ. ಇಲ್ಲಿ ಮರದ ಸುತ್ತಮುತ್ತ ಹಲವರು ಕೈಗಾಡಿಯಲ್ಲಿ ಹೂವು ಮತ್ತು ತರಕಾರಿಯ ವ್ಯಾಪಾರ ಮಾಡುತ್ತಾರೆ. ಎಲ್ಲ ಸಂದರ್ಭಗಳಲ್ಲೂ ಇಲ್ಲಿ ಜನ ಇರುತ್ತಾರೆ. ಮಳೆಗಾಲ ಆರಂಭವಾಗಿದೆ. ಆಗಾಗ್ಗೆ ಬಿರುಗಾಳಿಯೂ ಬೀಸುತ್ತಿರುವುದರಿಂದ ಈ ಮರ ಯಾವುದೇ ಸಂದರ್ಭದಲ್ಲಿ ನೆಲಕ್ಕುರುಳುವ ಸಾಧ್ಯತೆಯಿದೆ. ಆದ್ದರಿಂದ ಬಿಬಿಎಂಪಿಯವರು ಈ ಬಗ್ಗೆ ಗಮನಹರಿಸಿ, ಅಗತ್ಯ ಕ್ರಮಗಳನ್ನು ಕೈಗೊಂಡರೆ ಮುಂದೆ ಆಗುವ ಅಪಾಯಗಳನ್ನು ತಪ್ಪಿಸಬಹುದು.

ನಾಗರಾಜ್, ಎನ್.ಆರ್. ಕಾಲೊನಿ

‘ರಾಜಕಾಲುವೆಯಲ್ಲಿ ಕಸದ ರಾಶಿ’

ನಗರದ ಶಾಮಣ್ಣ ಗಾರ್ಡನ್ ಪೈಪ್‌ಲೈನ್ ಕುವೆಂಪು ರಸ್ತೆಯ ರಾಜಕಾಲುವೆಯಲ್ಲಿ ಸ್ಥಳೀಯ ವ್ಯಾಪಾರಸ್ಥರು, ಕೈಗಾರಿಕೆಗಳ ಸಿಬ್ಬಂದಿ ರಾಶಿ–ರಾಶಿ ಕಸ ಸುರಿಯುತ್ತಿದ್ದಾರೆ. ರಾಜಕಾಲುವೆಯ ಮೂಲಕ ಹರಿದು ಬರುವ ಕಸದ ರಾಶಿ ಇಲ್ಲಿನ ಗಾಳಿ ಆಂಜನೇಯಸ್ವಾಮಿ ದೇವಸ್ಥಾನದ ಹತ್ತಿರ ಕಟ್ಟಿಕೊಳ್ಳುತ್ತದೆ. ಇದರಿಂದ ಇಡೀ ಪ್ರದೇಶವೇ ಗಬ್ಬೆದ್ದು ನಾರುತ್ತಿದ್ದು, ಸ್ಥಳೀಯರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಈ ಸಮಸ್ಯೆಯನ್ನು ಬಗೆಹರಿಸಬೇಕು. ರಾಜಕಾಲುವೆಯಲ್ಲಿ ಕಸ ಸುರಿಯುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು.

ರತ್ನಾಕರ ಬಿ.ಎಲ್., ಸುಂಕದಕಟ್ಟೆ

ವೇಶ್ಯಾವಾಟಿಕೆ: ಮಹಿಳೆ ವಿರುದ್ಧ ಎಫ್‌ಐಆರ್

ಬೆಂಗಳೂರು: ಹೆಚ್ಚಿನ ವೇತನದ ಉದ್ಯೋಗ ಕೊಡಿಸುವುದಾಗಿ ಆಮಿಷ ಒಡ್ಡಿ ಹೊರ ಜಿಲ್ಲೆಗಳಿಂದ ಯುವತಿಯರನ್ನು ಕರೆತಂದು ವೇಶ್ಯಾವಾಟಿಕೆ ನಡೆಸುತ್ತಿದ್ದ ಆರೋಪದ ಮೇಲೆ ಮಹಿಳೆಯ ವಿರುದ್ಧ ಜ್ಞಾನಭಾರತಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜ್ಞಾನಭಾರತಿಯ ಉಪ್ಕಾರ್ ಲೇಔಟ್‌ನ ಬಾಡಿಗೆ ಮನೆಯಲ್ಲಿ ವಾಸವಿರುವ ಗಿರಿಜಾ ಅಲಿಯಾಸ್ ಗೀತಾ ಅವರ ವಿರುದ್ಧ ಪ್ರಕರಣ ದಾಖಲಿಸಿ, ತನಿಖೆ ಕೈಗೊಂಡಿದ್ದಾರೆ.

‘ಆರೋಪಿಯು ಉತ್ತಮ ಉದ್ಯೋಗ ಕೊಡಿಸುವುದಾಗಿ, ಹೊರ ಜಿಲ್ಲೆಗಳಿಂದ ಯುವತಿಯರನ್ನು ಕರೆತಂದು ವೇಶ್ಯಾವಾಟಿಕೆ ನಡೆಸುತ್ತಿದ್ದ ಬಗ್ಗೆ ಮಾಹಿತಿ ಲಭಿಸಿತ್ತು. ಈಕೆಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಪರಿಚಯದ ಪುರುಷರಿಗೆ ಯುವತಿಯರ ಫೋಟೋವನ್ನು ವಾಟ್ಸ್‌ಆ್ಯಪ್ ಮೂಲಕ ಕಳಿಸಿ, ಹಣ ಗಳಿಸುತ್ತಿದ್ದಳು ಹಾಗೂ ಅವರನ್ನು ಮನೆಗೆ ಕರೆಸಿ ವೇಶ್ಯಾವಾಟಿಕೆ ನಡೆಸುತ್ತಿದ್ದಳು ಎಂಬುದು ಗೊತ್ತಾಗಿದೆ. ಆರೋಪಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಕಟ್ಟಡ ಕುಸಿತ: ಪೊಲೀಸರಿಗೆ ಐಐಎಸ್‌ಸಿ ತಜ್ಞರಿಂದ ವರದಿ ಸಲ್ಲಿಕೆ

‘ಮೂರರ ಬದಲು 6 ಅಂತಸ್ತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಣ್ಣೂರು ಪೊಲೀಸ್ ಠಾಣಾ ವ್ಯಾಪ್ತಿಯ ಬಾಬುಸಾ ಪಾಳ್ಯದಲ್ಲಿ ಕಳೆದ ಅಕ್ಟೋಬರ್ 22ರಂದು ನಿರ್ಮಾಣ ಹಂತದ ಕಟ್ಟಡ ಕುಸಿದ ಘಟನೆ ಸಂಬಂಧ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ತಜ್ಞರು ಪೊಲೀಸರಿಗೆ ವರದಿ ಸಲ್ಲಿಸಿದ್ದಾರೆ.

ಕಟ್ಟಡ ಕುಸಿಯಲು ಕಾರಣವೇನು ಎಂಬುದನ್ನು ಪತ್ತೆಹಚ್ಚಿ ವರದಿ ಸಲ್ಲಿಸಲು ಪೊಲೀಸರು ಕೋರಿದ್ದರು. ಐಐಎಸ್‌ಸಿಯ ಪ್ರೊ.ಚಂದ್ರಕಿಶನ್ ಅವರ ನೇತೃತ್ವದ ತಂಡವು ದುರಂತದ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ ವರದಿ ತಯಾರಿಸಿತ್ತು. 10 ಪುಟಗಳ ವರದಿಯನ್ನು ಹೆಣ್ಣೂರು ಠಾಣೆಯ ಇನ್‌ಸ್ಪೆಕ್ಟರ್ ಅವರಿಗೆ ಸಲ್ಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನಿವೇಶನದಲ್ಲಿದ್ದ ಮಣ್ಣು, ಕಟ್ಟಡ ನಿರ್ಮಾಣಕ್ಕೆ ಬಳಸಿದ್ದ ಸಿಮೆಂಟ್, ಎಂ–ಸ್ಯಾಂಡ್ ಹಾಗೂ ಇಟ್ಟಿಗೆ ಸೇರಿದಂತೆ ವಿವಿಧ ಸಾಮಗ್ರಿಗಳ ಮಾದರಿ ಸಂಗ್ರಹಿಸಿ ತಜ್ಞರು ಪರಿಶೀಲನೆ ನಡೆಸಿದ್ದರು. ಇದೀಗ ವರದಿ ಸಿದ್ಧಪಡಿಸಿ ಪೊಲೀಸರಿಗೆ ಸಲ್ಲಿಸಿದ್ದಾರೆ.

ಕಟ್ಟಡ ಕುಸಿದ ಸ್ಥಳದಲ್ಲಿ ನಡೆದಿದ್ದ ಕಾರ್ಯಾಚರಣೆ (ಸಂಗ್ರಹ ಚಿತ್ರ)

‘ಸಿಮೆಂಟ್ ಹಾಗೂ ಎಂ–ಸ್ಯಾಂಡ್ ಮಿಶ್ರಣವೂ ಉತ್ತಮವಾಗಿತ್ತು. ತಳಪಾಯದ ಆಳ ಸರಿಯಾಗಿ ತೆಗೆದಿರಲಿಲ್ಲ. ತಳಪಾಯದ ಸಾಮರ್ಥ್ಯ ಮೂರು ಅಂತಸ್ತಿನ ಕಟ್ಟಡ ನಿರ್ಮಾಣಕ್ಕಷ್ಟೇ ಸೂಕ್ತವಾಗಿತ್ತು. ಆದರೆ, ಆರು ಅಂತಸ್ತು ನಿರ್ಮಾಣ ಮಾಡಿದ್ದೇ ದುರಂತಕ್ಕೆ ಕಾರಣ’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

‘ಕಟ್ಟಡ ನಿರ್ಮಾಣಕ್ಕೂ ಮೊದಲು ಆಳವಿದ್ದ ಸ್ಥಳವನ್ನು ಎತ್ತರಿಸಲಾಗಿತ್ತು. ಆ ಬಳಿಕ ಮಣ್ಣು ಪರೀಕ್ಷಿಸದೆ ಸಾಧಾರಣವಾಗಿ ಅಡಿಪಾಯ ಹಾಕಿದ್ದರು. ಕಡಿಮೆ ಪ್ರಮಾಣದಲ್ಲಿ ತಳಪಾಯ ಹಾಕಿದ್ದರಿಂದ ಕಟ್ಟಡದ ತೂಕ ಹೆಚ್ಚಾಗಿ ಪಿಲ್ಲರ್‌ಗಳು ಕುಸಿತಗೊಂಡಿದ್ದವು’ ಎಂದು ವಿವರಿಸಲಾಗಿದೆ.

ಮುಖ್ಯಾಂಶಗಳು

- ಕಡಿಮೆ ಆಳದ ತಳಪಾಯ ಹಾಕಿದ್ದರಿಂದ ಪಿಲ್ಲರ್‌ಗಳ ಕುಸಿತ
- ಬಾಬುಸಾ ಪಾಳ್ಯದಲ್ಲಿ ಕಳೆದ ಅಕ್ಟೋಬರ್ 22ರಂದು ಕಟ್ಟಡ ಕುಸಿದ ಘಟನೆ
- ಬಿಹಾರ, ಉತ್ತರ ಕರ್ನಾಟಕದ ಒಂಬತ್ತು ಕಾರ್ಮಿಕರ ಸಾವಿಗೆ ಕಾರಣವಾಗಿದ್ದ ಅವಘಡ

ದುರಂತದಲ್ಲಿ ಬಿಹಾರ ಹಾಗೂ ಉತ್ತರ ಕರ್ನಾಟಕದ ಒಂಬತ್ತು ಕಾರ್ಮಿಕರು ಮೃತಪಟ್ಟಿದ್ದರು. ನಿರ್ಲಕ್ಷ್ಯ ಆರೋಪದಡಿ ಕಟ್ಟಡದ ಮಾಲೀಕ, ಗುತ್ತಿಗೆದಾರರನ್ನು ಹೆಣ್ಣೂರು ಠಾಣೆಯ ಪೊಲೀಸರು ಬಂಧಿಸಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಲೋಕಾಯುಕ್ತರು ಅವಘಡ ಸಂಭವಿಸಿದ್ದ ಸಂದರ್ಭದಲ್ಲಿ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದರು.

ಬಿಎಂಟಿಸಿ ಬಸ್ ಹರಿದು ಮಹಿಳೆ ಸಾವು

ವಿವಾಹ ಕಾರ್ಯಕ್ರಮ ಮುಗಿಸಿ ಮರಳುವಾಗ ಅಪಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ (ಬಿಎಂಟಿಸಿ) ಬಸ್ ಹರಿದು ಮಹಿಳೆ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ನಾಯಂಡಹಳ್ಳಿ ಬಳಿಯ ಪಂತರಪಾಳ್ಯದಲ್ಲಿ ಶನಿವಾರ ರಾತ್ರಿ ನಡೆದಿದೆ.

ಸರೋಜಾ

ಕಾಮಾಕ್ಷಿಪಾಳ್ಯದ ನಿವಾಸಿ ಸರೋಜಾ (42) ಮದುವೆ ಸಮಾರಂಭದಲ್ಲಿ ಭಾಗವಹಿಸಿದ ಬಳಿಕ ಸಹೋದರನ ಸ್ಕೂಟರ್‌ನಲ್ಲಿ ಹೋಗುತ್ತಿದ್ದರು. ದ್ವಿಚಕ್ರ ವಾಹನದಿಂದ ಕೆಳಗೆ ಬಿದ್ದ ಅವರ ಮೇಲೆ ಬಸ್‌ನ ಚಕ್ರ ಹರಿದಿದೆ.

‘ಜ್ಞಾನಭಾರತಿಯಲ್ಲಿ ಸಂಬಂಧಿಕರೊಬ್ಬರ ಮದುವೆ ಮುಗಿಸಿಕೊಂಡು ಸರೋಜಾ ಹಾಗೂ ಅವರ ಸಹೋದರ ಸ್ಕೂಟರ್‌ನಲ್ಲಿ ತೆರಳುತ್ತಿದ್ದರು. ಪಂತರಪಾಳ್ಯದ ಪೂರ್ಣಿಮಾ ಟಿಂಬರ್ಸ್ ಮುಂಭಾಗದ ರಸ್ತೆಯಲ್ಲಿ ನಿಂತಿದ್ದ ಕಾರಿನ ಚಾಲಕ ಏಕಾಏಕಿ ಬಾಗಿಲು ತೆರೆದಿದ್ದಾನೆ. ಇದರಿಂದ, ಕಾರಿನ ಬಾಗಿಲಿಗೆ ಸ್ಕೂಟರ್ ಡಿಕ್ಕಿಯಾಗಿ ಸರೋಜಾ ಹಾಗೂ ಅವರ ಸಹೋದರ ರಸ್ತೆ ಮೇಲೆ ಬಿದ್ದಿದ್ದಾರೆ. ರಸ್ತೆಯ ಬಲಭಾಗದಲ್ಲಿ ಬರುತ್ತಿದ್ದ ಬಿಎಂಟಿಸಿ ಬಸ್‌ನ ಹಿಂಬದಿ ಚಕ್ರ ಸರೋಜಾ ಅವರ ತಲೆ ಮೇಲೆ ಹರಿದಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ನಿರ್ಲಕ್ಷ್ಯತನ ತೋರಿ ಮಹಿಳೆಯ ಸಾವಿಗೆ ಕಾರಣರಾದ ಆರೋಪದಡಿ ಕಾರು ಚಾಲಕ ಹಾಗೂ ಬಸ್ ಚಾಲಕನ ವಿರುದ್ಧ ಬ್ಯಾಟರಾಯನಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೂಡ್ಸ್ ವಾಹನ ಡಿಕ್ಕಿ: ಸವಾರ ಸಾವು

ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ದ್ವಿಚಕ್ರ ವಾಹನ ಸವಾರ ಮೃತಪಟ್ಟಿರುವ ಘಟನೆ ಬ್ಯಾಡರಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಮಾಗಡಿ ರಸ್ತೆಯಲ್ಲಿ ನಡೆದಿದೆ.

ಮಾಗಡಿ ರಸ್ತೆಯ ತುಂಗಾನಗರ ನಿವಾಸಿ ಕೆ.ಆರ್. ಜಗದೀಶ್ (26) ಮೃತಪಟ್ಟಿದ್ದು, ಅಪಘಾತದಲ್ಲಿ ಗಾಯಗೊಂಡ ಹಿಂಬದಿ ಸವಾರರಾದ ರವಿ ಮತ್ತು ಸುನಿಲ್ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

‘ಸ್ನೇಹಿತರ ವಿವಾಹ ಸಮಾರಂಭ ಮುಗಿಸಿಕೊಂಡು ಶನಿವಾರ ನಸುಕಿನ 2.15ರಲ್ಲಿ ಜಗದೀಶ್, ರವಿ, ಸುನಿಲ್ ಅವರು ರಾಯಲ್ ಎನ್‌ಫೀಲ್ಡ್ ಬೈಕ್‌ನಲ್ಲಿ ಸುಂಕದಕಟ್ಟೆ ಕಡೆಯಿಂದ ನೈಸ್ ರಸ್ತೆಗೆ ತೆರಳುತ್ತಿದ್ದರು. ವೇಗವಾಗಿ ಬಂದ ಗೂಡ್ಸ್ ವಾಹನದ ಚಾಲಕ, ಬೈಕ್‌ಗೆ ಡಿಕ್ಕಿ ಹೊಡೆದಿದ್ದಾನೆ. ಬೈಕ್ ಓಡಿಸುತ್ತಿದ್ದ ಜಗದೀಶ್ ಅವರ ಎದೆ ಹಾಗೂ ದೇಹದ ಇತರೆ ಕಡೆ ತೀವ್ರ ಪೆಟ್ಟು ಬಿತ್ತು. ತಕ್ಷಣ ಅವರನ್ನು ಕೆ.ಸಿ. ಜನರಲ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ತಪಾಸಣೆ ನಡೆಸಿದ ವೈದ್ಯರು, ಮೃತಪಟ್ಟಿದ್ದಾರೆ ಎಂದು ಘೋಷಿಸಿದರು’ ಎಂದು ಪೊಲೀಸರು ತಿಳಿಸಿದರು.

ಅಪಘಾತದಲ್ಲಿ ಸುನಿಲ್ ಅವರ ಬಲಗೈಗೆ ಹಾಗೂ ರವಿ ಅವರಿಗೆ ಸಣ್ಣಪುಟ್ಟ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಅಜಾಗರೂಕತೆಯಿಂದ ವಾಹನ ಚಾಲನೆ ಮಾಡಿದ ಆರೋಪದ ಮೇಲೆ ಗೂಡ್ಸ್ ವಾಹನ ಚಾಲಕನ ವಿರುದ್ಧ ಕಾಮಾಕ್ಷಿ ಪಾಳ್ಯ ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕೊಡವರ ಪಾದಯಾತ್ರೆ ಆರಂಭ

ಕೊಡವ ಸಂಸ್ಕೃತಿ ಉಳಿವಿಗೆ ‘ಕೊಡವಾಮೆ ಬಾಳೋ’ ನಡಿಗೆ

ಕೊಡವ ಸಂಸ್ಕೃತಿ ಉಳಿವಿಗೆ ಒತ್ತಾಯಿಸಿ ಕೇರಳ ಗಡಿ ಭಾಗ ಕುಟ್ಟದಲ್ಲಿ ಭಾನುವಾರ ಆರಂಭವಾದ ಕೊಡವ ಜನಾಂಗದ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದ ಅಪಾರ ಜನಸ್ತೋಮ

ಪ್ರಜಾವಾಣಿ ವಾರ್ತೆ

ಗೋಣಿಕೊಪ್ಪಲು (ಕೊಡಗು ಜಿಲ್ಲೆ): ಕೊಡವ ಸಂಸ್ಕೃತಿಯ ಉಳಿವಿಗೆ ಒತ್ತಾಯಿಸಿ ಸಾವಿರಾರು ಸಂಖ್ಯೆಯಲ್ಲಿ ಸೇರಿದ ಕೊಡವರು ಸಮೀಪದ ಕೇರಳ ಗಡಿ ಭಾಗ ಕುಟ್ಟದಿಂದ ಭಾನುವಾರ ‘ಕೊಡವಾಮೆ ಬಾಳೋ’ ಪಾದಯಾತ್ರೆ ಆರಂಭಿಸಿದರು.

ಘೋಷಣೆಗಳು, ಭಾಷಣಗಳು ಇಲ್ಲದೆ ಮೌನವಾಗಿ ಕುಟ್ಟ ಗ್ರಾಮದ ಕೊಡವ ಸಮಾಜದ ಆವರಣದಲ್ಲಿ ಸೇರಿ ಸಾಲಾಗಿ ಹೆಜ್ಜೆ ಹಾಕಿದ ಅವರು, 8 ಕಿ.ಮೀ. ದೂರ ಸಾಗಿ ಟಿ.ಶೆಟ್ಟಿಗೇರಿಯಲ್ಲಿ ವಾಸ್ತವ್ಯ ಹೂಡಿದರು. ಸೋಮವಾರ ಪೊನ್ನಂಪೇಟೆ ಮತ್ತು ಗೋಣಿಕೊಪ್ಪಲು ಭಾಗಕ್ಕೆ ಪಾದಯಾತ್ರೆ ಬರಲಿದೆ. ಫೆ. 7ರಂದು ಮಡಿಕೇರಿಯಲ್ಲಿ ಬೃಹತ್ ಸಮಾವೇಶ ಆಯೋಜಿಸಲಾಗಿದೆ.

ನೂರಾರು ವಾಹನಗಳಲ್ಲಿ ಕೊಡಗಿನ ವಿವಿಧೆಡೆಗಳಿಂದ ಜನರು ಬಂದರು. ಕೊಡವ ಸಾಂಪ್ರದಾಯಿಕ ದಿರಿಸು ತೊಟ್ಟು ತಮ್ಮ ಸಂಸ್ಕೃತಿ ಮೆರೆದರು. ಪುರುಷರು, ಮಹಿಳೆಯರು, ಯುವಕರು, ಮಕ್ಕಳು ಪಾದಯಾತ್ರೆಯಲ್ಲಿ ಹೆಜ್ಜೆ ಹಾಕಿದರು.

‘ಕೊಡವ ಸಂಸ್ಕೃತಿಯ ಮೇಲೆ ಹೆಚ್ಚುತ್ತಿರುವ ದಬ್ಬಾಳಿಕೆ ತಪ್ಪಿಸಿ’, ‘ಕೊಡವ ಸಂಸ್ಕೃತಿ ಉಳಿಸಿ’ ಮೊದಲಾದ ಭಿತ್ತಿಪತ್ರಗಳು ಪಾದಯಾತ್ರೆಯಲ್ಲಿ ಕಂಡವು.

ಅಖಿಲ ಕೊಡವ ಸಮಾಜ ಸೇರಿದಂತೆ ಹಲವು ಕೊಡವ ಸಂಘ, ಸಂಸ್ಥೆಗಳು, ಸಂಘಟನೆಗಳು ಬೆಂಬಲ ನೀಡಿವೆ.

ಕಾರಿನ ಎದುರು ಬೈಕ್ ಬಂದಿದ್ದನ್ನು ಪ್ರಶ್ನಿಸಿ ಥಳಿತ • ಕಾರು ಚಾಲಕ, ಆತನ ಇಬ್ಬರು ಸ್ನೇಹಿತರ ಬಂಧನ

ಬೈಕ್ ಸವಾರನ ಮೇಲೆ ಹಲ್ಲೆ: ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರು ಚಾಲಕ ಹಾಗೂ ಆತನ ಇಬ್ಬರು ಸ್ನೇಹಿತರು ದ್ವಿಚಕ್ರ ವಾಹನ ಸವಾರನ ಮೇಲೆ ಹಲ್ಲೆ ನಡೆಸಿ ಕೊಲೆಗೆ ಯತ್ನಿಸಿದ ಆರೋಪದ ಮೇಲೆ ಸುಬ್ರಹ್ಮಣ್ಯನಗರ ಠಾಣೆ ಪೊಲೀಸರು ಮೂವರನ್ನು ಬಂಧಿಸಿದ್ದಾರೆ.

ಹಲ್ಲೆಗೆ ಒಳಗಾಗಿರುವ ಮಲ್ಲೇಶ್ವರದ ಮಿಲ್ಕ್ ಕಾಲೊನಿ ನಿವಾಸಿ ಎನ್. ಭರತ್ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಘಟನೆ ಸಂಬಂಧ ನಂದಿನಿ ಲೇಔಟ್‌ನ ಪವನ್, ಮಹೇಶ್ ಮತ್ತು ಅಭಿಲಾಷ್ ಎಂಬುವವರನ್ನು ಬಂಧಿಸಲಾಗಿದೆ.

ಜ.28ರ ರಾತ್ರಿ 1.30ಕ್ಕೆ ಮಲ್ಲೇಶ್ವರ 17ನೇ ಅಡ್ಡರಸ್ತೆಯಲ್ಲಿರುವ ಪಬ್ ಬಳಿ ಕಾರಿನ ಎದುರು ಬೈಕ್ ಬಂದಿದ್ದನ್ನು ಪ್ರಶ್ನಿಸಿ ಭರತ್ ಮೇಲೆ ಹಲ್ಲೆ ನಡೆಸಿದ್ದರು. ಅಲ್ಲದೇ ಅವರ ಮೇಲೆ ಕಾರು ಚಲಾಯಿಸಲು ಯತ್ನಿಸಿದ್ದರು. ಪರಿಣಾಮ ಭರತ್ ಅವರ ತಲೆ, ಹೊಟ್ಟೆ ಮತ್ತು ಬೆನ್ನಿಗೆ ತೀವ್ರ ಸ್ವರೂಪದ ಗಾಯವಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಮೊಬೈಲ್ ಸುಲಿಗೆಕೋರನ ಬಂಧನ: ನಗರದ ವಿವಿಧೆಡೆ ಸಾರ್ವಜನಿಕರಿಂದ ಮೊಬೈಲ್ ಫೋನ್‌ಗಳನ್ನು ಸುಲಿಗೆ ಮಾಡುತ್ತಿದ್ದ ಆರೋಪಿಯನ್ನು ಚಂದ್ರಾ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜಗಜೀವನ್ ರಾಮ್ ನಗರ ನಿವಾಸಿ ಮೊಹಮದ್ ಅಫ್ಜಲ್ ಎಂಬಾತನನ್ನು ಬಂಧಿಸಿ, ₹ 1.27 ಲಕ್ಷ ಮೌಲ್ಯದ ಎಂಟು ಮೊಬೈಲ್ ಫೋನ್ ಜಪ್ತಿ ಮಾಡಿದ್ದಾರೆ.

ಠಾಣಾ ವ್ಯಾಪ್ತಿಯ ಬಿ.ಸಿ.ಸಿ ಲೇಔಟ್‌ನಲ್ಲಿ ವಾಸವಿರುವ ವ್ಯಕ್ತಿಯೊಬ್ಬರು ಮನೆ ಮುಂಭಾಗದ ರಸ್ತೆಯಲ್ಲಿ ವಾಯುವಿಹಾರ ಮಾಡುತ್ತಿದ್ದ ವೇಳೆ ಬೈಕ್‌ನಲ್ಲಿ ಬಂದ ಇಬ್ಬರು ಅವರ ಕೈಯಲ್ಲಿದ್ದ ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದರು.

ಪ್ರಕರಣ ದಾಖಲಿಸಿಕೊಂಡ ಪೊಲೀಸರು, ವಿವಿಧ ಆಯಾಮಗಳಲ್ಲಿ ತನಿಖೆ ಕೈಗೊಂಡು ಆರೋಪಿಯನ್ನು ಬಂಧಿಸಿದರು.

‘ಜೆ.ಜೆ.ನಗರದ ಪಾದರಾಯನಪುರದಲ್ಲಿ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನನ್ನು ಕಳುವಾಗಿದ್ದ ಮೊಬೈಲ್ ಸಮೇತ ವಶಪಡಿಸಿಕೊಳ್ಳಲಾಯಿತು. ಮೊಹಮದ್ ಅಫ್ಜಲ್ ಜತೆ ಸೇರಿ ಮೊಬೈಲ್ ಸುಲಿಗೆ ಮಾಡಿರುವುದಾಗಿ ವಿಚಾರಣೆ ವೇಳೆ ಬಾಲಕ ಒಪ್ಪಿಕೊಂಡ. ಬಳಿಕ ಬಾಲಕನಿಗೆ ತಿಳಿವಳಿಕೆ ನೀಡಿ ಕಳುಹಿಸಲಾಯಿತು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಪ್ರಕರಣದಲ್ಲಿ ಭಾಗಿಯಾಗಿದ್ದ ಮೊಹಮದ್ ಅಫ್ಜಲ್‌ನನ್ನು ಜೆ.ಜೆ. ನಗರದ ಆರನೇ ಅಡ್ಡರಸ್ತೆಯಲ್ಲಿ ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ನಗರದ ವಿವಿಧೆಡೆ ಮೊಬೈಲ್ ಸುಲಿಗೆ ಮಾಡಿರುವುದನ್ನು ಒಪ್ಪಿಕೊಂಡ. ಆರೋಪಿ ಮನೆಯಲ್ಲಿದ್ದ ಏಳು ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ’ ಎಂದು ಹೇಳಿದರು.

‘ಆರೋಪಿ ಯಾವುದೇ ಕೆಲಸ ಮಾಡುತ್ತಿರಲಿಲ್ಲ. ಸುಲಭವಾಗಿ ಹಣ ಸಂಪಾದಿಸಲು ಹಾಗೂ ನಿತ್ಯದ ಖರ್ಚಿಗಾಗಿ ಮೊಬೈಲ್ ಸುಲಿಗೆ ಮಾಡುತ್ತಿದ್ದುದಾಗಿ ಹೇಳಿದ್ದಾನೆ. ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ’ ಎಂದು ತಿಳಿಸಿದರು.

ಇಬ್ಬರ ಬಂಧನ: ನಾಲ್ಕು ದ್ವಿಚಕ್ರ ವಾಹನ ಜಪ್ತಿ

ಬೆಂಗಳೂರು: ಮನೆ ಮುಂದೆ ಹಾಗೂ ಪಾರ್ಕಿಂಗ್ ಸ್ಥಳದಲ್ಲಿ ನಿಲುಗಡೆ ಮಾಡಿದ್ದ ದ್ವಿಚಕ್ರ ವಾಹನಗಳನ್ನು ಕಳವು ಮಾಡಿದ್ದ ಇಬ್ಬರು ಆರೋಪಿಗಳನ್ನು ಪುಟ್ಟೇನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜೆ.ಪಿ.ನಗರ ನಿವಾಸಿಗಳಾದ ಚಿರಂಜೀವಿ ಮತ್ತು ಸೈಯದ್ ಸಮೀರ್ ಎಂಬುವವರನ್ನು ಬಂಧಿಸಿ, ₹2.10 ಲಕ್ಷ ಮೌಲ್ಯದ ನಾಲ್ಕು ದ್ವಿಚಕ್ರ ವಾಹನ ವಶಪಡಿಸಿಕೊಂಡಿದ್ದಾರೆ.

ಠಾಣಾ ವ್ಯಾಪ್ತಿಯ ಜೆ.ಪಿ.ನಗರ 7ನೇ ಹಂತದ ನಟರಾಜ್ ಲೇಔಟ್ ನಿವಾಸಿಯೊಬ್ಬರ ಮನೆಯ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನ ಕಳವಾಗಿತ್ತು. ಈ ಸಂಬಂಧ ವಾಹನ ಮಾಲೀಕರು ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು, ಬಾತ್ಮೀದಾರರ ಮಾಹಿತಿ ಆಧರಿಸಿ ಆರೋಪಿಗಳನ್ನು ವಾಹನ ಸಮೇತ ಬಂಧಿಸಿದರು.

‘ಆರೋಪಿಗಳ ಪೈಕಿ ಚಿರಂಜೀವಿ ವಿರುದ್ಧ ದರೋಡೆ, ಕಳ್ಳತನ ಪ್ರಕರಣ ದಾಖಲಾಗಿದ್ದರೆ, ಸೈಯದ್ ಸಮೀರ್ ವಿರುದ್ಧ ಬೈಕ್ ಕಳ್ಳತನ ಪ್ರಕರಣ ದಾಖಲಾಗಿತ್ತು. ಕೆಲ ದಿನಗಳ ಹಿಂದಷ್ಟೇ ಜೈಲಿನಿಂದ ಹೊರ ಬಂದಿದ್ದ ಸಮೀರ್, ಮತ್ತೆ ದ್ವಿಚಕ್ರ ವಾಹನ ಕಳವು ಕೃತ್ಯದಲ್ಲಿ ಭಾಗಿಯಾಗಿದ್ದಾನೆ. ಆರೋಪಿಗಳು ರಾತ್ರಿ ವೇಳೆ ಸಂಚರಿಸಿ, ಮನೆ ಮುಂದೆ ಹಾಗೂ ಪಾರ್ಕಿಂಗ್ ಸ್ಥಳದಲ್ಲಿ ನಿಲ್ಲಿಸಿದ್ದ ವಾಹನಗಳ ಹ್ಯಾಂಡಲ್ ಲಾಕ್ ಮುರಿದು ಕಳ್ಳತನ ಮಾಡುತ್ತಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ನಗರದ ವಿವಿಧೆಡೆ ವಾಹನಗಳನ್ನು ಕಳವು ಮಾಡಿರುವುದನ್ನು ಆರೋಪಿಗಳು ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾರೆ. ಪುಟ್ಟೇನಹಳ್ಳಿ ಠಾಣೆಯ ಮೂರು ಹಾಗೂ ಜೆ.ಪಿ. ನಗರ ಠಾಣೆಯ ಒಂದು ದ್ವಿಚಕ್ರ ವಾಹನ ಕಳವು ಪ್ರಕರಣ ಪತ್ತೆಯಾಗಿದೆ. ಲಕ್ಷ್ಮೀ ದೇವಸ್ಥಾನದ ಹಿಂಭಾಗದ ಖಾಲಿ ಜಾಗದಲ್ಲಿ ನಿಲ್ಲಿಸಿದ್ದ ಕಳವು ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ’ ಎಂದು ಹೇಳಿದರು.

ಗ್ಯಾಸ್ ರೀಫಿಲ್ಲಿಂಗ್ ಅಂಗಡಿ ಮೇಲೆ ದಾಳಿ

ಖಾಸಗಿ ಮತ್ತು ಸರ್ಕಾರಿ ಸ್ವಾಮ್ಯದ ಗೃಹ ಬಳಕೆಯ ಗ್ಯಾಸ್ ಸಿಲಿಂಡರ್ ಅನ್ನು ಅಕ್ರಮವಾಗಿ ದಾಸ್ತಾನು ಮಾಡಿಕೊಂಡು ರೀಫಿಲ್ಲಿಂಗ್ ಮಾಡುತ್ತಿದ್ದ ಅಂಗಡಿ ಮತ್ತು ಗೋದಾಮಿನ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ.

ಸುಮಾರು ₹4 ಲಕ್ಷ ಮೌಲ್ಯದ 80 ಗ್ಯಾಸ್ ಸಿಲಿಂಡರ್, ಮೂರು ರೀಫಿಲ್ಲಿಂಗ್ ರಾಡ್ ಹಾಗೂ ತೂಕದ ಯಂತ್ರ ಜಪ್ತಿ ಮಾಡಿದ್ದಾರೆ.

ಜಯನಗರ 1ನೇ ಬ್ಲಾಕ್‌ನ ಸೋಮೇಶ್ವರ ನಗರದ ಅಂಗಡಿ ಮತ್ತು ಗೋದಾಮಿನಲ್ಲಿ ಅಕ್ರಮವಾಗಿ ಗ್ಯಾಸ್ ಸಿಲಿಂಡರ್ ದಾಸ್ತಾನು ಮಾಡಿ ಚಿಕ್ಕ ಗ್ಯಾಸ್ ಸಿಲಿಂಡರ್‌ಗಳಿಗೆ ರೀಫಿಲ್ಲಿಂಗ್ ಮಾಡಿ ಮಾರಾಟ ಮಾಡುತ್ತಿರುವ ಬಗ್ಗೆ ದೊರೆತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿದ್ದರು. ದಾಳಿ ಒಬ್ಬರು ಸಿಕ್ಕಿದ್ದು, ಮತ್ತಿಬ್ಬರು ತಲೆಮರೆಸಿಕೊಂಡಿದ್ದು, ಬಂಧನಕ್ಕೆ ಶೋಧ ನಡೆಸಲಾಗಿದೆ. ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ ವಾರ್ತೆ

ವಿಜಯ್ ಕುಮಾರ್



ಬೆಂಗಳೂರು: ಭಾರತ್ ಹೆವಿ ಎಲೆಕ್ಟ್ರಿಕಲ್ (ಬಿಎಚ್‌ಇಎಲ್) ಕಂಪನಿಯ ನಿವೃತ್ತ ಉದ್ಯೋಗಿಯೂ ಆಗಿದ್ದ ಸಮಾಜ ಸೇವಕ ವಿಜಯ್ ಕುಮಾರ್ (67) ಅವರು ಭಾನುವಾರ ನಿಧನರಾಗಿದ್ದಾರೆ.

ಬಾಪೂಜಿ ನಗರದ ನಿವಾಸಿಯಾಗಿದ್ದ ಅವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ.

ಟಿ.ಆರ್.ಮಿಲ್ ಚಿತಾಗಾರದಲ್ಲಿ ಸೋಮವಾರ ಅವರ ಅಂತ್ಯಸಂಸ್ಕಾರ ನಡೆಯಲಿದೆ.

ಮೈಸೂರು ರಸ್ತೆಯಲ್ಲಿರುವ ಬಿಎಚ್‌ಇಎಲ್‌ನ ಎಲೆಕ್ಟ್ರಾನಿಕ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಅವರು, 2017ರಲ್ಲಿ ನಿವೃತ್ತಿ ಹೊಂದಿದ್ದರು.

ಬಿಜಿಎಸ್ ಆಸ್ಪತ್ರೆಯಲ್ಲಿ ಅವರಿಗೆ ಬೈಪಾಸ್ ಶಸ್ತ್ರಚಿಕಿತ್ಸೆಯನ್ನು ಭಾನುವಾರ ನಡೆಸಲಾಗಿತ್ತು.

ರಮೇಶ್ ಗೌಡ

ಬೆಂಗಳೂರು: ಪತ್ರಿಕಾ ವಿತರಕರಾಗಿ ಕಾರ್ಯನಿರ್ವಹಿಸುತ್ತಿದ್ದ ಚನ್ನನಾಯಕನಪಾಳ್ಯದ ನಿವಾಸಿ ರಮೇಶ್ ಗೌಡ (48) ಅವರು ಶನಿವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ.

ಇವರು ಭವಾನಿನಗರದಲ್ಲಿ ಪತ್ರಿಕಾ ವಿತರಣೆ ಮಾಡುತ್ತಿದ್ದರು.

ಚನ್ನನಾಯಕನಪಾಳ್ಯದ ಸ್ಮಶಾನದಲ್ಲಿ ಅಂತ್ಯಕ್ರಿಯೆ ಭಾನುವಾರ ನೆರವೇರಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಗೂಂಡಾ ಕಾಯ್ದೆಯಡಿ ರೌಡಿ ರಾಜೇಶ್ ಸೆರೆ

ಬೆಂಗಳೂರು: ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿರುವ ರೌಡಿಶೀಟರ್ ರಾಜೇಶ್ ಅಲಿಯಾಸ್ ಮೊಟ್ಟೆ ಎಂಬಾತನನ್ನು ಕೆಂಪೇಗೌಡನಗರ ಠಾಣೆ ಪೊಲೀಸರು ಗೂಂಡಾ ಕಾಯ್ದೆಯಡಿ ಬಂಧಿಸಿದ್ದಾರೆ.

2018ರಿಂದ ನಿರಂತರವಾಗಿ ಅಪರಾಧ ಕೃತ್ಯಗಳಲ್ಲಿ ರಾಜೇಶ್ ಭಾಗಿಯಾಗಿದ್ದಾನೆ. ಕೊಲೆ ಯತ್ನ, ಸುಲಿಗೆ, ಹಲ್ಲೆ, ಸಾಕ್ಷಿಗಳಿಗೆ ಬೆದರಿಕೆ ಸೇರಿ 12 ಪ್ರಕರಣಗಳಲ್ಲಿ ಆರೋಪಿಯಾಗಿದ್ದಾನೆ ಎಂದು ಪೊಲೀಸರು ತಿಳಿಸಿದರು.

ನ್ಯಾಯಾಲಯದ ವಿಚಾರಣಾ ಪ್ರಕ್ರಿಯೆಗಳಿಗೆ ಹಾಜರಾಗದೆ ತಲೆಮರೆಸಿಕೊಂಡಿದ್ದ ರಾಜೇಶ್ ವಿರುದ್ಧ ಜಾಮೀನು ರಹಿತ ಐದು ವಾರಂಟ್‌ಗಳು ಜಾರಿಯಾಗಿವೆ. ಆರೋಪಿಯು ಪದೇ ಪದೇ ಅಪರಾಧ ಕೃತ್ಯಗಳಲ್ಲಿ ಭಾಗಿ ಆಗುತ್ತಿರುವ ಕಾರಣ ಗೂಂಡಾ ಕಾಯ್ದೆಯಡಿ ಬಂಧಿಸಿ ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ ಎಂದರು.

₹27 ಲಕ್ಷ ಮೌಲ್ಯದ ನಕಲಿ ಸಿಗರೇಟ್ ಜಪ್ತಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಐಟಿಸಿ ಸಿಗರೇಟ್ ಬ್ರ್ಯಾಂಡ್ ಹೆಸರಿನಲ್ಲಿ ನಕಲಿ ಸಿಗರೇಟ್ ಮಾರುತ್ತಿದ್ದ ಕೇರಳದ ಆರೋಪಿಯನ್ನು ವಿಲ್ಸನ್ ಗಾರ್ಡನ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಐಟಿಸಿ ಕಂಪನಿಯ ಪ್ರತಿನಿಧಿ ಅನ್ವೇಷ್ ಅವರ ದೂರು ಆಧರಿಸಿ ಕಾರ್ಯಾಚರಣೆ ನಡೆಸಿದ ಪೊಲೀಸರು, ಕೇರಳದ ಯೂಸುಫ್ ಅವರನ್ನು ಬಂಧಿಸಿ, ₹27 ಲಕ್ಷ ಮೌಲ್ಯದ ನಕಲಿ ಸಿಗರೇಟ್, ಗೂಡ್ಸ್ ವಾಹನ ಹಾಗೂ ಕಾರು ಜಪ್ತಿ ಮಾಡಿದ್ದಾರೆ.

‘ಐಟಿಸಿ ಕಂಪನಿಯ ಹೆಸರು ಬಳಸಿ ತಯಾರಿಸಿದ ನಕಲಿ ಸಿಗರೇಟ್‌ಗಳ ಪೊಟ್ಟಣಗಳನ್ನು ಜ್ಯೂಸ್ ಬಾಕ್ಸ್‌ಗಳಲ್ಲಿ ಇಟ್ಟು ದೆಹಲಿಯಿಂದ ನಗರಕ್ಕೆ ಸರಬರಾಜು ಮಾಡಲಾಗಿತ್ತು. ಯಾರಿಗೂ ಅನುಮಾನ ಬಾರದಂತೆ ‘ಸೌರಾಷ್ಟ್ರ ಟ್ರ್ಯಾನ್ಸ್‌ಪೋರ್ಟ್’ ಹೆಸರಿನಲ್ಲಿ ಈ ಸಿಗರೇಟ್‌ಗಳನ್ನು ತರಿಸಿಕೊಳ್ಳಲಾಗುತ್ತಿತ್ತು’ ಎಂದು ಪೊಲೀಸರು ತಿಳಿಸಿದರು.

‘ಸಿಗರೇಟ್ ತುಂಬಿದ ಒಟ್ಟು 18 ಬಾಕ್ಸ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಯಾವ ಸ್ಥಳಗಳಿಗೆ ಇದನ್ನು ಪೂರೈಕೆ ಮಾಡಲಾಗುತ್ತಿತ್ತು ಎಂಬುದರ ಬಗ್ಗೆ ತನಿಖೆ ನಡೆಯುತ್ತಿದೆ. ಆರೋಪಿಯು ನಕಲಿ ಸಿಗರೇಟ್ ಪೊಟ್ಟಣಗಳನ್ನು ಕಡಿಮೆ ದರಕ್ಕೆ ಮಾರಾಟ ಮಾಡುತ್ತಿದ್ದ ಎಂಬುದು ತಿಳಿದುಬಂದಿದೆ’ ಎಂದು ಹೇಳಿದ್ದಾರೆ.

ಚಿನ್ನದಂಗಡಿ ಮಾಲೀಕ, ಪತ್ನಿ ಬಂಧನ

ತುಮಕೂರು: ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಚಿನ್ನ ಖರೀದಿಸಿ, ಬೆಲೆ ಹೆಚ್ಚಾದಾಗ ಮಾರಾಟ ಮಾಡಿ ದುಪ್ಪಟ್ಟು ಲಾಭ ಕೊಡುವುದಾಗಿ ಜನರನ್ನು ನಂಬಿಸಿ ಕೋಟ್ಯಂತರ ರೂಪಾಯಿ ವಂಚಿಸಿ ಪರಾರಿಯಾಗಿದ್ದ ಆಕಾಶ್ ಜ್ಯುವೆಲರ್ಸ್ ಮಾಲೀಕ ಶಿವಾನಂದಮೂರ್ತಿ, ಪತ್ನಿ ಅನ್ನಪೂರ್ಣ ಅವರನ್ನು ನಗರ ಠಾಣೆ ಪೊಲೀಸರು ಬೆಂಗಳೂರಿನಲ್ಲಿ ಬಂಧಿಸಿ ನಗರಕ್ಕೆ ಕರೆತಂದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಎಲ್.ಸಿದ್ಧಲಿಂಗಪ್ಪ ಎಂಬುವರು ನೀಡಿದ ದೂರಿನ ಮೇರೆಗೆ ಶಿವಾನಂದಮೂರ್ತಿ, ಅನ್ನಪೂರ್ಣ, ಪುತ್ರ ಆಕಾಶ್ ಮತ್ತು ಇತರರ ವಿರುದ್ಧ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

₹18 ಕೋಟಿ ವಂಚನೆ: ಆಕಾಶ್ ಜ್ಯುವೆಲರ್ಸ್ ಮಾಲೀಕರ ವಿರುದ್ಧ ಜ.29ರಿಂದ ಫೆ.2ರ ವರೆಗೆ ನಗರ ಠಾಣೆಯಲ್ಲಿ 56 ದೂರು ಸಲ್ಲಿಕೆಯಾಗಿವೆ. ಸುಮಾರು ₹18 ಕೋಟಿ ವಂಚಿಸಿರುವುದು ಈವರೆಗೆ ಸಲ್ಲಿಕೆಯಾದ ದೂರುಗಳಿಂದ ಗೊತ್ತಾಗಿದೆ.

ಕಾರ್ತಿಕ್ ಭಟ್‌ಗೆ ಯುವ ಇಂಚರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಚರ ಸುಗಮ ಸಂಗೀತ ಸಂಸ್ಥೆ ನೀಡುವ ‘ಯುವ ಇಂಚರ’ ಪ್ರಶಸ್ತಿಗೆ ತಬಲಾ ವಾದಕ ಕಾರ್ತಿಕ್ ಭಟ್ ಆಯ್ಕೆಯಾಗಿದ್ದಾರೆ.

ಫೆಬ್ರುವರಿ 14ರಂದು ಸಂಜೆ 5ಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಗ್ರ್ಯಾಮಿ ಪ್ರಶಸ್ತಿ ಪುರಸ್ಕೃತ ಪ್ರಕಾಶ್ ಸೊಂಟಕ್ಕೆ, ಆನಂದ್ ಮಾದಲಗೆರೆ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕಾ.ವೆಂ.ಶ್ರೀನಿವಾಸಮೂರ್ತಿ ವಿರಚಿತ ಗೀತೆಗಳನ್ನು ಗಾಯಕರು ಪ್ರಸ್ತುತಪಡಿಸಲಿದ್ದಾರೆ. ನಂತರ ಕಾರ್ತಿಕ್ ಭಟ್ ಅವರಿಂದ ತಬಲಾ ವಾದನ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಿಪಿಸಿಬಿ ಜೆನ್‌ಸೆಟ್ ಬಿಡುಗಡೆ

ಬೆಂಗಳೂರು: ಮಹೀಂದ್ರಾ ಆ್ಯಂಡ್ ಮಹೀಂದ್ರಾ ಲಿಮಿಟೆಡ್ ಉತ್ಪನ್ನಗಳ ಅಧಿಕೃತ ಉತ್ಪಾದಕರಾದ ಎಸ್ಕಾನ್ ಜೆನ್ಸೆಟ್ಸ್ ಕಂಪನಿಯ ಸಿಪಿಸಿಬಿ 4+ ಜೆನ್ ಸೆಟ್‌ಗಳನ್ನು ಮಹೀಂದ್ರಾ ಪವರೋಲ್‌ನ ಪ್ರಧಾನ ವ್ಯವಸ್ಥಾಪಕ ಸುಮಿತ್ ಗುಪ್ತಾ ಹಾಗೂ ಎಸ್ಕಾನ್ ಜೆನ್ಸೆಟ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಪ್ರಶಾಂತ್ ಧನ್ಧಾನಿಯಾ ಬಿಡುಗಡೆಗೊಳಿಸಿದರು.

ದಾಬಸ್‌ಪೇಟೆ ಘಟಕದಲ್ಲಿ ತಯಾರಿಸಿರುವ ಈ ಜೆನ್‌ಸೆಟ್‌ಗಳು ಆಧುನಿಕ ತಂತ್ರಜ್ಞಾನ ಹೊಂದಿರುವ ಕಾಮನ್ ರೇಲ್ ಡೀಸಲ್ ಎಂಜಿನ್ ಹೊಂದಿವೆ. ಇಂಧನ ಕ್ಷಮತೆ ಮತ್ತು ಹೆಚ್ಚಿನ ಕೆಲಸಕ್ಕೆ ಸೂಕ್ತವಾಗಿದೆ. ಕಡಿಮೆ ಮಾಲಿನ್ಯ ಹೊರಸೂಸುತ್ತದೆ. ಜೆನ್‌ಸೆಟ್‌ಗಳಿಗೆ ಸಂಬಂಧಿಸಿದ ಯಾವುದೇ ವಿಚಾರಗಳು, ದೂರುಗಳಿಗೆ ಸ್ಪಂದಿಸಲು ಎಲ್ಲೆಡೆ ಗ್ರಾಹಕ ಸೇವಾ ಕೇಂದ್ರಗಳು ಇವೆ ಎಂದು ಕಂಪನಿ ತಿಳಿಸಿದೆ.

ಶಿಕ್ಷಣ ತಜ್ಞ ಎಚ್‌.ನರಸಿಂಹಯ್ಯ ಜನ್ಮ ಶತಮಾನೋತ್ಸವ ಕಾರ್ಯಕ್ರಮ

‘ಎಚ್ಚೆನ್ ಪ್ರಾಧಿಕಾರ: ಪ್ರಗತಿಯಲ್ಲಿ ಕರಡು’

ಪ್ರಜಾವಾಣಿ ವಾರ್ತೆ

ಗೌರಿಬಿದನೂರು: ತಾಲ್ಲೂಕಿನ ಹೊಸೂರು ಗ್ರಾಮದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗಾಂಧಿವಾದಿ ಹಾಗೂ ಶಿಕ್ಷಣ ತಜ್ಞ ಎಚ್. ನರಸಿಂಹಯ್ಯ ಜನ್ಮ ಶತಮಾನೋತ್ಸವ ಮತ್ತು ಶಾಲಾ ಶತಮಾನೋತ್ಸವ ಕಾರ್ಯಕ್ರಮ ಭಾನುವಾರ ಸಂಭ್ರಮದಿಂದ ನಡೆಯಿತು.

ಕಾರ್ಯಕ್ರಮಕ್ಕೂ ಮುನ್ನ ಹೊಸೂರು ಹಿರಿಯ ಪ್ರಾಥಮಿಕ ಪಾಠಶಾಲೆ ವಿದ್ಯಾರ್ಥಿಗಳು ಹಾಗೂ ನ್ಯಾಷನಲ್ ಕಾಲೇಜ್ ವಿದ್ಯಾರ್ಥಿಗಳು ಗ್ರಾಮದಲ್ಲಿ ಎಚ್.ನರಸಿಂಹಯ್ಯ ಅವರ ಭಾವಚಿತ್ರದ ಮೆರವಣಿಗೆ ನಡೆಸಿದರು.

ಎಚ್.ನರಸಿಂಹಯ್ಯ ಅವರ ಹೆಸರಿನಲ್ಲಿ ಅಭಿವೃದ್ಧಿ ಪ್ರಾಧಿಕಾರ ರಚನೆಯ ರೂಪುರೇಷೆ ಕರಡು ತಯಾರಿ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಸಿ. ಸುಧಾಕರ್ ಹೇಳಿದರು.

ಎಚ್.ಎನ್.ಅವರ ಹುಟ್ಟೂರು ಹೊಸೂರು ಗ್ರಾಮದಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಯನ್ನು ಆರಂಭಿಸುವ ಜೊತೆಗೆ ಡಾ.ಎಚ್.ಎನ್. ಹೆಸರಿನ ಕಲಾಭವನ, ರಾಷ್ಟ್ರೀಯ ವಿಜ್ಞಾನ ಪಾರ್ಕ್, ಅಮರಧಾಮ ಮತ್ತು ಅವರು ಓದಿದ ಶಾಲೆಗಳನ್ನು ಒಟ್ಟಿಗೆ ಸೇರಿಸಿ ಅಭಿವೃದ್ಧಿ ಪ್ರಾಧಿಕಾರ ಸ್ಥಾಪಿಸಿ ಅದರ ಮೂಲಕ ಈ ಎಲ್ಲಾ ಸಂಸ್ಥೆಗಳನ್ನು ವ್ಯವಸ್ಥಿತವಾಗಿ ನಿರ್ವಹಣೆ ಮಾಡುವ ಬಗ್ಗೆ ಮನವಿ ಬಂದಿದೆ. ಈಗಾಗಲೇ ಮುಖ್ಯಮಂತ್ರಿ, ಕಾನೂನು ಸಚಿವ ಎಚ್.ಕೆ. ಪಾಟೀಲ ಅವರಿಗೆ ಈ ಕುರಿತು ಪರಿಶೀಲಿಸುವಂತೆ ಸೂಚನೆ ನೀಡಿದ್ದಾರೆ ಎಂದು ಹೇಳಿದರು.

ಹೊಸೂರು ಗ್ರಾಮದ ಹಿರಿಯ ಪ್ರಾಥಮಿಕ ಪಾಠಶಾಲೆಯ ವಿದ್ಯಾರ್ಥಿಗಳು ಹಾಗೂ ನ್ಯಾಷನಲ್ ಕಾಲೇಜಿನ ವಿದ್ಯಾರ್ಥಿಗಳು ಗ್ರಾಮದಲ್ಲಿ ಎಚ್‌.ನರಸಿಂಹಯ್ಯ ಅವರ ಭಾವಚಿತ್ರದ ಮೆರವಣಿಗೆ ನಡೆಸಿದರು

‘ಪದ್ಮಭೂಷಣ ಎಚ್. ನರಸಿಂಹಯ್ಯ ಸರಳ ಸಜ್ಜನಿಕೆಯ ವ್ಯಕ್ತಿ ಆಗಿದ್ದರು. ಶಿಕ್ಷಣದ ಬಗ್ಗೆ ದೂರದೃಷ್ಟಿ ಉಳ್ಳವರಾಗಿದ್ದರು. ವಿದೇಶಗಳಲ್ಲಿರುವ ಶಿಕ್ಷಣದ ಮಾದರಿಯನ್ನು ದೇಶದಲ್ಲೂ ಪರಿಚಯಿಸಬೇಕು ಎಂಬ ಆಲೋಚನೆ ಅವರದ್ದಾಗಿತ್ತು’ ಎಂದು ಹೇಳಿದರು.

> 1,200 ಎಕರೆ ಪ್ರದೇಶದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಕ್ಯಾಂಪಸ್ ಪಾಶ್ಚಾತ್ಯ ಮಾದರಿಯಲ್ಲಿ ನಿರ್ಮಾಣವಾಗಲು ಎಚ್.ಎನ್. ಕಾರಣಕರ್ತರು
>
> ಡಾ. ಎಂ.ಸಿ.ಸುಧಾಕರ್, ಉನ್ನತ ಶಿಕ್ಷಣ ಸಚಿವ

ಸಂಸದ ಡಾ.ಕೆ.ಸುಧಾಕರ್, ಸಾಹಿತಿ ಹಂಪ ನಾಗರಾಜಯ್ಯ, ಶಾಸಕ ಕೆ.ಎಚ್. ಪುಟ್ಟಸ್ವಾಮಿ ಗೌಡ, ಮಾಜಿ ಸಚಿವ ಎನ್. ಎಚ್.ಶಿವಶಂಕರ ರೆಡ್ಡಿ, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಎಚ್.ವಿ ಮಂಜುನಾಥ್ ಮಾತನಾಡಿದರು.

ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ, ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆ, ಜಿಲ್ಲಾ ಪಂಚಾಯಿತಿ ಸಿಇಒ ಪ್ರಕಾಶ್ ನಿಟ್ಟಾಲಿ, ಡಿಡಿಪಿಐ ಮುನಿ ಕೆಂಪೇಗೌಡ, ಶಾಸಕಿ ಜ್ಯೋತಿ ರೆಡ್ಡಿ, ಶಶಿಧರ್, ನಗರಸಭೆ ಅಧ್ಯಕ್ಷ ಲಕ್ಷ್ಮಿ ನಾರಾಯಣಪ್ಪ, ಹಳೆ ವಿದ್ಯಾರ್ಥಿ ಸಂಘದ ಸಂಸ್ಥಾಪಕ ಅಧ್ಯಕ್ಷ ಎಚ್.ಎನ್ ಸುಬ್ರಹ್ಮಣ್ಯ, ವಾಸು, ಗೀತಾ ನಾಗರಾಜ್ ಪಾಲ್ಗೊಂಡಿದ್ದರು.

ಶತಮಾನೋತ್ಸವದ ಸಡಗರದಲ್ಲಿ

ಸ್ಪೆಲ್ಲಿಂಗ್ ಬೀ ಸ್ಪರ್ಧೆ



ಎಡೆಬಿಡದೆ ಪ್ರತಿವರ್ಷವೂ ನಡೆಯುವ ಸ್ಪರ್ಧೆಗಳು

ಬೇದ್ರೆ ಮಂಜುನಾಥ

'ಏನು, ಇಂಗ್ಲಿಷ್ ಪದದ ಸ್ಪೆಲ್ಲಿಂಗ್ ಹೇಳಿದ್ರೆ ದುಡ್ಡು ಬರುತ್ತಾ?!' ಆಶ್ಚರ್ಯವೇನಿಲ್ಲ, ಲಕ್ಷಗಟ್ಟಲೇ ಡಾಲರ್ ಬಹುಮಾನವೂ ಸಿಗುತ್ತದೆ. ಅಮೆರಿಕದ ಪ್ರತಿಷ್ಠಿತ ಸ್ಕ್ರಿಪ್ಸ್ ರಾಷ್ಟ್ರೀಯ ಸ್ಪೆಲ್ಲಿಂಗ್ ಬೀ ಸ್ಪರ್ಧೆಯಲ್ಲಿ ಇದುವರೆಗೆ ಗೆದ್ದಿರುವವರಲ್ಲಿ ಭಾರತೀಯ ಮೂಲದವರೇ ಅಧಿಕ!

2024ರ ಅಮೆರಿಕದ ನ್ಯಾಷನಲ್ ಸ್ಪೆಲ್ಲಿಂಗ್ ಬೀ ಸ್ಪರ್ಧೆಯಲ್ಲಿ ವಿಜೇತರಾದ ಫ್ಲೋರಿಡಾದ 12 ವರ್ಷದ ವಿದ್ಯಾರ್ಥಿ ಬೃಹತ್ ಸೋಮ, 2023ರಲ್ಲಿ ದೇವ್ ಶಾ, 2022ರಲ್ಲಿ ಹರಿಣಿ ಲೋಗನ್, 2019ರಲ್ಲಿನ 8 ಜನ ವಿಜೇತರಲ್ಲಿ ರಿಶಿಕಾ ಗಂಧಶ್ರೀ, ಸಾಕೇತ್ ಸುಂದರ್, ಶ್ರುತಿಕಾ ಪಧ್ಯಾ, ಸೋಹಂ ಸುಖತಂಕರ್, ಅಭಿಜಯ್ ಕೊಡಲಿ, ರೋಹನ್ ರಾಜಾ, 2018ರಲ್ಲಿ ಕಾರ್ತಿಕ್ ನಿಮ್ಮಾನಿ, 2017ರಲ್ಲಿ ಅನನ್ಯಾ ವಿನಯ್, 2016ರಲ್ಲಿ ನಿಹಾರ್ ಸಾಯಿರೆಡ್ಡಿ ಜಂಗಾ ಮತ್ತು ಜಯರಾಮ ಹತ್ವಾರ್, 2015ರಲ್ಲಿ ವನ್ಯಾ ಶಿವಶಂಕರ್ ಮತ್ತು ಗೋಕುಲ್ ವೆಂಕಟಾಚಲಂ, 2014ರಲ್ಲಿ ಶ್ರೀರಾಮ್ ಜೆ. ಹತ್ವಾರ್, 2013ರಲ್ಲಿ ವಿಜೇತನಾದ ಅರವಿಂದ್ ಮಹಾಂಕಾಳಿ, 2012ರಲ್ಲಿ ಸ್ನಿಗ್ಧಾ ನಂದಿಪಟ್ಟಿ, 2011ರಲ್ಲಿ ಸುಕನ್ಯಾ ರಾಯ್, 2010ರಲ್ಲಿ ಚೆನ್ನೈ ಮೂಲದ ಅನಾಮಿಕಾ ವೀರಮಣಿ, 2009ರಲ್ಲಿ ಮೈಸೂರು ಮೂಲದ ಹುಡುಗಿ ಕಾವ್ಯ ಶಿವಶಂಕರ್, 2008ರಲ್ಲಿ ಸಮೀರ್ ಮಿಶ್ರಾ, ಮೊದಲಾದವರು ಪ್ರಥಮಸ್ಥಾನ ಗಳಿಸಿದ ಭಾರತೀಯ ಮೂಲದ ಪುಟಾಣಿಗಳು. ಭಾರತೀಯ ಬುದ್ಧಿಮತ್ತೆಯ ಅಪರೂಪದ ಪ್ರತೀಕಗಳಾಗಿದ್ದಾರೆ.

2024ರ ವಿಜೇತನಿಗೆ ಸ್ಕ್ರಿಪ್ಸ್ ಕಪ್ ಟ್ರೋಫಿಯೊಂದಿಗೆ ಸಿಕ್ಕ ಒಟ್ಟು ಬಹುಮಾನದ ಮೊತ್ತ 50,000 ಡಾಲರ್ ನಗದು (ಸುಮಾರು ₹43.20 ಲಕ್ಷ), ಮೆರಿಯಮ್ ವೆಬ್‌ಸ್ಟರ್ ಡಿಕ್ಷನರಿ ಮತ್ತು ಬ್ರಿಟಾನಿಕ ವಿಶ್ವಕೋಶ ಸೇರಿದಂತೆ ಹಲವು ಪುಸ್ತಕ ರೂಪದ ಬಹುಮಾನಗಳು, ಸ್ಮರಣಿಕೆಗಳು, ಇತ್ಯಾದಿ. ಒಳ್ಳೆಯ ಪ್ರೋತ್ಸಾಹ, ಅಲ್ಲವೇ?

1925ರಲ್ಲಿ ಲೂಯಿಸ್‌ವಿಲ್ಲೆಯ The Courier Journal ಆರಂಭಿಸಿದ ಸ್ಪೆಲ್ಲಿಂಗ್ ಬೀ ಸ್ಪರ್ಧೆಯನ್ನು ಇ.ಡಬ್ಲ್ಯೂ ಸ್ಕ್ರಿಪ್ಸ್ ಕಂಪನಿ (E.W. Scripps Company) ವಹಿಸಿಕೊಂಡು Scripps Howard National Spelling Bee ಎಂಬ ಹೆಸರಿನೊಂದಿಗೆ ಖ್ಯಾತಿಗಳಿಸಿ, ಈಗ Scripps National Spelling Bee ಎಂಬ ಅಮೆರಿಕದ ಮಕ್ಕಳ ಅಚ್ಚುಮೆಚ್ಚಿನ ಸ್ಪರ್ಧೆಯಾಗಿ ರೂಪುಗೊಂಡಿದೆ.

ಶತಮಾನೋತ್ಸವ ಕಂಡ ಈ ಸ್ಪರ್ಧೆಗಳು ಪ್ರತಿವರ್ಷವೂ ಎಡೆಬಿಡದೆ ನಡೆಯುತ್ತಾ ಬಂದಿವೆ. (ದ್ವಿತೀಯ ವಿಶ್ವಯುದ್ಧ ಕಾಲದಲ್ಲಿ 1943-45 ರಲ್ಲಿ ಮತ್ತು ಕೋವಿಡ್-19 ಪಿಡುಗಿನಿಂದಾಗಿ 2020ರಲ್ಲಿ ಸ್ಪರ್ಧೆಗಳು ನಡೆದಿರಲಿಲ್ಲ.) 2025ರಲ್ಲಿ ಆಯೋಜಿತವಾಗುತ್ತಿರುವುದು 97ನೇ ರಾಷ್ಟ್ರೀಯ ಸ್ಪೆಲ್ಲಿಂಗ್ ಬೀ ಸ್ಪರ್ಧೆ.

ಅಮೆರಿಕದ ಸ್ಥಳೀಯ ಹಾಗೂ ರಾಷ್ಟ್ರ ಮಟ್ಟದ ಸ್ಪರ್ಧೆಗಳಿಗೆ ಅಧಿಕೃತವಾದ ಪದಗಳ ಪಟ್ಟಿಯನ್ನು Webster's Third New International Dictionary (Unabridged) ಪದಕೋಶ ಮತ್ತು Spell It ಸಂಕಲನದಿಂದ ಆಯ್ದುಕೊಳ್ಳಲಾಗುತ್ತಿದೆ. ಸ್ಪರ್ಧೆಯಲ್ಲಿ ಪದವೊಂದನ್ನು ಓದಿ ಹೇಳಲಾಗುತ್ತಿದ್ದು, ಸ್ಪರ್ಧಿಗಳು ಆ ಪದದ ಸ್ಪೆಲ್ಲಿಂಗ್ ಅನ್ನು ತಿಳಿಸಬೇಕು. ಪದ ಯಾವುದು ಎಂಬುದನ್ನು ತಿಳಿದುಕೊಳ್ಳಲು ಸ್ಪರ್ಧಿಯು ಆ ಪದದ ವ್ಯಾಖ್ಯೆ (Definition), ವಾಕ್ಯಾಂಶ (Part of speech), ವಾಕ್ಯದಲ್ಲಿ ಪದದ ಬಳಕೆ (Use in a sentence), ವ್ಯುತ್ಪತ್ತಿ (etymology), ಆ ಪದದ ಪರ್ಯಾಯ ಉಚ್ಚಾರಗಳು (Alternate pronunciations), ಪದದ ಮೂಲ (Root) ಮುಂತಾದ ವಿವರಗಳನ್ನು ಕೇಳಿ ತಿಳಿಯಲು ಅವಕಾಶವಿದೆ.

ಎರಡೂವರೆ ನಿಮಿಷ ಕಾಲಾವಕಾಶದಲ್ಲಿ ಇಷ್ಟೆಲ್ಲಾ ಕಸರತ್ತು ನಡೆದು ಸರಿಯಾದ ಸ್ಪೆಲ್ಲಿಂಗ್ ಹೇಳಿದ ಮಗು ಗೆಲ್ಲುತ್ತದೆ, ಮುಂದಿನ ಸುತ್ತಿಗೆ ಅವಕಾಶ ಗಿಟ್ಟಿಸುತ್ತದೆ. ಅಂತಿಮ ಹಂತದ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನದ ಜೊತೆಗೆ ಹಲವು ಗಿಫ್ಟ್ ಹ್ಯಾಂಪರ್‌ಗಳ ಸುರಿಮಳೆ.

ಹದಿನೈದು ವರ್ಷ ದಾಟಿರದ, ಮೂರನೇ ಗ್ರೇಡ್‌ನಿಂದ ಎಂಟನೇ ಗ್ರೇಡ್‌ವರೆಗಿನ ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದು , ಆಯಾ ಗ್ರೇಡಿನ ಮಕ್ಕಳಿಗಾಗಿಯೇ ಪ್ರತ್ಯೇಕ ಮಾದರಿ ಪದಪಟ್ಟಿಯನ್ನು ನೀಡಲಾಗುತ್ತದೆ. ನಿರ್ದಿಷ್ಟ ಪದವನ್ನು ಉಚ್ಚರಿಸಿದಾಗ ಸರಿಯಾದ ಸ್ಪೆಲ್ಲಿಂಗ್ ಹೇಳಿದ ಮಕ್ಕಳು ಮುಂದಿನ ಹಂತಕ್ಕೆ ಆಯ್ಕೆಯಾಗುತ್ತಾರೆ.

ಅಂತಿಮ ಹಂತದ ಸ್ಪರ್ಧಿಗಳಿಗೂ ಪೂರ್ವ ಸಿದ್ಧತೆಗಾಗಿ ಪದಪಟ್ಟಿಯನ್ನು ನೀಡಲಾಗಿರುತ್ತದೆಯಾದರೂ ಪದಗಳ ಆಯ್ಕೆ ಕಠಿಣವಾಗಿರುತ್ತದೆ. ನಮ್ಮ ಪದ ಸಂಪತ್ತಿನ ಅಳತೆಗೋಲು ಇದು!

ಶಿಕ್ಷಕರು ಪಾಠಮಾಡುವಾಗ ಮಕ್ಕಳಿಗೆ ಈ ರೀತಿಯ ಸ್ಪರ್ಧೆಗಳ ಬಗ್ಗೆ ತಿಳಿಸಿದಲ್ಲಿ, ಪೋಷಕರು ಪ್ರೋತ್ಸಾಹಿಸಿದಲ್ಲಿ ಕಲಿಕೆಯಲ್ಲಿ ಸ್ಪರ್ಧೆ ಏರ್ಪಟ್ಟು ಮಕ್ಕಳು ಹೆಚ್ಚು ಹೆಚ್ಚು ಓದಲು, ಬೌದ್ಧಿಕ ಕ್ರೀಡೆಗಳಲ್ಲಿ ಪಾಲ್ಗೊಳ್ಳಲು ಪ್ರೇರೇಣೆ ದೊರೆತಂತಾಗುತ್ತದೆ.

ಈ ರೀತಿಯ ಸ್ಪರ್ಧೆಗಳನ್ನು ಅಕಾಡೆಮಿಕ್ ಡೆಕಾಥ್ಲಾನ್ ರೀತಿ ಆಡಿಸಬಹುದು. ಶಾಲಾ ಕಾಲೇಜುಗಳ ವಾರ್ಷಿಕ ಸ್ಪರ್ಧೆಗಳಲ್ಲಿ ಸೇರಿಸಿ ತರಬೇತಿ ಕೊಡಬಹುದು. ಭಾರತೀಯ ಸ್ಪೆಲ್ಲಿಂಗ್ ಬೀ ಇತ್ತೀಚೆಗೆ ಗಮನ ಸೆಳೆಯುವ ಪ್ರಯತ್ನ ಮಾಡುತ್ತಿದೆ. ಇಂಗ್ಲಿಷ್ ಅಲ್ಲದೆ ಇತರೆ ಭಾಷೆಗಳಲ್ಲಿಯೂ ಸ್ಪರ್ಧೆಗಳು ನಡೆಯುತ್ತಿವೆ. ಹೆಚ್ಚಿನ ಮಾಹಿತಿಗೆ ಭೇಟಿ ಮಾಡಿ:

https://spellingbee.com/
https://indiaspellingbee.com
https://en.wikipedia.org/wiki/Scripps_National_Spelling_Bee



ಮಕ್ಕಳಿಗೆ ಹೊಡೆಯಬಹುದೇ?



ಸಮಾಧಾನ

ಡಾ.ಡಿ.ಎಂ. ಹೆಗಡೆ
ಸಮಾಲೋಚಕರು

• ನಮಗೆ ಮದುವೆಯಾಗಿ ಹತ್ತು ವರ್ಷ ಆದವು. ಗಂಡ ಎಂಜಿನಿಯರ್. ವಿದೇಶದಲ್ಲಿದ್ದೇವೆ. ನಮಗೆ ಏಳು ವರ್ಷದ ಮಗ. ನಾನು ಬೈಯುವುದಿಲ್ಲ. ಹೊಡೆಯುವುದಿಲ್ಲ. ನನ್ನ ಗಂಡ,ಮಗನಿಗೆ ಬಹಳ ಬೈದು, ಹೊಡೆದು ಮಾಡ್ತಾರೆ. ನಂಗೆ ಇಬ್ಬರನ್ನೂ ಸಂಭಾಳಿಸಿ ಸಾಕಾಗಿದೆ. ನನ್ನ ಗಂಡ ಏಕೆ ಹಾಗಿದ್ದಾನೆ?ಮಗನಿಗೆ ಹೊಡೆಯೋದು ಸರೀನಾ? ನಾನು ಏನು ಮಾಡಬೇಕು?

ಮಕ್ಕಳಿಗೆ ಹೊಡೆಯುವುದು ಸರಿನಾ? ತಪ್ಪಾ? ಎನ್ನುವುದು ಲಾಗಾಯ್ತಿನಿಂದಲೂ ಇರುವ ಪ್ರಶ್ನೆ. ಹೊಡೆಯುವುದು ತಪ್ಪು ಎನ್ನುವುದು ಸರಿಯಾದ ಉತ್ತರ. ಅದೂ ಹನ್ನೆರಡು ವರ್ಷಕ್ಕಿಂತಲೂ ಸಣ್ಣ ಮಗುವಿಗೆ ಹೊಡೆಯುವುದು ದೌರ್ಜನ್ಯ. ಆದರೆ ಸಮಾಜದಲ್ಲಿ ಮಕ್ಕಳಿಗೆ ಹೊಡೆದು ಬುದ್ಧಿ ಕಲಿಸುವವರ ಸಂಖ್ಯೆ ಜಾಸ್ತಿ ಇದೆ. ವಿಶ್ವಸಂಸ್ಥೆಯ ವರದಿಯೊಂದರ ಪ್ರಕಾರ ಶೇ 60ಕ್ಕಿಂತಲೂ ಹೆಚ್ಚು ಮಕ್ಕಳಿಗೆ ಶಿಕ್ಷಿಸಲಾಗುತ್ತಿದೆ. ಬಾಲ್ಯದಲ್ಲಿ ಶಿಕ್ಷೆಗೆ ಒಳಗಾದ ಮಕ್ಕಳು ಕ್ರೂರಿಗಳಾಗಿಯೂ, ದುಷ್ಟರಾಗಿಯೂ, ನಯವಂಚಕರಾಗಿಯೂ, ಸಮಾಜಘಾತುಕರಾಗಿಯೂ ರೂಪಗೊಳ್ಳುತ್ತಾರೆ.

ಗಂಡನಿಗೆ ಕೋಪ ಜಾಸ್ತಿ. ಕೋಪವಾಗಿ ವ್ಯಕ್ತವಾಗುತ್ತಿರುವ ಅವನೊಳಗಿನ ಅಸಹಾಯಕತೆ ಮತ್ತು ಪ್ರತೀಕಾರದ ಪ್ರಯತ್ನ. ಅದು ಒಳ್ಳೆಯದಲ್ಲ. ಮಗುವಿನ ಆರೋಗ್ಯಕರ ಬೆಳವಣಿಗೆಯ ದೃಷ್ಟಿಯಿಂದ ಹಾಗೂ ನಿಮ್ಮ ಗಂಡನ ಆರೋಗ್ಯದ ದೃಷ್ಟಿಯಿಂದ ಕೂಡ.

ನಿಮ್ಮ ಗಂಡನ ವರ್ತನೆಯಿಂದ ನಿಮ್ಮ ಮಗವೂ ಕೂಡ ತನ್ನ ಮಗನಿಗೆ ಹೊಡೆಯುವ ತಂದೆಯಾಗಿ ತಯಾರಾಗುತ್ತಿದ್ದಾನೆ. ಯಾವುದೇ ಮಗು ಮೊದಲು ತಪ್ಪು ಮಾಡುವುದಿಲ್ಲ. ಬೇರೆಯವರು ಮಾಡಿದ್ದನ್ನು ನೋಡಿ, ಮಗು ಕಲಿಯುತ್ತದೆ. ಅದನ್ನೇ ಮಾಡುತ್ತದೆ. ಹೇಳಿದ್ದನ್ನು ಕೇಳಿಕೊಂಡು ಕಲಿಯುವುದಕ್ಕಿಂತಲೂ, ಪಾಲಕರು ಹಾಗೂ ಇತರರು ಮಾಡಿದ್ದನ್ನು ನೋಡಿ ಮಕ್ಕಳು ಕಲಿಯುತ್ತಾರೆ. ಅದನ್ನು ತಪ್ಪು ಎಂದು ಮಗುವನ್ನು ಶಿಕ್ಷಿಸಲಾಗುತ್ತದೆ. ಮಕ್ಕಳು ತಪ್ಪು ಮಾಡದೇ ಬೆಳೆಯಬೇಕು, ಒಳ್ಳೆಯವರಾಗಿ ಬದುಕಬೇಕು ಎನುವುದು ಪಾಲಕರ ಬಯಕೆ. ಬಯಕೆ ಏನೋ ಸರಿ ಇದೆ. ಆದರೆ ಅದಕ್ಕಾಗಿ ಅನುಸರಿಸುವ ಕ್ರಮವು ತಪ್ಪಿದೆ.

ನಿಮ್ಮ ಪತಿಗೆ ಬಾಲ್ಯದಲ್ಲಿ ಅವನ ಪಾಲಕರು / ಶಿಕ್ಷಕರು / ಹಿರಿಯರು ಹೊಡೆದಿದ್ದಾರೆ. ಅವಮಾನಿಸಿದ್ದಾರೆ. ಅವನೊಳಗಿನ ಅಸಹಾಯಕ ಮಗು ಈಗ ತನ್ನ ಮಗುವಿನ ಮೇಲೆ ಪ್ರತೀಕಾರವನ್ನು ತೀರಿಸಿಕೊಳ್ಳುತ್ತಾ ಇದೆ. ಸ್ವಭಾವತಃ ನಿಮ್ಮ ಗಂಡ ಪುಕ್ಕಲು ಮನುಷ್ಯ. ಅಸಹಾಯಕರ ಮೇಲೇರಿ ಹೋಗುವ ಅವಕಾಶವನ್ನು ಉಪಯೋಗಿಸಿಕೊಳ್ಳುವ ಜಾಣ. ಬಹುಶಃ ಅವನು ನಿಮಗೆ ಕೂಡ ಆಗೀಗ ಹೊಡೆಯುವುದು, ಹಿಂಸಿಸುವುದು ಇರಬಹುದಲ್ವೇ?

ನೀವಿಬ್ಬರೂ ಸುಶಿಕ್ಷಿತರು. ನಿಮಗೆ ಬೇಕೂಂತ ಮಗುವನ್ನು ಹೆತ್ತಿದ್ದೀರಿ. ಅದನ್ನು ಅಷ್ಟೇ ಪ್ರೀತಿಯಿಂದ ಬೆಳೆಸಬೇಕು. ಅದು ನಿಮ್ಮ ಧರ್ಮ. ಮಗು ಹುಟ್ಟುವಾಗಲೇ ಪರಿಪೂರ್ಣವಾಗಿರುತ್ತದೆ. ಅವಮಾನ, ನೋವು ಎಲ್ಲವೂ ನಮಗಾದಂತೆಯೇ ಮಗುವಿಗೂ ಆಗುತ್ತದೆ. ಸುಸಂಸ್ಕೃತ ವ್ಯಕ್ತಿಯಾಗಿ, ಎಲ್ಲರನ್ನು ಪ್ರೀತಿಸುವ, ಎಲ್ಲರಿಂದಲೂ ಪ್ರೀತಿ ಪಡೆಯುವ ವ್ಯಕ್ತಿಯಾಗಿ ಬೆಳೆಯಬೇಕಾಗಿದ್ದ ಮಗುವನ್ನು, ಹೊಡೆದು, ಬಡಿದು, ಅವಮಾನಿಸಿ, ನಿಮ್ಮಂತಹುದೇ ಸಾಮಾನ್ಯ ವ್ಯಕ್ತಿಯನ್ನಾಗಿ ಮಾಡುತ್ತಿದ್ದೀರಿ. ಇದು ಎಷ್ಟು ಸರಿ? ಇನ್ನು, ಪಾಲಕರ ಅತಿಯಾದ ಮುದ್ದು ಕೂಡ ಮಕ್ಕಳಲ್ಲಿ ಅನೇಕ ಕೆಟ್ಟ ಗುಣಗಳನ್ನು, ಕೆಟ್ಟ ಚಟಗಳನ್ನು ಉಂಟುಮಾಡುತ್ತದೆ. ಆದ್ದರಿಂದ ಏನಾದರೂ ತಪ್ಪು ಮಾಡಿದಾಗ, ಅದನ್ನು ನಿರ್ಲಕ್ಷಿಸಿ ಮುದ್ದಿಸುವುದು ಸರಿಯಲ್ಲ. ಮಗುವನ್ನು ಬೈಯುವುದು ಸಹ ಕೆಲವೊಂದು ಸಮಯದಲ್ಲಿ ಅಗತ್ಯವಾಗಿರುತ್ತದೆ. ಮಗು ಒಳ್ಳೆಯ ಕೆಲಸ ಮಾಡಿದಾಗ ಅದನ್ನು ಮುದ್ದಿಸುವುದರಲ್ಲಿ, ಪ್ರಶಂಶಿಸುವುದರಲ್ಲಿ ತಪ್ಪಿಲ್ಲ. ಹಾಗೇ ತಪ್ಪು ಮಾಡಿದಾಗ ತಿದ್ದಿ ಬುದ್ಧಿ ಹೇಳುವುದರಲ್ಲೂ ತಪ್ಪಿಲ್ಲ ಪಾಲಕರು ತಮ್ಮ ಮಕ್ಕಳ ಮುಂದೆ ಎಂದಿಗೂ ಕಟುವಾದ ಅಥವಾ ನಿಂದನೀಯ ಭಾಷೆಯನ್ನು ಬಳಸಬಾರದು. ಏಕೆಂದರೆ ಮಕ್ಕಳು ಕೂಡ ಅದೇ ನಡವಳಿಕೆಯನ್ನು ತಮ್ಮ ಪೋಷಕರಿಂದ ಕಲಿಯುತ್ತಾರೆ. ಮಕ್ಕಳು ಕೂಡ ಮೃದು ಸ್ವಭಾವದವರಾಗುತ್ತಾರೆ. ನಿಮ್ಮ ಮಗು ಮುಂದೆ ಎಂಥ ವ್ಯಕ್ತಿಯಾಗಬೇಕೆಂದು ಬಯಸುತ್ತೀರೋ ಹಾಗೂ ನಿಮ್ಮನ್ನು ಹೇಗೆ ನೋಡಿಕೊಳ್ಳಬೇಕೆಂದು ನೀವು ಬಯಸುತ್ತೀರೋ ಹಾಗೆಯೇ ನಿಮ್ಮ ಮಗುವಿನ ಜೊತೆಗೆ ವ್ಯವಹರಿಸಬೇಕು. ಪ್ರತಿಯೊಂದು ಮಗುವೂ ಭಿನ್ನವೂ, ವಿಶೇಷವೂ ಆಗಿರುತ್ತದೆ. ಅದರಲ್ಲಿ ಸುಪ್ತವಾಗಿರುವ ವಿಶೇಷತೆಯನ್ನು, ಕ್ರಿಯಾಶೀಲತೆಯನ್ನು ಗುರುತಿಸಲು ಸಾಧ್ಯವಾಗುವುದು ಪಾಲಕರಿಂದಲೇ. ಪರಿಪೂರ್ಣ ವ್ಯಕ್ತಿಯಾಗಿ ಬೆಳೆಸಲು ಪ್ರೀತಿ ಬಲುಮುಖ್ಯ. ಮಗುವನ್ನು ಸಂರಕ್ಷಿಸಿ. ಪತಿ ಹೊಡೆಯಲು ಮುಂದಾದಾಗ ತಡೆಯಿರಿ.

ವಿದ್ಯಾರ್ಥಿ ವೇತನ ಕೈಪಿಡಿ

ಟಾಟಾ ಕ್ಯಾಪಿಟಲ್ ಪಂಖ್

ಟಾಟಾ ಕ್ಯಾಪಿಟಲ್ ಲಿಮಿಟೆಡ್‌ನ ಉಪಕ್ರಮವಾಗಿದ್ದು, ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ತಮ್ಮ ಶೈಕ್ಷಣಿಕ ಕನಸುಗಳನ್ನು ಈಡೇರಿಸಿಕೊಳ್ಳಲು ಹಣಕಾಸಿನ ನೆರವನ್ನು ನೀಡುವ ಗುರಿ ಹೊಂದಿದೆ.

ಅರ್ಹತೆ: ಪ್ರಸ್ತುತ 11, 12ನೇ ತರಗತಿಗಳಲ್ಲಿರುವ, ಸಾಮಾನ್ಯ ಪದವಿ (ಬಿ.ಕಾಂ., ಬಿ.ಎಸ್‌ಸಿ, ಬಿಎ ಇತ್ಯಾದಿ), ಡಿಪ್ಲೊಮಾ ಮತ್ತು ಐಟಿಐ ಕೋರ್ಸ್‌ಗಳನ್ನು ಅಭ್ಯಾಸ ಮಾಡುತ್ತಿರುವ ಭಾರತೀಯ ವಿದ್ಯಾರ್ಥಿಗಳು ಅರ್ಹರಾಗಿರುತ್ತಾರೆ.

ಅರ್ಜಿದಾರರು ತಮ್ಮ ಹಿಂದಿನ ತರಗತಿಯಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳನ್ನು ಗಳಿಸಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹ 2.5 ಲಕ್ಷ ಅಥವಾ ಅದಕ್ಕಿಂತ ಕಡಿಮೆ ಇರಬೇಕು.

ಆರ್ಥಿಕ ಸಹಾಯ: ₹ 10 ರಿಂದ ₹ 12 ಸಾವಿರ ಅಥವಾ ಕೋರ್ಸ್ ಶುಲ್ಕದ ಶೇ 80ರಷ್ಟು ಪೂರೈಕೆ

ಅರ್ಜಿ ಸಲ್ಲಿಸಲು ಕೊನೆ ದಿನ: 15-02-2025

ಅರ್ಜಿ ಸಲ್ಲಿಸುವ ವಿಧಾನ:ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ:www.b4s.in/pjvi/TCPS27

ಚಾರ್ಪಾಕ್ ಬ್ಯಾಚುಲರ್ಸ್ ಸ್ಕಾಲರ್‌ಷಿಪ್

ಫ್ರಾನ್ಸ್‌ನ ಶೈಕ್ಷಣಿಕ ಸಂಸ್ಥೆಗಳ ಒಂದರಲ್ಲಿ ಪೂರ್ಣಾವಧಿಯ ಪದವಿಯನ್ನು ಅಭ್ಯಾಸ ಮಾಡಲು ಬಯಸುವ ಭಾರತೀಯ ವಿದ್ಯಾರ್ಥಿಗಳಿಗೆ ಫ್ರೆಂಚ್ ಸರ್ಕಾರ ನೀಡುವ ಸ್ಕಾಲರ್‌ಷಿಪ್ ಇದಾಗಿದೆ.

ಅರ್ಹತೆ: ಅರ್ಜಿ ಸಲ್ಲಿಕೆಯ ಸಮಯದಲ್ಲಿ 23 ಅಥವಾ ಅದಕ್ಕಿಂತ ಕಡಿಮೆ ವಯಸ್ಸಿನವರಾಗಿರಬೇಕು. ಭಾರತೀಯ ಪ್ರಜೆಗಳಾಗಿರಬೇಕು. ಅರ್ಜಿದಾರರು ಭಾರತದಲ್ಲಿ ತಮ್ಮ ಮಾಧ್ಯಮಿಕ ಶಿಕ್ಷಣವನ್ನು ಪೂರ್ಣಗೊಳಿಸಿರಬೇಕು. 2025ರ ಸೆಪ್ಟೆಂಬರ್ 1ರಂದು ಆರಂಭವಾಗುವ ಪದವಿ ಕೋರ್ಸ್‌ಗಳಿಗೆ ಅರ್ಜಿಯನ್ನು ಸಲ್ಲಿಸಿರಬೇಕು. ವಿದ್ಯಾರ್ಥಿಗಳು ಈ ಮೊದಲು ಫ್ರಾನ್ಸ್‌ನಲ್ಲಿ ಯಾವುದೇ ಶೈಕ್ಷಣಿಕ ಸಂಸ್ಥೆಯಲ್ಲಿ ಅಧ್ಯಯನ ನಡೆಸಿರಬಾರದು.

ಆರ್ಥಿಕ ಸಹಾಯ: ಈ ವಿದ್ಯಾರ್ಥಿವೇತನವು ಮಾಸಿಕ 860 ಯೂರೋಗಳ ಜೀವನ ವೆಚ್ಚ ಮತ್ತು ಇತರ ಪ್ರಯೋಜನಗಳನ್ನು ಒಳಗೊಂಡಿರುತ್ತದೆ.

ಅರ್ಜಿ ಸಲ್ಲಿಸಲು ಕೊನೆ ದಿನ: 28-02-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/pjvi/CBSS3

ಶಿಕ್ಷಾ ಸಾರಥಿ ಸ್ಕಾಲರ್‌ಷಿಪ್

ಜೆಕೆ ಟಯರ್ಸ್ ಅಂಡ್ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್ ವಿದ್ಯಾರ್ಥಿ ವೇತನ ನೀಡುವ ಸಲುವಾಗಿ ಭಾರೀ ವಾಹನ ಚಾಲಕರ ಪುತ್ರಿಯರಿಂದ ಅರ್ಜಿಗಳನ್ನು ಆಹ್ವಾನಿಸುತ್ತಿದೆ.

ಅರ್ಹತೆ: ತಾಂತ್ರಿಕ ಅಥವಾ ತಾಂತ್ರಿಕೇತರ ಪದವಿ ಅಥವಾ ಡಿಪ್ಲೊಮಾ ಕೋರ್ಸ್‌ಗಳನ್ನು ಅಭ್ಯಾಸ ಮಾಡುತ್ತಿರಬೇಕು. ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಶೇ 55ರಷ್ಟು ಅಂಕಗಳನ್ನು ಗಳಿಸಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹ 5,00,000ಕ್ಕಿಂತ ಕಡಿಮೆ ಅಥವಾ ಸಮನಾಗಿರಬೇಕು.

ಆರ್ಥಿಕ ನೆರವು: ಒಂದು-ಬಾರಿಯ ಸ್ಕಾಲರ್‌ಷಿಪ್

ತಾಂತ್ರಿಕ ಪದವಿ ಕೋರ್ಸ್‌ಗಳು: ₹ 25,000

ತಾಂತ್ರಿಕೇತರ ಪದವಿ ಕೋರ್ಸ್‌ಗಳು: ₹. 15,000

ಡಿಪ್ಲೊಮಾ ಕೋರ್ಸ್‌ಗಳು: ₹15,000

ಅರ್ಜಿ ಸಲ್ಲಿಸಲು ಕೊನೆ ದಿನ:15-02-2025

ಅರ್ಜಿ ಸಲ್ಲಿಸುವ ವಿಧಾನ:ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url:www.b4s.in/praja/JKTS1

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

ಎಸ್ಸೆಸ್ಸೆಲ್ಸಿ- ಸಮಾಜವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

48) ಅರಣ್ಯಗಳ ಸಂರಕ್ಷಣೆಯ ವಿಧಾನಗಳನ್ನು ತಿಳಿಸಿ.

ಉತ್ತರ: ಅರಣ್ಯ ಸಂರಕ್ಷಣಾ ವಿಧಾನಗಳು:

(1) ಕಾಡ್ಗಿಚ್ಚು ಉಂಟು ಮಾಡುವ ಘರ್ಷಿತ ಮರಗಳನ್ನು ತೆಗೆಯುವುದು.
(2) ಅರಣ್ಯದ ಮರಗಳಿಗೆ ತಗಲುವ ರೋಗಗಳನ್ನು ನಿಯಂತ್ರಿಸುವುದು.
(3) ಅರಣ್ಯಗಳಲ್ಲಿ ಸಾಕು ಪ್ರಾಣಿಗಳ ಮೇಯಿಸುವಿಕೆಯನ್ನು ನಿಯಂತ್ರಿಸುವುದು
(4) ಸಾರ್ವಜನಿಕರನ್ನು ಮರ ನೆಡಲು ಪ್ರೋತ್ಸಾಹಿಸುವುದು ಮತ್ತು ಅವುಗಳ ಪ್ರಾಮುಖ್ಯತೆಯ ಬಗ್ಗೆ ತಿಳುವಳಿಕೆ ನೀಡಿ ರಕ್ಷಣೆಗೆ ಪ್ರೇರೇಪಿಸುವುದು.
(5) ಸಾಮಾಜಿಕ ಅರಣ್ಯ ಯೋಜನೆಯನ್ನು ತ್ವರಿತವಾಗಿ ಯಶಸ್ವಿಯಾಗಿ ಕಾರ್ಯಗತಗೊಳಿಸುವುದು. ಇತ್ಯಾದಿ

49) ಅಸ್ಪೃಶ್ಯತೆ ಆಚರಣೆಯಂತಹ ಸಾಮಾಜಿಕ ಪಿಡುಗನ್ನು ನಿವಾರಿಸಲು ನಿಮ್ಮ ಸಲಹೆಗಳೇನು?

ಉತ್ತರ:- ಅಸ್ಪೃಶ್ಯತೆ ಹಿಂದು ಧರ್ಮಕ್ಕಂಟಿದ ಒಂದು ಶಾಪ ಇದನ್ನು ತೊಲಗಿಸಲು ಪ್ರತಿಯೊಬ್ಬರೂ ಮುಂದಾಗಬೇಕು. ದೇವಾಲಯ, ಅಂಗಡಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮುಕ್ತ ಪ್ರವೇಶಕ್ಕೆ ಅವಕಾಶ ಮಾಡಿಕೊಡಬೇಕು. ಜಾತ್ರೆ, ಉತ್ಸವ, ರಾಷ್ಟ್ರೀಯ ಹಬ್ಬ, ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಡಬೇಕು. ಸಹಪಂಕ್ತಿ ಭೋಜನಕ್ಕೆ ಅವಕಾಶ ಮಾಡಿಕೊಡಬೇಕು. ವ್ಯಕ್ತಿಯನ್ನು ಅವನ ಜಾತಿಯಿಂದ ಅಳೆಯಬಾರದು. ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಸಮಾನವಾದ ಅವಕಾಶಗಳನ್ನು ಒದಗಿಸಿಕೊಡಬೇಕು.

50) ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆ ಏನು?

ಉತ್ತರ:- ಇವರ ಕಾಲದಲ್ಲಿ ಅಭಿವೃದ್ಧಿ ಕಾರ್ಯವು ಹೆಚ್ಚಿತು. ಚಿನ್ನದ ಗಣಿ ಸುಧಾರಣೆ, ಕಾಲೇಜು ಸ್ಥಾಪನೆ, ಮಾರಿಕಣಿವೆ ಜಲಾಶಯ ನಿರ್ಮಾಣ, ರೈಲು ಮಾರ್ಗ ನಿರ್ಮಾಣ, ಆಸ್ಪತ್ರೆ ಸ್ಥಾಪನೆ ಹಾಗೂ ಕಾವೇರಿ ಜಲಪಾತವನ್ನು ಉಪಯೋಗಿಸಿಕೊಂಡು ಶಿವನ ಸಮುದ್ರದಲ್ಲಿ ಜಲ ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಕಾರ್ಯಗಳು ಆರಂಭವಾದವು. ಈ ವಿದ್ಯುತ್ ಕೇಂದ್ರದಿಂದ ಕೋಲಾರದ ಚಿನ್ನದ ಗಣಿಗೂ ನಂತರ ಬೆಂಗಳೂರಿಗೂ ವಿದ್ಯುತ್ ಸರಬರಾಜು ಮಾಡಲಾಯಿತು. ಭಾರತದಲ್ಲಿ ವಿದ್ಯುತ್ ಪಡೆದ ನಗರಗಳಲ್ಲಿ ಬೆಂಗಳೂರೇ ಮೊದಲನೆಯದು.

ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗಾಗಿ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿಯೂ ಶಿಕ್ಷಣ ಶುಲ್ಕವನ್ನು ರದ್ದು ಮಾಡಲಾಯಿತು. ಇದರಿಂದ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಏಳಿಗೆಗೆ ನೆರವು ಸಿಕ್ಕಿತು. ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪಿಸಲಾಯಿತು. ವಿದೇಶ ವಿದ್ಯಾಭ್ಯಾಸಕ್ಕೆ ಹೋಗುವವರಿಗೆ ವಿದ್ಯಾರ್ಥಿ ವೇತನ ನೀಡುವ ಪದ್ಧತಿಯನ್ನು ಜಾರಿಗೆ ತರಲಾಯಿತು. ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯನ್ನು 1905ರಲ್ಲಿ ಟಾಟಾರವರ ಬೆಂಬಲದಿಂದ ಸ್ಥಾಪಿಸಲಾಯಿತು. ನೀರಾವರಿ ಸೌಲಭ್ಯಗಳನ್ನೊದಗಿಸಲು ವಿಶೇಷ ಗಮನ ಕೊಡಲಾಯಿತು. ಬೆಳಗೊಳದ ಹತ್ತಿರ ಕಾವೇರಿ ನದಿಗೆ ಅಣೆಕಟ್ಟು ಒಂದನ್ನು ಕಟ್ಟಲಾಯಿತು. ಹೊಸ ರೈಲು ಮಾರ್ಗಗಳನ್ನು ನಿರ್ಮಿಸಲಾಯಿತು. ಅನೇಕ ದೊಡ್ಡ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲಾಯಿತು. ಅವುಗಳಲ್ಲಿ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಸಿಮೆಂಟ್ ಕಾರ್ಖಾನೆ, ಕಾಗದ ಕಾರ್ಖಾನೆ, ಮಂಡ್ಯದ ಸಕ್ಕರೆ ಕಾರ್ಖಾನೆ, ಮೈಸೂರಿನ ಗಂಧದ ಎಣ್ಣೆ ಕಾರ್ಖಾನೆ, ಬೆಂಗಳೂರಿನ ಸಾಬೂನು ಕಾರ್ಖಾನೆ, ಬೆಳಗೊಳದ ರಾಸಾಯನಿಕ ವಸ್ತುಗಳ ಮತ್ತು ಕೃತಕ ಗೊಬ್ಬರಗಳ ಕಾರ್ಖಾನೆ ಮುಂತಾದವುಗಳು. ನ್ಯಾಯ ವಿಧಾಯಕ ಸಭೆಯನ್ನು ರಚಿಸಲಾಯಿತು. ರಾಜ್ಯಾಂಗದ ಬದಲಾವಣೆಯಲ್ಲಿ ಇದೊಂದು ದೊಡ್ಡ ಹೆಜ್ಜೆಯಾಯಿತು. ಕೃಷ್ಣರಾಜ ಒಡೆಯರು ಸರಳರೂ, ಸಾತ್ವಿಕ ಸ್ವಭಾವದವರೂ, ಸಮರ್ಥ ಆಡಳಿತಗಾರರೂ ಮತ್ತು ವಿದ್ಯಾಪಕ್ಷಪಾತಿಗಳೂ ಆಗಿದ್ದರು. ಅವರಿಗೆ ಲಲಿತ ಕಲೆಗಳಲ್ಲಿ ತುಂಬಾ ಅಭಿರುಚಿ ಇತ್ತು. ಸಂಗೀತ ವಿದ್ವಾಂಸರುಗಳಿಗೆ ಪ್ರೋತ್ಸಾಹ ನೀಡಿದ್ದರು

51) ಕಳ್ಳ ಸಾಗಾಣಿಕೆ ಎಂದರೇನು? ನಿಯಂತ್ರಣಕ್ಕೆ ನಿಮ್ಮ ಸಲಹೆಗಳೇನು?

ಉತ್ತರ:- ಸರ್ಕಾರಕ್ಕೆ ಯಾವುದೇ ಆಮದು ಸುಂಕವನ್ನು ನೀಡದೇ ಗುಪ್ತವಾಗಿ ವಿದೇಶಗಳಿಂದ ವಸ್ತುಗಳನ್ನು ತರಿಸಿಕೊಳ್ಳುವುದನ್ನು ಕಳ್ಳ ಸಾಗಾಣಿಕೆ' ಎಂದು ಕರೆಯುತ್ತಾರೆ.

ನಿಯಂತ್ರಣ ಮಾಡಲು ಕೈಗೊಳ್ಳಬಹುದಾದ ಕ್ರಮಗಳು:

1. ದೇಶದೊಳಗೆಯೇ ಪರ್ಯಾಯ ವಸ್ತುಗಳ ಪೂರೈಕೆಯಿಂದಾಗಿ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಬಹುದು.
2. ರಾಷ್ಟ್ರದ ಆಂತರಿಕ ಮಾರುಕಟ್ಟೆಯಲ್ಲಿ ಬೆಲೆಯನ್ನು ನಿಯಂತ್ರಿಸುವುದು, ಯೋಗ್ಯ ಆಮದು-ರಫ್ತು ಧೋರಣೆ, ಕಟ್ಟುನಿಟ್ಟಿನ ಕರಾವಳಿ ಗಸ್ತು ಪಡೆಯ ಕಾರ್ಯಾಚರಣೆ, ಆರ್ಥಿಕ ಅಪರಾಧಕ್ಕೆ ಕಠಿಣ ಶಿಕ್ಷೆ ವಿಧಿಸುವುದು ಇತ್ಯಾದಿ ಕ್ರಮಗಳನ್ನು ಕೈಗೊಳ್ಳಬೇಕು
3. ಅಂತಾರಾಷ್ಟ್ರೀಯ ಹಾಗೂ ಆಂತರಿಕ ರಾಜ್ಯಗಳ ಪರಸ್ಪರ ವ್ಯಾಪಾರ ಒಪ್ಪಂದಗಳ ಮೂಲಕ ಕಳ್ಳ ಸಾಗಾಣಿಕೆಯನ್ನು ನಿಯಂತ್ರಿಸಬಹುದಾಗಿದೆ.
4. ಕಳ್ಳ ಸಾಗಾಣಿಕೆಯ ವಸ್ತುಗಳನ್ನು ಸಾಮಾಜಿಕವಾಗಿ ಬಹಿಷ್ಕರಿಸುವುದರ ಮೂಲಕವೂ ಇದನ್ನು ಸಾಕಷ್ಟು ನಿಯಂತ್ರಿಸಬಹುದು.

52) 'ದ್ವಿ ಪ್ರಭುತ್ವ' ಪದ್ಧತಿ ಎಂದರೇನು?

ಉತ್ತರ:- ಬ್ರಿಟಿಷರು ಭೂ ಕಂದಾಯ ವಸೂಲಿ ಮಾಡುವ ಹಕ್ಕನ್ನು ಹೊಂದಿದರು ಹಾಗೂ ನವಾಬನು ಆಡಳಿತ, ನ್ಯಾಯ ಮೊದಲಾದ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು. ಇದನ್ನೇ 'ದ್ವಿ ಪ್ರಭುತ್ವ' ಎನ್ನುವರು

53) ಯಾವುದೇ ಉದ್ಯಮ ಪ್ರಾರಂಭಿಸಲು ಹಣಕಾಸಿನ ಅವಶ್ಯಕತೆ ಮುಖ್ಯವಾಗಿದೆ. ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಹಣಕಾಸು ಸಹಾಯ ಮಾಡುವ ಕೆಲವು ಸಂಸ್ಥೆಗಳನ್ನು ಹೆಸರಿಸಿ.

ಉತ್ತರ:- ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಉದ್ದಿಮೆಗಳ ಸ್ಥಾಪನೆ ಅಭಿವೃದ್ಧಿ ಮತ್ತು ಅವುಗಳನ್ನು ಕಾಲಕ್ಕೆ ತಕ್ಕಂತೆ ಮಾರ್ಪಡಿಸಲು ಅನೇಕ ಹಣಕಾಸಿನ ಸಂಸ್ಥೆಗಳನ್ನು ಸ್ಥಾಪಿಸಿವೆ. ಈ ಸಂಸ್ಥೆಗಳು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೂ ಕೂಡ ಸಾಲರೂಪದಲ್ಲಿ ಹಣ ಸಹಾಯ ಮಾಡುತ್ತದೆ. ಈ ಸಂಸ್ಥೆಗಳಲ್ಲಿ ಮುಖ್ಯವಾದುವೆಂದರೆ :

1. ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು (IDBI)
2. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ರಾಷ್ಟ್ರೀಯ ಬ್ಯಾಂಕು
3. ಆಮದು ಮತ್ತು ರಫ್ತು ಬ್ಯಾಂಕು (EXIM BANK)
4. ಭಾರತೀಯ ಸಣ್ಣಕೈಗಾರಿಕಾ ಅಭಿವೃದ್ಧಿ ಬ್ಯಾಂಕು (SIDBI)
5. ಭಾರತೀಯ ಕೈಗಾರಿಕಾ ಹಣಕಾಸು ನಿಗಮ (IFCI)
6. ಭಾರತೀಯ ಕೈಗಾರಿಕೆಗೆ ಹಣಕಾಸಿನ ಹೂಡಿಕೆ ಮತ್ತು ಸಾಲದ ನಿಗಮ (ICICI)
7. ಭಾರತೀಯ ಕೈಗಾರಿಕಾ ಮರು ನಿರ್ಮಾಣ ಬ್ಯಾಂಕು (IRBI)
8. ಭಾರತೀಯ ವಾಣಿಜ್ಯ ಮತ್ತು ಇತರೆ ಬ್ಯಾಂಕುಗಳು
9. ರಾಜ್ಯ ಹಣಕಾಸು ನಿಗಮಗಳು (SFC)
10. ಭಾರತೀಯ ಜೀವ ವಿಮಾ ನಿಗಮ (LIC)

PUC MATHS

REVISION : MODEL QUESTIONS

29. If $x = at^2$; $y = 2at$ find $\frac{dy}{dx}$

Ans :– $\frac{dy}{dt} = 2a$; $\frac{dx}{dt} = 2at$

$$\frac{dy}{dx} = \frac{\frac{dy}{dt}}{\frac{dx}{dt}} = \frac{2a}{2at} = \frac{1}{t}$$

30. Find the intervals in which $f(x)=4x^3-6x^2-72x+30$ is

(i) Strictly increasing; (ii) Strictly decreasing

Ans :– $f'(x)=12x^2-12x-72$, $f'(x)=0$ and $x=-2, 3$

Set of values for strictly increasing $(-\infty, -2) \cup (3, \infty)$

Set of values for strictly decreasing $(-2, 3)$

31. Find the anti derivative of $f(x) = 4x^3 - \frac{1}{x^3} + c$ such that $f(2) = 0$

Ans:- Integrate, we get $f(x) = x^4 - \frac{1}{x^3} + c$

Using $f(2) = 0$ we get $c = -\frac{129}{8}$

Integrate, we get $f(x) = x^4 - \frac{1}{x^3} + c$

Using $f(2) = 0$, we get $c = -\frac{129}{8}$

$f(x) = x^4 - \frac{1}{x^3} - \frac{129}{8}$

32. Evaluate $\int \frac{dx}{x + x\log x}$

Ans :– $\int \frac{dx}{x(1+\log x)}$

$\Rightarrow \int \frac{dx}{(1+\log x)} \frac{dx}{x}$ $\left\{\text{let } 1+\log x = t \text{ d.r.t.x } \frac{1}{x}dx = dt\right\}$

$\Rightarrow \int \frac{1}{t} dt = \log t + c = \log(1+\log x) + c$

33. Find the area of the region bounded by curve $y^2 = x$, $x = 4$ $x = 9$, X axis. In first Quadrant

Ans :– $A = \int_4^9 y\,dx = \int_4^9 \sqrt{x}\,dx = \int_4^9 x^{\frac{1}{2}}\,dx = \frac{2}{3}x^{\frac{3}{2}}\Big]_4^9$

$A = \frac{38}{3}$ sq units



34. Form the differential equation of family of circles touching the Y axis at origin.

Ans:- Required equation of circle

$x^2 + y^2 - 2ax = 0$ $(2ax = x^2 + y^2)$

d.r.t.x, $2x + 2y\frac{dy}{dx} = 2a$

$2x^2 + 2xy\frac{dy}{dx} = 2ax$ (x by x)

$2x^2 + 2xy\frac{dy}{dx} = x^2 + y^2$

$x^2 + 2xy\frac{dy}{dx} = y^2$

35. If $\vec{a} = 2i + 2j + 3k$; $\vec{b} = -i + 2j + k$ and $\vec{c} = 3i + j$ are such that $\vec{a} + \lambda\vec{b}$ is perpendicular to $\vec{c}$ then find the value of λ

Ans:- $(\vec{a} + \lambda\vec{b}).\vec{c} = 0$

$3(2-\lambda) + 1(2+2\lambda) + 0(3+\lambda) = 0$

$\Rightarrow 6 - 3\lambda + 2 + 2\lambda = 0 \Rightarrow \lambda = 8$

36. Find the area of triangle ABC, position vectors of A,B,C are $\hat{i} - \hat{j} + 2\hat{k}$, and $2\hat{j} + \hat{k}$ and $\hat{k} + 3\hat{k}$

Ans:- $\overline{OA} - \hat{i} - \hat{j} + 2\hat{k}$, $\overline{OB} - 2\hat{j} + \hat{k}$ & $\overline{OC} - \hat{j} + 3\hat{k}$

$\overline{AB} = \overline{OB} - \overline{OA} = -\hat{i} + 3\hat{j} - \hat{k}$

$\overline{AC} - \overline{OC} - \overline{OA} - -\hat{i} + 2\hat{j} + \hat{k}$

$\overline{AB} \times \overline{AC} = 5\hat{i} + 2\hat{j} + \hat{k}$

$|\overline{AB} \times \overline{AC}| = \sqrt{30}$ and Area $= \frac{1}{2}|\overline{AB} \times \overline{AC}|$

Area $= \frac{\sqrt{30}}{2}$ sq. units

37. Find the vector and Cartesian equation of line passing through the points (3, -2, -5) and (3, -2, 6)

Ans:-Let $\vec{a} = 3\hat{i} - 2\hat{j} - 2\hat{k}$, $\vec{b} = 3\hat{i} - 2\hat{j} + 6\hat{k}$

$\vec{b} - \vec{a} = 11\hat{k}$

$\vec{r} = \vec{a} + \lambda(\vec{b} - \vec{a})$

$\vec{r} = 3\hat{i} - 2\hat{j} - 5\hat{k} + \lambda(11\hat{k})$ is the vector equation of the line.

Cartesian form : $\frac{x-3}{0} = \frac{y+2}{0} = \frac{z+5}{11}$

38. Consider the experiment of tossing two fair coins simultaneously, find the probability that both are head given that at least one of them is a head.

Ans:- S = {HH, HT, TH, TT} & events A = {HH};

(Contd...)

ಸಂಕ್ಷಿಪ್ತ ಸುದ್ದಿ

'ಸಚಿವ ಸ್ಥಾನಕ್ಕಾಗಿ ಕೀಳು ಮಟ್ಟಕ್ಕೆ ಇಳಿಯಲ್ಲ'

ಬಿ.ಆರ್. ಪಾಟೀಲ

ಕಲಬುರಗಿ: 'ಸಚಿವ ಸ್ಥಾನಕ್ಕಾಗಿ ರಾಜೀನಾಮೆಯಂತಹ ಕೀಳುಮಟ್ಟಕ್ಕೆ ಇಳಿದು ಬೆದರಿಕೆ ಹಾಕುವಂತಹ ರಾಜಕಾರಣಿ ನಾನಲ್ಲ. ಸಚಿವ ಸ್ಥಾನ ಸಿಗಲೇಬೇಕು ಎಂಬ ಮೂಲಭೂತ ಹಕ್ಕಿದೆಯಾ? ಎಷ್ಟೋ ಜನರು ಶಾಸಕರೇ ಆಗಲ್ಲ. ನಾನು ಶಾಸಕ ಆಗಬೇಕು ಎಂದೂ ಬಂದವನಲ್ಲ' ಎಂದು ಶಾಸಕ ಬಿ.ಆರ್. ಪಾಟೀಲ ಹೇಳಿದರು.

ಮುಖ್ಯಮಂತ್ರಿಗಳ ರಾಜಕೀಯ ಸಲಹೆಗಾರ ಹುದ್ದೆಗೆ ರಾಜೀನಾಮೆ ಸಲ್ಲಿಸಿದ ನಂತರ ಮೊದಲ ಬಾರಿಗೆ ನಗರದಲ್ಲಿ ಭಾನುವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, 'ಎಸ್.ಆರ್. ಬೊಮ್ಮಾಯಿ ಅವರು ಒತ್ತಾಯ ಮಾಡಿ ಟಿಕೆಟ್ ಕೊಟ್ಟಿದ್ದರಿಂದ ಚುನಾವಣೆಗೆ ಸ್ಪರ್ಧಿಸಿ, ಇಲ್ಲಿಯವರೆಗೆ ನಾಲ್ಕು ಬಾರಿ ಶಾಸಕನಾಗಿದ್ದೇನೆ. ಒಮ್ಮೆ ಪರಿಷತ್ ಸದಸ್ಯನಾಗಿದ್ದೇನೆ. ನನಗೆ ಅಷ್ಟು ಸಾಕು, ಮುಂದೆ ಚುನಾವಣೆಗೂ ನಿಲ್ಲುವುದಿಲ್ಲ' ಎಂದರು.

'ಈ ಹಿಂದೆ ಶಾಸಕಾಂಗ ಸಭೆಯಲ್ಲಿ ಸ್ವಾಭಿಮಾನಕ್ಕೆ ಧಕ್ಕೆಯಾದರೆ ರಾಜೀನಾಮೆ ಸಲ್ಲಿಸುವುದಾಗಿ ಹೇಳಿದ್ದು ನಿಜ. ಅಂತಹ ಸಮಯ ಬಂದರೆ ರಾಜೀನಾಮೆ ಕೊಡುತ್ತಿದ್ದೆ. ಅಲ್ಲಿದ್ದರೂ (ಶಾಸಕನಾಗಿ ವಿಧಾನಸಭೆಯಲ್ಲಿ), ಬೀದಿಯಲ್ಲಿ ಇದ್ದರೂ ಒಂದೇ' ಎಂದು ಹೇಳಿದರು.

ಗೊರುಚಗೆ ಗುರುಬಸವ ಪುರಸ್ಕಾರ

ಗೊ.ರು. ಚನ್ನಬಸಪ್ಪ

ಬೀದರ್: 'ಬೀದರ್‌ನ ಬಸವ ಸೇವಾ ಪ್ರತಿಷ್ಠಾನದಿಂದ ಪ್ರತಿ ವರ್ಷ ನೀಡಲಾಗುವ ಗುರುಬಸವ ಪುರಸ್ಕಾರಕ್ಕೆ ಈ ಬಾರಿ ಹಿರಿಯ ವಿದ್ವಾಂಸ ಗೊ.ರು. ಚನ್ನಬಸಪ್ಪ ಅವರನ್ನು ಆಯ್ಕೆ ಮಾಡಲಾಗಿದೆ' ಎಂದು ಬಸವ ಸೇವಾ ಪ್ರತಿಷ್ಠಾನದ ಮುಖ್ಯಸ್ಥೆ ಗಂಗಾಂಬಿಕಾ ಅಕ್ಕ ತಿಳಿಸಿದ್ದಾರೆ.

'ಪ್ರಶಸ್ತಿಯು ₹ 51 ಸಾವಿರ ನಗದು, ಪ್ರಶಸ್ತಿ ಪತ್ರ, ಫಲಕ ಒಳಗೊಂಡಿದ್ದು, ಫೆ.12ರಂದು ನಡೆಯುವ ವಚನ ವಿಜಯೋತ್ಸವ ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಾಗುವುದು' ಎಂದು ಮಾಹಿತಿ ನೀಡಿದ್ದಾರೆ.

ಸಾಲ ತೀರಿಸದ ಸ್ನೇಹಿತ: ವ್ಯಕ್ತಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಸಿದ್ದೇಶ್

ನಂಜನಗೂಡು (ಮೈಸೂರು ಜಿಲ್ಲೆ): ಸ್ನೇಹಿತನಿಗೆ ಖಾಸಗಿ ಬ್ಯಾಂಕ್‌ನಲ್ಲಿ ಸಾಲ ಪಡೆದು ಕಾರು ಕೊಡಿಸಿದ್ದ ತಾಲ್ಲೂಕಿನ ಮಲ್ಲೂಪುರ ಗ್ರಾಮದ ನಿವಾಸಿ, ಟೀ ಅಂಗಡಿ ಇಟ್ಟುಕೊಂಡಿದ್ದ ಸಿದ್ದೇಶ್ (40) ಭಾನುವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ನಾನು ಉಪ್ಪಿನಹಳ್ಳಿಯ ಮಣಿಕಂಠ ಎಂಬುವರಿಗೆ ಕಾರು ಕೊಡಿಸಿದ್ದೆ. ಪರಿಚಯದವರಿಂದ ₹2 ಲಕ್ಷ ಕೈ ಸಾಲವನ್ನೂ ತೆಗೆದುಕೊಟ್ಟಿದ್ದೆ. ಆತ ಹಣ ಕೊಡದಿದ್ದರಿಂದ ಸಾಲ ಮರುಪಾವತಿ ಸಾಧ್ಯವಾಗಲಿಲ್ಲ. ಈ ನಡುವೆ, ಕಂತು ಕಟ್ಟುವಂತೆ ಬ್ಯಾಂಕ್ ಸಿಬ್ಬಂದಿಯಿಂದ ಒತ್ತಡವಿತ್ತು' ಎಂದು ಅವರು ಮಾಡಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಅವರು ಮೈಸೂರು ತಾಲ್ಲೂಕಿನ ದಂಡಿಕೆರೆ ಬಳಿ ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಬ್ಯಾಂಕ್‌ನವರು ನಿರಂತರ ಕರೆ ಮಾಡಿ ಕಿರುಕುಳ ಕೊಡುತ್ತಿದ್ದಾರೆ. ಸಾಲ ಕೊಡಿಸಿ ದಡ್ಡನಾದೆ. ಇಬ್ಬರು ಮಕ್ಕಳು, ಕುಟುಂಬ ಬಿಟ್ಟು ಹೋಗುತ್ತಿದ್ದೇನೆ' ಎಂದು ಅವರು ಹೇಳಿರುವುದು ವಿಡಿಯೊದಲ್ಲಿದೆ.

ವರುಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ ವಾರ್ತೆ

ಪುಟ್ಟಮ್ಮ

ಹೊಸದುರ್ಗ (ಚಿತ್ರದುರ್ಗ): ಮಾಜಿ ಸಚಿವ ಗೂಳಿಹಟ್ಟಿ ಡಿ.ಶೇಖರ್ ಅವರ ತಾಯಿ ಪುಟ್ಟಮ್ಮ (80) ಅನಾರೋಗ್ಯದಿಂದ ಸ್ವಗ್ರಾಮ ಗೂಳಿಹಟ್ಟಿಯಲ್ಲಿ ಭಾನುವಾರ ಬೆಳಿಗ್ಗೆ ನಿಧನರಾದರು.

ಇವರಿಗೆ ಇಬ್ಬರು ಪುತ್ರರು ಇದ್ದಾರೆ. ಸಂಜೆ ಅಂತ್ಯಕ್ರಿಯೆ ನಡೆಯಿತು.

ಜೆಡಿಎಸ್ ಕಾರ್ಯಕರ್ತರಿಗೆ ಆಹ್ವಾನ

ಅಭಿವೃದ್ಧಿ ಪಥದಲ್ಲಿ ನೀವೂ ನಮ್ಮ ಜೊತೆ ಕೈ ಜೋಡಿಸಿ; ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಶಿವಕುಮಾರ್

ಚನ್ನಪಟ್ಟಣ: 'ಒಬ್ಬ ವ್ಯಕ್ತಿಗಾಗಿ ಇಡೀ ಪಕ್ಷವನ್ನೇ (ಜೆಡಿಎಸ್) ಬಲಿ ಕೊಡಲಾಗುತ್ತಿದೆ. ಈ ಬಗ್ಗೆ ಜೆಡಿಎಸ್ ಕಾರ್ಯಕರ್ತರು ಚರ್ಚೆ ಮಾಡಿ ಸಮಯ ವ್ಯರ್ಥ ಮಾಡಿಕೊಳ್ಳುವುದು ಬೇಡ. ನಮ್ಮ ಜೊತೆ ಕೈ ಜೋಡಿಸಿ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾನುವಾರ ಜೆಡಿಎಸ್ ಕಾರ್ಯಕರ್ತರಿಗೆ ಬಹಿರಂಗ ಆಹ್ವಾನ ನೀಡಿದ್ದಾರೆ.

ಚನ್ನಪಟ್ಟಣ ಉಪಚುನಾವಣೆ ಗೆಲುವಿಗಾಗಿ ಮತದಾರರಿಗೆ ಕೃತಜ್ಞತೆ ಸಲ್ಲಿಸಲು ಕಾಂಗ್ರೆಸ್ ಪಕ್ಷದಿಂದ ಏರ್ಪಡಿಸಿದ್ದ ಸಮಾವೇಶದಲ್ಲಿ ಮಾತನಾಡಿದ ಅವರು, ತಮ್ಮ ಭಾಷಣದ ಉದ್ದಕ್ಕೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಹರಿಹಾಯ್ದರು.

'ರಾಮನಗರ ಜಿಲ್ಲೆಯು ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ. ಶೀಘ್ರ ಬೆಂಗಳೂರು ದಕ್ಷಿಣ ಜಿಲ್ಲೆ ಆಗಲಿದೆ. ಈ ಭಾಗದ ಜನರ ಆಸ್ತಿಗೆ ಮೌಲ್ಯ ತಂದುಕೊಡುವ ಕೆಲಸವನ್ನು ಒಟ್ಟಾಗಿ ಮಾಡೋಣ ಬನ್ನಿ. ಮುಖ್ಯಮಂತ್ರಿ ಸಿದ್ದರಾಮಯ್ಯ, ನಾನು ಹಾಗೂ ಇಡೀ ಸರ್ಕಾರ ನಿಮ್ಮ ಜತೆ ನಿಲ್ಲುತ್ತೇವೆ' ಎಂದು ಅಭಯ ನೀಡಿದರು.

'ಯಾವುದಾದರೂ ಶಾಲೆಗೆ ಎರಡು ಎಕರೆ ಸ್ವಂತ ಭೂಮಿ ದಾನ ಮಾಡಿದ್ದರೆ ಹೇಳಿ ಎಂದು ಚನ್ನಪಟ್ಟಣ ಉಪ ಚುನಾವಣೆ ವೇಳೆ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಸವಾಲು ಹಾಕಿದ್ದೆ. ನನ್ನ ಆ ಪ್ರಶ್ನೆಗೆ ಅವರಿಂದ ಇದುವರೆಗೂ ಉತ್ತರ ಬಂದಿಲ್ಲ' ಎಂದು ಶಿವಕುಮಾರ್ ಹೇಳಿದರು.

'ಚನ್ನಪಟ್ಟಣ ಚುನಾವಣೆಯಲ್ಲಿ ನಮ್ಮ ಬಗ್ಗೆ ತುಚ್ಛವಾಗಿ ಮಾತನಾಡಿದ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಮತ್ತು ಎಚ್.ಡಿ. ಕುಮಾರಸ್ವಾಮಿ ಸೇರಿದಂತೆ ಬಿಜೆಪಿ ಮತ್ತು ಜೆಡಿಎಸ್ ಮುಖಂಡರಿಗೆ ಕ್ಷೇತ್ರದ ಮತದಾರರು ತಕ್ಕ ಪಾಠ ಕಲಿಸಿದ್ದಾರೆ' ಎಂದರು.

'ನಾನು ಯಾರನ್ನೂ ಟೀಕಿಸುವ ಅಗತ್ಯವಿಲ್ಲ. ಮತದಾರರು ನೀಡಿದ ಉತ್ತರ ಸಾಕು. ಅಧಿಕಾರ ನಶ್ವರ. ಸಾಧನೆ ಅಜರಾಮರ. ಮತದಾರರೇ ಈಶ್ವರ ಎಂಬ ಸಂದೇಶವನ್ನು ಚನ್ನಪಟ್ಟಣ ಮತದಾರರು ದೇಶಕ್ಕೆ ನೀಡಿದ್ದಾರೆ' ಎಂದು ಶ್ಲಾಘಿಸಿದರು.

ಕಣ್ಣೀರಿಗೆ ಕರಗದ ಮತದಾರ: ಚುನಾವಣೆಯಲ್ಲಿ ಕಣ್ಣೀರು ಸುರಿಸಿದ ಜೆಡಿಎಸ್ ನಾಯಕರು ಭಾವನಾತ್ಮಕವಾಗಿ ಮತದಾರರನ್ನು ಸೆಳೆಯುವ ಪ್ರಯತ್ನ ಮಾಡಿದರು. ಅಜ್ಜ, ಮಗ ಮತ್ತು ಮೊಮ್ಮಗನ ಕಣ್ಣೀರಿನ ಬ್ಲ್ಯಾಕ್‌ಮೇಲ್ ತಂತ್ರಕ್ಕೆ ಕರಗದ ಮತದಾರರು ಕಾಂಗ್ರೆಸ್ ಗೆಲ್ಲಿಸುವ ಮೂಲಕ ಅಭಿವೃದ್ಧಿಗೆ ಮಣೆ ಹಾಕಿದರು. ಹಣಕ್ಕೆ ಬೆಲೆ ಕೊಡಲಿಲ್ಲ, ಗುಣಕ್ಕೆ ಬೆಲೆ ಕೊಟ್ಟರು. ಕಣ್ಣೀರು ಸುರಿಸಿ ಮಂಕುಬೂದಿ ಎರಚಲು ಸಾಧ್ಯವಿಲ್ಲ ಎಂಬುದನ್ನು ತೋರಿಸಿ ಕೊಟ್ಟರು ಎಂದರು.

ಚುನಾವಣೆಗೆ ಬಂದಾಗ ಕಣ್ಣೀರು ಸುರಿಸುವ ನಾಯಕರು ಬೇಕೋ ಅಥವಾ ಅಭಿವೃದ್ಧಿ ಮಾಡುವ ಜನಪ್ರತಿನಿಧಿಗಳು ಬೇಕೋ ನಿರ್ಧಾರ ಮಾಡಿ ಎಂದು ಮತದಾರರಿಗೆ ಮನವಿ ಮಾಡಿದ್ದೆ. ಜನರು ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳಿಗೆ ಒಪ್ಪಿಗೆ ಮುದ್ರೆ ಒತ್ತಿದರು. ದೇವರು ಶಾಪ, ವರ ನೀಡುವುದಿಲ್ಲ. ಅವಕಾಶ ನೀಡುತ್ತಾನೆ. ಚನ್ನಪಟ್ಟಣ ಮತದಾರರು ಅವಕಾಶ ನೀಡಿದ್ದಾರೆ ಎಂದರು.

ಮುಂದಿನ ಮೂರು ವರ್ಷಗಳಲ್ಲಿ ಚನ್ನಪಟ್ಟಣ ಕ್ಷೇತ್ರದಂತೆ ರಾಮನಗರ ಜಿಲ್ಲೆಯಲ್ಲಿ ಬದಲಾವಣೆ ತರಲಾಗುವುದು. ಆಕಾಶವನ್ನೇ ಧರೆಗೆ ಇಳಿಸುತ್ತೇವೆ ಎಂದು ಹೇಳುವುದಿಲ್ಲ. ಕಣ್ಣಿಗೆ ಕಾಣುವ ರೀತಿಯಲ್ಲಿ ಬದಲಾವಣೆ ತರುತ್ತೇವೆ ಎಂದು ಹೇಳಿದರು.

'ರಾಜ್ಯದ ಚುಕ್ಕಾಣಿಗೆ ಸಜ್ಜಾಗಿರುವ ಡಿಕೆಶಿ'

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರಾಜ್ಯದ ಮುಂದಿನ ಮುಖ್ಯಮಂತ್ರಿ ಆಗಲಿದ್ದಾರೆ ಎಂದು ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಹೇಳಿದ್ದಾರೆ.

'ಮುಂದೆ ಈ ರಾಜ್ಯದ ಚುಕ್ಕಾಣಿ ಹಿಡಿಯಲು ಸಜ್ಜಾಗಿರುವ ಈ ಜಿಲ್ಲೆಯ ಮಣ್ಣಿನ ಮಗ ಡಿ.ಕೆ.ಶಿವಕುಮಾರ್ ಇನ್ನೇನು ಕೆಲವೇ ನಿಮಿಷಗಳಲ್ಲಿ ವೇದಿಕೆಗೆ ಬರಲಿದ್ದಾರೆ' ಎಂದು ಅವರು ವೇದಿಕೆಯಲ್ಲಿ ಘೋಷಿಸಿದರು.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಕಿರುಗಾವಲು ಗ್ರಾಮದ ಯುವ ರೈತ ಉಲ್ಲಾಸ್ ಗೌಡ ಅವರು ಸಾಕಿದ್ದ 'ಬಂಡೂರು' ತಳಿಯ 8 ತಿಂಗಳ ಟಗರು ₹1.48 ಲಕ್ಷ ದಾಖಲೆ ಬೆಲೆಗೆ ಮಾರಾಟವಾಗಿದೆ

ಸ್ಪರ್ಧೆ... ಹಾವೇರಿ ಜಿಲ್ಲೆ ತಿಳವಳ್ಳಿ ಸಮೀಪದ ಹುಲಗಡ್ಡಿ ಗ್ರಾಮದಲ್ಲಿ ಭಾನುವಾರ ನಡೆದ ಹೋರಿ ಬೆದರಿಸುವ ಸ್ಪರ್ಧೆಯಲ್ಲಿ ಯುವಕರು ಹೋರಿ ಹಿಡಿದು ಬಲ ಪ್ರದರ್ಶಿಸಿದರು. ಅಪಾರ ಜನರು ಸ್ಪರ್ಧೆಯ ವೀಕ್ಷಣೆಗೆ ಸೇರಿದ್ದರು

ಪ್ರಜಾವಾಣಿ ಚಿತ್ರ: ಮಾಲತೇಶ ಆರ್.

'ನನ್ನ ಮೇಲಿನ ಹಗೆತನಕ್ಕೆ ಅಭಿವೃದ್ಧಿಗೆ ಅಡ್ಡಿ'

ರಾಜ್ಯ ಸರ್ಕಾರದ ವಿರುದ್ಧ ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಆರೋಪ

ಪ್ರಜಾವಾಣಿ ವಾರ್ತೆ



ಕುಮಾರಸ್ವಾಮಿ

ಚನ್ನರಾಯಪಟ್ಟಣ (ಹಾಸನ ಜಿಲ್ಲೆ): 'ನನ್ನ ಮೇಲಿನ ರಾಜಕೀಯ ಹಗೆತನದಿಂದಾಗಿ ರಾಜ್ಯದ ಅಭಿವೃದ್ಧಿಗೆ ಕಾಂಗ್ರೆಸ್ ಸರ್ಕಾರ ಅಡ್ಡಿಪಡಿಸುತ್ತಿದೆ' ಎಂದು ಕೇಂದ್ರ ಸಚಿವ ಎಚ್. ಡಿ.ಕುಮಾರಸ್ವಾಮಿ ಆರೋಪಿಸಿದರು.

ಇಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅವರಿಗೆ ಅಭಿವೃದ್ಧಿ ಬೇಕಿಲ್ಲ. ರಾಜಕೀಯ ಬೇಕಷ್ಟೇ. ಜನತೆಗೆ ಶಾಶ್ವತ ಬದುಕು ರೂಪಿಸಿಕೊಡುವ ಉದ್ದೇಶ ಇಲ್ಲ. ಕೇವಲ ಚುನಾವಣೆ ರಾಜಕೀಯಕ್ಕಾಗಿ ಶಾಶ್ವತ ಅಭಿವೃದ್ಧಿಯನ್ನು ಕಾಂಗ್ರೆಸ್ ಸರ್ಕಾರ ಹಾಳು ಮಾಡುತ್ತಿದೆ' ಎಂದು ದೂರಿದರು.

'ಕುಮಾರಸ್ವಾಮಿ ಕರ್ನಾಟಕಕ್ಕೆ ಬರುತ್ತಾರೆ ಎಂದರೆ ಕಾಂಗ್ರೆಸ್ ನಾಯಕರಿಗೆ ಹೊಟ್ಟೆಉರಿ. ಅನಗತ್ಯವಾಗಿ ಕೇಂದ್ರದ ಜೊತೆ ಸಂಘರ್ಷ ಮಾಡಿಕೊಂಡರೆ ಏನೂ ಪ್ರಯೋಜನ ಆಗುವುದಿಲ್ಲ' ಎಂದರು.

'ರಾಜ್ಯದ ಕುದುರೆಮುಖ ಕಬ್ಬಿಣ ಮತ್ತು ಅದಿರು ಸಂಸ್ಥೆಯ ಮಂಗಳೂರು ಕಾರ್ಖಾನೆ ಮುಚ್ಚಿಸಲು ರಾಜ್ಯ ಸರ್ಕಾರ ಷಡ್ಯಂತ್ರ ನಡೆಸಿದೆ. ದೇವದಾರಿ ಗಣಿ ಯೋಜನೆಗೆ ಅಡ್ಡಿಪಡಿಸಿದ್ದರಿಂದ ಕಾರ್ಖಾನೆಯ ನೂರಾರು ಕಾರ್ಮಿಕರು ಕೆಲಸ ಕಳೆದುಕೊಂಡರು. ಕಾರ್ಖಾನೆಗೆ ಬೀಗ ಬೀಳಬಾರದು ಎಂಬ ಉದ್ದೇಶದಿಂದ ಕಂಪನಿಯನ್ನು ರಾಷ್ಟ್ರೀಯ ಖನಿಜಾಭಿವೃದ್ಧಿ ನಿಗಮದಲ್ಲಿ ವಿಲೀನ ಮಾಡುವ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ತಿಳಿಸಿದರು.

'ಎಚ್‌ಎಂಟಿಗೆ ಜೀವ ಕೊಡಲು ಹೊರಟರೆ, ಅದಕ್ಕೂ ರಾಜ್ಯ ಸರ್ಕಾರ ಕೊಕ್ಕೆ ಹಾಕುತ್ತಿದೆ. ಭದ್ರಾವತಿಯ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆ ಮುಚ್ಚಿದೆ. ಅದಕ್ಕೆ ಮರುಜೀವ ನೀಡುವ ಪ್ರಯತ್ನಕ್ಕೂ ಕೈ ಹಾಕಿದ್ದೇನೆ. ಅದಕ್ಕೆ ಈ ಕಾಂಗ್ರೆಸ್ ಸರ್ಕಾರ ಎಷ್ಟರ ಮಟ್ಟಿಗೆ ಬೆಂಬಲ ಕೊಡುತ್ತೋ, ಬಿಡುತ್ತೋ ಗೊತ್ತಿಲ್ಲ' ಎಂದರು.

'ನಮ್ಮ ಮುಂದೆ ಏನನ್ನೂ ಚರ್ಚಿಸದೇ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಏನನ್ನೂ ಕೊಟ್ಟಿಲ್ಲ ಎಂದು ಈಗ ಹುಯಿಲೆಬ್ಬಿಸಿದರೆ ಉಪಯೋಗವೇನು? ಪ್ರಸ್ತಾವನೆಗಳನ್ನು ತಂದುಕೊಡುವುದು ಬಿಟ್ಟು, ಬಿಜೆಪಿಯವರಿಗೆ ಪ್ರಧಾನಿ ಮುಂದೆ ಮಾತನಾಡುವ ಶಕ್ತಿ ಇಲ್ಲ ಎಂದರೆ ಹೇಗೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕೇಳಿದರು. 'ಕೇಂದ್ರ ಬಜೆಟ್ ಟೀಕಿಸುವ ನೈತಿಕತೆ ಕಾಂಗ್ರೆಸ್‌ನವರಿಗೆ ಇಲ್ಲ' ಎಂದು ತಿರುಗೇಟು ನೀಡಿದರು.

ಪಕ್ಷದಲ್ಲಿ ಗುಂಪುಗಾರಿಕೆ ಇಲ್ಲ: ಶಾಸಕ ಜಿ.ಟಿ. ದೇವೇಗೌಡರ ಅಸಮಾಧಾನದ ಬಗ್ಗೆ ಪ್ರತಿಕ್ರಿಯಿಸಿ, 'ಅವರು ಹೊಗಳುವುದು ಗೊತ್ತು, ತೆಗಳುವುದೂ ಗೊತ್ತು. ಪಕ್ಷದಲ್ಲಿ ಯಾವುದೇ ಗೊಂದಲ ಅಥವಾ ಗುಂಪುಗಾರಿಕೆ ಇಲ್ಲ. ಅವರಿಗೆ ವೈಯಕ್ತಿಕ ಸಮಸ್ಯೆ ಇರಬಹುದು' ಎಂದು ಹೇಳಿದರು.

'ಕಿರುಕುಳ ಕೊಟ್ಟರೆ ನನಗೆ ಕರೆ ಮಾಡಿ'

ಮಂಡ್ಯ: 'ಜಿಲ್ಲೆಯಲ್ಲಿ ಮೈಕ್ರೊ ಫೈನಾನ್ಸ್‌ನವರ ಉಪಟಳ ಜಾಸ್ತಿಯಾಗಿದ್ದು, ಅವರಲ್ಲಿ ಯಾರೇ ಆಗಲಿ ನಿಮ್ಮ ಮನೆ ಬಳಿಗೆ ಬಂದು ಕಿರುಕುಳ ನೀಡಿದರೆ ತಕ್ಷಣವೇ ನನಗೆ ದೂರವಾಣಿ ಕರೆ ಮಾಡಿ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅಭಯ ನೀಡಿದರು.

ತಾಲ್ಲೂಕಿನ ಸಂತೆಕಸಲಗೆರೆ ಗ್ರಾಮದಲ್ಲಿ ಭಾನುವಾರ ಭೂಮಿ ಸಿದ್ದೇಶ್ವರಸ್ವಾಮಿ ದೇವಾಲಯ ಜೀರ್ಣೋದ್ಧಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ರೌಡಿಗಳನ್ನು ಕರೆದುಕೊಂಡು ಬಂದು ಗಲಾಟೆ ಮಾಡಿದರೆ ತಕ್ಷಣ ನನಗೆ ಕರೆ ಮಾಡಿ. ನಿಮ್ಮೊಂದಿಗೆ ನಾನಿದ್ದೇನೆ. ನಿಮ್ಮ ಜೀವ ಬಹಳ ಮುಖ್ಯ. ಜೀವ ತೆಗೆದುಕೊಳ್ಳುವ ಕೆಲಸ ಯಾವುದೇ ಕಾರಣಕ್ಕೂ ಮಾಡಬೇಡಿ' ಎಂದು ಧೈರ್ಯ ಹೇಳಿದರು.

ಮುಖ್ಯಮಂತ್ರಿಗೆ ಮಂಡಿ ನೋವು

ಬೆಂಗಳೂರು: ಎಡಗಾಲಿನ ಮಂಡಿಯಲ್ಲಿ ಭಾನುವಾರ ಬೆಳಿಗ್ಗೆ ನೋವು ಕಾಣಿಸಿಕೊಂಡ ಕಾರಣ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಗರದ ಮಣಿಪಾಲ್ ಆಸ್ಪತ್ರೆಯಲ್ಲಿ ಸುಮಾರು ಎರಡು ತಾಸು ತಪಾಸಣೆಗೆ ಒಳಗಾಗಿ, ಬಳಿಕ ತಮ್ಮ ಸರ್ಕಾರಿ ನಿವಾಸ 'ಕಾವೇರಿ'ಗೆ ತೆರಳಿದರು.

ನಿಗದಿತ ಕಾರ್ಯಕ್ರಮದಂತೆ ಮುಖ್ಯಮಂತ್ರಿಯವರು ಭಾನುವಾರ ಚಿಕ್ಕಬಳ್ಳಾಪುರ ಮತ್ತು ಚನ್ನಪಟ್ಟಣ ಪ್ರವಾಸ ಕೈಗೊಂಡು, ವಿವಿಧ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಿತ್ತು. ಈ ಕಾರ್ಯಕ್ರಮಗಳನ್ನು ರದ್ದುಪಡಿಸಲಾಯಿತು.

'ಮುಖ್ಯಮಂತ್ರಿ ಅವರನ್ನು ತಪಾಸಣೆ ನಡೆಸಿದ ವೈದ್ಯರು ಈ ಹಿಂದೆ ಲೆಗಮೆಂಟ್ ಶಸ್ತ್ರ ಚಿಕಿತ್ಸೆ ನಡೆದ ಜಾಗದ ಮೇಲೆ ಒತ್ತಡ ಬಿದ್ದಿರುವುದರಿಂದ ನೋವು ಕಾಣಿಸಿಕೊಂಡಿದೆ. ಎರಡು ದಿನ ಪ್ರಯಾಣ ಮಾಡದೆ ಮನೆಯಲ್ಲೇ ವಿಶ್ರಾಂತಿ ಪಡೆಯುವಂತೆ ಸಲಹೆ ನೀಡಿದ್ದಾರೆ. ಉಳಿದಂತೆ ಯಾವುದೇ ಸಮಸ್ಯೆ ಇಲ್ಲ ಎಂದಿದ್ದಾರೆ. ಆದರೂ, ಮುಂದಿನ ಒಂದು ವಾರ ಅವರು ಗೃಹ ಕಚೇರಿ 'ಕೃಷ್ಣಾ' ಮತ್ತು ತಮ್ಮ ಸರ್ಕಾರಿ ನಿವಾಸ 'ಕಾವೇರಿ'ಯಲ್ಲಿ ನಡೆಯುವ ಸಭೆಗಳನ್ನು ಹೊರತುಪಡಿಸಿ, ಬೇರೆ ಯಾವುದೇ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸಾಧ್ಯತೆ ಇಲ್ಲ' ಎಂದು ಮುಖ್ಯಮಂತ್ರಿ ಸಚಿವಾಲಯ ತಿಳಿಸಿದೆ.

ಮುಖ್ಯಮಂತ್ರಿಯ ಮೊಣಕಾಲಿಗೆ ಬಲವಾದ ಗಾಯ: 'ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಹೊಸೂರು ಗ್ರಾಮಕ್ಕೆ ಮುಖ್ಯಮಂತ್ರಿ ಭೇಟಿ ನೀಡಬೇಕಿತ್ತು. ಆದರೆ, ಬೆಳಿಗ್ಗೆ ಸ್ನಾನದ ಮನೆಯಲ್ಲಿ ಅವರು ಕಾಲು ಜಾರಿ ಬಿದ್ದ ಕಾರಣ ಮೊಣಕಾಲಿಗೆ ಬಲವಾದ ಗಾಯವಾಗಿದೆ. ನಾವೇ ಕಾರು ಹತ್ತಿಸಿ ಅವರನ್ನು ಆಸ್ಪತ್ರೆಗೆ ಕಳುಹಿಸಿದೆವು. ವಿಶ್ರಾಂತಿ ಪಡೆಯಲು ವೈದ್ಯರು ಹೇಳಿದ್ದಾರೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಸುದ್ದಿಗಾರರಿಗೆ ತಿಳಿಸಿದರು.

'ಎಚ್.ಕೆ.ಪಾಟೀಲಗೆ ಸಿ.ಎಂ ಯೋಗ'

ಗದಗ: 'ಸಚಿವ ಎಚ್.ಕೆ.ಪಾಟೀಲ ಅವರಿಗೆ ಮುಖ್ಯಮಂತ್ರಿ ಯೋಗ ಕೂಡಿ ಬರಲಿ' ಎಂದು ಚಿತ್ರದುರ್ಗ ಭೋವಿ ಗುರುಪೀಠ ಸಂಸ್ಥಾನ ಮಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಹೇಳಿದರು.

ನಗರದಲ್ಲಿ ಭಾನುವಾರ ನಡೆದ ಸಿದ್ಧರಾಮೇಶ್ವರ ಜಯಂತ್ಯುತ್ಸವದಲ್ಲಿ ಸಚಿವ ಎಚ್.ಕೆ.ಪಾಟೀಲ ಅವರಿಗೆ ಸ್ವಾಗತ ಕೋರುವ ವೇಳೆ, 'ಸಚಿವ ಎಚ್.ಕೆ.ಪಾಟೀಲ ಅವರಿಗೆ ಸಿ.ಎಂ ಯೋಗ ಇತ್ತು. ಇಷ್ಟರಲ್ಲಿ ಪಾಟೀಲರು ಎರಡು, ಮೂರು ಬಾರಿ ಸಿ.ಎಂ ಆಗಿರುತ್ತಿದ್ದರು. ಎಸ್.ಎಂ.ಕೃಷ್ಣ ಆದಮೇಲೆ ಸಿ.ಎಂಗಾಗಿ ಹೆಸರು ಓಡಿದ್ದು ಪಾಟೀಲರದ್ದೇ. ತಡವಾಗಿಯಾದರೂ ಅವರಿಗೆ ಸಿ.ಎಂ ಯೋಗ ಕೂಡಿ ಬರಲಿ' ಎಂದು ಹಾರೈಸಿದರು.

'ಹಿಂದೂ ಸಂವಿಧಾನ ಜಾರಿಗೆ ಬಿಡಲ್ಲ'

ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ ಹೇಳಿಕೆ

ಪ್ರಜಾವಾಣಿ ವಾರ್ತೆ

ಕೂಡಲಸಂಗಮ (ಬಾಗಲಕೋಟೆ ಜಿಲ್ಲೆ): 'ಪ್ರಯಾಗ್‌ರಾಜ್‌ನ ಮಹಾಕುಂಭ ಮೇಳದಲ್ಲಿ ಹಿಂದೂ ಸಂವಿಧಾನ ಜಾರಿಗೆ ತರುತ್ತೇವೆ ಎಂದು ಕೆಲವರು ಹೇಳುತ್ತಿರುವುದು ಖಂಡನೀಯ. ಬಹುತ್ವ ಭಾರತದಲ್ಲಿ ಹಿಂದೂ ಸಂವಿಧಾನ ಜಾರಿಗೆ ತರಲು ಬಿಡುವುದಿಲ್ಲ' ಎಂದು ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಕೂಡಲಸಂಗಮದ ಸಭಾ ಭವನದಲ್ಲಿ ಭಾನುವಾರ ನಡೆದ ಹಂಡೆವಜೀರ ಸಮಾಜದ 3ನೇ ರಾಜ್ಯಮಟ್ಟದ ಸಮಾವೇಶ ಉದ್ಘಾಟನಾ ಸಮಾರಂಭದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

'ವೀರಶೈವದಿಂದ ಲಿಂಗಾಯತ, ಲಿಂಗಾಯತದಿಂದ ವೀರಶೈವ ತೆಗೆದರೆ ಸಮಾಜಕ್ಕೆ ನಷ್ಟ. ಭಿನ್ನಾಭಿಪ್ರಾಯ ಬಿಟ್ಟು ಒಗ್ಗೂಡಿ ನಡೆದರೆ ಸಮಾಜಕ್ಕೆ ಭವಿಷ್ಯ ಇದೆ. ಧರ್ಮವನ್ನು ಒಡೆಯುವ ಕಾರ್ಯವನ್ನು ಯಾರೂ ಮಾಡಬಾರದು. ವೈಷ್ಣವರ ದಬ್ಬಾಳಿಕೆ, ಅಕ್ರಮ ತಡೆಯಲು ಶೈವರು ಒಂದಾಗಬೇಕು. ಬ್ರಾಹ್ಮಣರನ್ನು ಹೊರತು ಪಡಿಸಿ ಹಿಂದೂ ಧರ್ಮವನ್ನು, ಜಂಗಮರನ್ನು ಹೊರತು ಪಡಿಸಿ ವೀರಶೈವ ಲಿಂಗಾಯತ ಧರ್ಮವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಬ್ರಾಹ್ಮಣರು ಹಿಂದೂ ಧರ್ಮಕ್ಕೆ, ಜಂಗಮರು ವೀರಶೈವ ಲಿಂಗಾಯತ ಧರ್ಮಕ್ಕೆ ತ್ಯಾಗ, ಸೇವೆ ಮಾಡಿದ್ದಾರೆ. ಎಲ್ಲರನ್ನು ಬಳಸಿಕೊಂಡು ಧರ್ಮ ಕಟ್ಟುವ ಕಾರ್ಯವನ್ನು ಮಾಡಬೇಕು' ಎಂದು ಹೇಳಿದರು.

'ಹಂಡೆ ವಜೀರ ಸಮಾಜದ ಹಣಮಪ್ಪ ನಾಯಕನ ಜಯಂತಿಯನ್ನು ಪ್ರತಿ ವರ್ಷ ಏಪ್ರಿಲ್ 9 ರಂದು ಸರ್ಕಾರಿ ಜಯಂತಿಯಾಗಿ ಆಚರಿಸಬೇಕು. ಹಂಡೆ ವಜೀರ ಸಮಾಜವನ್ನು ಸಾಂಸ್ಥಿಕವಾಗಿ ಬಲಗೊಳಿಸಬೇಕು. ವಿಜಯಪುರ ಅಥವಾ ಬಾಗಲಕೋಟೆ ಜಿಲ್ಲೆಯಲ್ಲಿ ಸರ್ಕಾರ 10 ಎಕರೆ ಭೂಮಿಯನ್ನು ಸಮಾಜದ ಟ್ರಸ್ಟ್‌ಗೆ ನೀಡಬೇಕು. ರಾಜಕೀಯ ಪಕ್ಷಗಳು ಸಮಾಜದ ನಾಯಕರಿಗೆ ರಾಜಕೀಯ ಪ್ರಾತಿನಿಧ್ಯ ನೀಡಬೇಕು' ಎಂದು ಆಗ್ರಹಿಸಿದರು.

ಸಮಾವೇಶ ಉದ್ಘಾಟಿಸಿದ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ, 'ಗುರು-ವಿರಕ್ತರಲ್ಲಿ ಭಿನ್ನಾಭಿಪ್ರಾಯ ಇದೆ. ವೀರಶೈವ ಲಿಂಗಾಯತರು ಒಗ್ಗಟ್ಟಾಗಿ ಬದುಕುತ್ತಿಲ್ಲ. ಒಗ್ಗಟ್ಟಾದರೆ ದೇಶವನ್ನೇ ಆಳುತ್ತೇವೆ. ಸರ್ಕಾರದ ಸೌಲಭ್ಯ ಪಡೆಯಲು ಒಗ್ಗಟ್ಟು, ಹೋರಾಟ ಅನಿವಾರ್ಯ' ಎಂದರು.

ಶಾಸಕರಾದ ವಿಜಯಾನಂದ ಕಾಶಪ್ಪನವರ, ರಾಜುಗೌಡ ಪಾಟೀಲ, ಮಾಜಿ ಶಾಸಕರಾದ ಎಸ್.ಕೆ. ಬೆಳ್ಳುಬ್ಬಿ, ಎ.ಎಸ್. ಪಾಟೀಲ ನಡಹಳ್ಳಿ ಪಾಲ್ಗೊಂಡಿದ್ದರು.

ಬಾಗಲಕೋಟೆ ಜಿಲ್ಲೆ ಕೂಡಲಸಂಗಮದಲ್ಲಿ ಭಾನುವಾರ ನಡೆದ ಹಂಡೆವಜೀರ ಸಮಾಜದ 3ನೇ ರಾಜ್ಯಮಟ್ಟದ ಸಮಾವೇಶವನ್ನು ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಉದ್ಘಾಟಿಸಿದರು. ವಿಧಾನ ಪರಿಷತ್ ಸದಸ್ಯ ಪಿ.ಎಚ್. ಪೂಜಾರಿ, ಸಂಸದ ಪಿ.ಸಿ.ಗದ್ದಿಗೌಡರ, ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಕೊಟ್ಟೂರು ಬಸವಲಿಂಗ ಸ್ವಾಮೀಜಿ ಭಾಗವಹಿಸಿದ್ದರು

'ಜಮೀನಿದ್ದರೆ ಅರಣ್ಯ ಭೂಮಿ ಸಿಗದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಟ್ಟಾ ಜಮೀನು (ಕಂದಾಯ ಜಮೀನು) ಹೊಂದಿದ್ದೂ ಅರಣ್ಯ ಹಕ್ಕು ಕಾಯ್ದೆ ಅಡಿ ಭೂಮಿಗಾಗಿ ಅರ್ಜಿ ಸಲ್ಲಿಸಿದ್ದರೆ, ಅಂತಹ ಅರ್ಜಿಗಳನ್ನು ಕೈಬಿಡುವಂತೆ ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಈ ಸಂಬಂಧ ಅರಣ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿರುವ ಅವರು, '2005ರ ಡಿಸೆಂಬರ್ 13ಕ್ಕೂ ಮುನ್ನ ಜೀವನೋಪಾಯಕ್ಕಾಗಿ ಅರಣ್ಯ ಭೂಮಿ ಬಳಸುತ್ತಿದ್ದು ಮತ್ತು ಅರಣ್ಯದಲ್ಲಿ ವಾಸವಿರುವವರ ಅನುಕೂಲಕ್ಕಾಗಿ ಅರಣ್ಯ ಹಕ್ಕು ಕಾಯ್ದೆ ಅಡಿ ಅರ್ಜಿ ಆಹ್ವಾನಿಸಲಾಗಿದೆ. ಅದು ದುರ್ಬಳಕೆ ಆಗಬಾರದು' ಎಂದು ಸೂಚಿಸಿದ್ದಾರೆ.

'ಅರ್ಜಿ ಸಲ್ಲಿಸಿರುವವರಲ್ಲಿ ಹಲವರು ಪಟ್ಟಾ ಜಮೀನು ಹೊಂದಿದ್ದಾರೆ. ಹೀಗಾಗಿ ಅರ್ಜಿ ಸಲ್ಲಿಸುವವರು ಸೂಚಿತ ದಿನಾಂಕಕ್ಕಿಂತ (2005ರ ಡಿ. 13) ಮೊದಲು ಪಟ್ಟಾ ಜಮೀನು ಮತ್ತು ಅರಣ್ಯ ಜಮೀನು ಸೇರಿ 3 ಎಕರೆಗಿಂತ ಹೆಚ್ಚು ಜಮೀನು ಹೊಂದಿಲ್ಲ ಎಂದು ಸ್ವಯಂಘೋಷಣಾ ಪತ್ರ ನೀಡಬೇಕು. ಅವರ ಕುಟುಂಬದವರ ಹೆಸರಿನಲ್ಲೂ ಜಮೀನು ಇರಬಾರದು' ಎಂದಿದ್ದಾರೆ.

ಉಡುಪಿ ಜಿಲ್ಲಾಧಿಕಾರಿ ಸಮ್ಮುಖದಲ್ಲಿ ಶರಣಾಗತಿ

ನಕ್ಸಲ್ ಲಕ್ಷ್ಮಿ ತೊಂಬಟ್ಟು ಮುಖ್ಯವಾಹಿನಿಗೆ

ಪ್ರಜಾವಾಣಿ ವಾರ್ತೆ

ಉಡುಪಿ: ನಕ್ಸಲ್ ಚಟುವಟಿಕೆಯಲ್ಲಿ ಈ ಹಿಂದೆ ಗುರುತಿಸಿಕೊಂಡಿದ್ದ ಕುಂದಾಪುರ ತಾಲ್ಲೂಕಿನ ಅಮಾಸೆಬೈಲು ಸಮೀಪದ ತೊಂಬಟ್ಟುವಿನ ಲಕ್ಷ್ಮಿ ತೊಂಬಟ್ಟು ಅವರು ಉಡುಪಿ ಜಿಲ್ಲಾಧಿಕಾರಿ ಕೆ. ವಿದ್ಯಾಕುಮಾರಿ ಸಮ್ಮುಖದಲ್ಲಿ ಭಾನುವಾರ ಶರಣಾದರು.

ಈ ಸಂದರ್ಭದಲ್ಲಿ ಮಾತನಾಡಿದ ಲಕ್ಷ್ಮಿ ತೊಂಬಟ್ಟು, 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೀಡಿರುವ ಆಹ್ವಾನವನ್ನು ಸುದ್ದಿ ವಾಹಿನಿಗಳ ಮೂಲಕ ನೋಡಿದ್ದೇನೆ. ಆ ಅವಕಾಶವನ್ನು ಉಪಯೋಗಿಸಿಕೊಂಡು ಮುಖ್ಯವಾಹಿನಿಗೆ ಬಂದಿದ್ದೇನೆ ಎಂದರು.

'ನಮ್ಮ ಊರಿಗೆ ಈಗಲೂ ಏನೂ ಸೌಲಭ್ಯವಿಲ್ಲ. ರಸ್ತೆ, ಆಸ್ಪತ್ರೆ, ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಈ ಸಮಸ್ಯೆಗಳನ್ನು ಸರ್ಕಾರ ಪರಿಹರಿಸಬೇಕು. ನಾನು ಸ್ವ ಇಚ್ಛೆಯಂತೆ ಬಂದಿದ್ದೇನೆ' ಎಂದು ಹೇಳಿದರು.

ಜಿಲ್ಲಾಧಿಕಾರಿ ಕೆ.ವಿದ್ಯಾಕುಮಾರಿ ಮಾತನಾಡಿ, ರಾಜ್ಯ ಸರ್ಕಾರವು ಮೂರು ವರ್ಗದ ನಕ್ಸಲ್ ಶರಣಾಗತಿ ಪ್ಯಾಕೇಜ್ ಘೋಷಿಸಿದೆ. ನಮ್ಮ ರಾಜ್ಯದ ನಿವಾಸಿಗಳಾಗಿದ್ದರೆ 'ಎ' ವರ್ಗದ ಪ್ಯಾಕೇಜ್ ನೀಡಲಾಗುತ್ತಿದೆ. ಲಕ್ಷ್ಮಿ ಅವರು 'ಎ' ವರ್ಗದ ನಕ್ಸಲ್ ಆಗಿದ್ದಾರೆ. ಪುನರ್ವಸತಿ, ಸ್ವ ಉದ್ಯೋಗ, ವಿದ್ಯಾಭ್ಯಾಸಕ್ಕೂ ಅವಕಾಶ ಇದೆ. ಅವರ ಬೇಡಿಕೆಗನುಗುಣವಾಗಿ ಅದನ್ನು ನೀಡಲಾಗುತ್ತದೆ. ಲಕ್ಷ್ಮಿ ಅವರ ಊರಿನ ಸಮಸ್ಯೆಗಳ ಬಗ್ಗೆಯೂ ಗಮನ ಹರಿಸಲಾಗುವುದು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕೆ. ಮಾತನಾಡಿ, 'ಲಕ್ಷ್ಮಿ ತೊಂಬಟ್ಟು ಅವರ ವಿರುದ್ಧ 2007 ಮತ್ತು 2008ರಲ್ಲಿ ಗುಂಡಿನ ದಾಳಿ ನಡೆಸಿದ, ಭಿತ್ತಿಪತ್ರ ಅಂಟಿಸಿದ ಮತ್ತು ವ್ಯಕ್ತಿಯೊಬ್ಬರಿಗೆ ಹಲ್ಲೆ ಮಾಡಿ, ಬೆದರಿಕೆ ಹಾಕಿದ ಪ್ರಕರಣಗಳು ಅಮಾಸೆಬೈಲು ಪೊಲೀಸ್ ಠಾಣೆಯಲ್ಲಿ ದಾಖಲಾಗಿವೆ' ಎಂದು ತಿಳಿಸಿದರು.

ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ಸಮಿತಿ ಸದಸ್ಯ ಕೆ.ಪಿ. ಶ್ರೀಪಾಲ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್ ಇದ್ದರು.

ಅದಕ್ಕೂ ಮೊದಲು ಪೊಲೀಸ್ ಭದ್ರತೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ಲಕ್ಷ್ಮಿ ಅವರನ್ನು ಕರೆದೊಯ್ದು ಶರಣಾಗತಿ ಪ್ರಕ್ರಿಯೆಗಳನ್ನು ಪೂರೈಸಲಾಗಿತ್ತು. ಲಕ್ಷ್ಮಿ ಅವರ ಪತಿ ಸಂಜೀವ ಕುಮಾರ್, ಸಹೋದರರಾದ ವಿಠಲ್ ಪೂಜಾರಿ, ಬಸವ ಪೂಜಾರಿ ಅವರು ಜಿಲ್ಲಾಧಿಕಾರಿ ಕಚೇರಿಗೆ ಬಂದಿದ್ದರು.

ನಕ್ಸಲ್ ಚಟುವಟಿಕೆಯಲ್ಲಿದ್ದಾಗಲೇ 2008ರಲ್ಲಿ ಸಂಜೀವ ಕುಮಾರ್ ಅವರನ್ನು ಮದುವೆಯಾಗಿದ್ದ ಲಕ್ಷ್ಮಿ ಅವರಿಗೆ ಇಬ್ಬರು ಮಕ್ಕಳಿದ್ದಾರೆ.

ಲಕ್ಷ್ಮಿ ತೊಂಬಟ್ಟು ಅವರನ್ನು ಕುಂದಾಪುರದ ಎರಡನೇ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಧೀಶರು ಅವರಿಗೆ ನ್ಯಾಯಾಂಗ ಬಂಧನ ವಿಧಿಸಿದ್ದಾರೆ. ಬಳಿಕ ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ಅವರನ್ನು ಮಂಗಳೂರಿನ ಜೈಲಿಗೆ ಕರೆದೊಯ್ಯಲಾಯಿತು.

ನಕ್ಸಲ್ ತೊಂಬಟ್ಟು ಲಕ್ಷ್ಮಿ (ಎಡದಿಂದ ಎರಡನೆಯವರು) ಭಾನುವಾರ ಶರಣಾದರು. ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ಸಮಿತಿ ಸದಸ್ಯ ಕೆ.ಪಿ. ಶ್ರೀಪಾಲ್, ಜಿಲ್ಲಾಧಿಕಾರಿ ಕೆ.ವಿದ್ಯಾಕುಮಾರಿ ಮತ್ತು ಎಸ್‌ಪಿ. ಡಾ.ಅರುಣ್ ಕೆ. ಉಪಸ್ಥಿತರಿದ್ದರು

> **ಶಸ್ತ್ರಾಸ್ತ್ರ ಹೋರಾಟದಿಂದ ಪ್ರಯೋಜನವಿಲ್ಲ. ಚಳವಳಿ ಮಾಡಲು ಅವಕಾಶವಿದೆ ಎಂದು ಅರಿತು ಈ ಹಿಂದೆಯೇ ನಾನು ಮುಖ್ಯವಾಹಿನಿಗೆ ಬಂದಿದ್ದೇನೆ**
> **ಸಂಜೀವ ಕುಮಾರ್**
> ಲಕ್ಷ್ಮಿ ತೊಂಬಟ್ಟು ಪತಿ

ಯತ್ನಾಳ ಬಣ ಇಂದು ದೆಹಲಿಗೆ

ಒಂದನೇ ಪುಟದಿಂದ...

ಜೆ.ಪಿ.ನಡ್ಡಾ ಅವರ ಭೇಟಿಗೆ ಸಮಯ ಕೇಳಲಾಗಿದೆ. ಇನ್ನೂ ಸಮಯ ಸಿಕ್ಕಿಲ್ಲ. ಹೀಗಾಗಿ ಅಲ್ಲೇ ಉಳಿದುಕೊಂಡು ಭೇಟಿ ಮಾಡಿಯೇ ಬರಲು ತೀರ್ಮಾನಿಸಲಾಗಿದೆ. ಯಾವುದೇ ಕಾರಣಕ್ಕೂ ವಿಜಯೇಂದ್ರ ಅವರನ್ನು ಮುಂದುವರಿಸಬಾರದು ಎಂಬುದಾಗಿ ಒತ್ತಡ ಹೇರಲು ನಿರ್ಧರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸಂಸತ್ ಅಧಿವೇಶನ ಮತ್ತು ದೆಹಲಿ ವಿಧಾನಸಭಾ ಚುನಾವಣೆ ಕಾರಣ ವರಿಷ್ಠರ ಭೇಟಿ ಅಷ್ಟು ಸುಲಭವಲ್ಲ. ದೆಹಲಿ ವಿಧಾನಸಭೆಗೆ ಫೆ.5ರಂದು ಮತದಾನ ನಡೆಯಲಿದೆ. ಆ ಬಳಿಕವೇ ಭೇಟಿಯ ಸಾಧ್ಯತೆ ಹೆಚ್ಚು. ಅಲ್ಲದೇ, ಸಂಸತ್ತಿನಲ್ಲಿ ವಕ್ಫ್ ತಿದ್ದುಪಡಿ ಮಸೂದೆ ಮಂಡನೆಯಾಗುವುದರಿಂದ ತಮ್ಮ ತಂಡ ನೀಡಿರುವ ವರದಿಯ ಅಂಶಗಳನ್ನು ಸೇರಿಸಲಾಗಿದೆಯೇ ಎಂಬ ಕುತೂಹಲವೂ ಯತ್ನಾಳ ಬಣಕ್ಕಿದೆ ಎಂದು ಮೂಲಗಳು ಹೇಳಿವೆ.

ಬಿ.ವೈ.ವಿಜಯೇಂದ್ರ ಅವರ ಆಯ್ಕೆ ಬಹುತೇಕ ಖಚಿತ ಎಂಬ ಚರ್ಚೆ ರಾಜ್ಯ ಬಿಜೆಪಿ ವಲಯದಲ್ಲಿ ಆರಂಭವಾಗಿದೆ. ಈ ಮಧ್ಯೆ ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರು ದೆಹಲಿಯಲ್ಲಿ ಜೆ.ಪಿ.ನಡ್ಡಾ ಅವರನ್ನು ಭೇಟಿ ಮಾಡಿ, ಯಾವುದೇ ಕಾರಣಕ್ಕೂ ವಿಜಯೇಂದ್ರ ಅವರನ್ನು ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಮಾಡಬಾರದು ಎಂದು ಒತ್ತಡ ಹೇರಿದ್ದಾರೆ. ವರಿಷ್ಠರ ಮುಂದಿನ ನಡೆ ಏನು ಎಂಬ ಕುತೂಹಲ ಬಿಜೆಪಿ ವಲಯದಲ್ಲಿ ಮೂಡಿದೆ.

ನನ್ನದು ಬಿಜೆಪಿ ಗುಂಪು: ಪ್ರಭು ಚವ್ಹಾಣ

ಒಂದನೇ ಪುಟದಿಂದ...

'5 ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಕಾಂಗ್ರೆಸ್ ಸರ್ಕಾರ ರಾಜ್ಯದ ಜನರಿಗೆ ಮೋಸ ಮಾಡಿದೆ. ರಾಜ್ಯದಲ್ಲಿರುವ ಈಗಿನ ಪಶುಸಂಗೋಪನೆ ಇಲಾಖೆ ಸಚಿವರಿಗೆ ಇಲಾಖೆಯ ಯೋಜನೆಗಳ ಬಗ್ಗೆ ಮಾಹಿತಿ ಇಲ್ಲ. ಹಿಂದೂ ವಿರೋಧಿ ಕಾಂಗ್ರೆಸ್ ಸರ್ಕಾರ ಗೋವುಗಳ ರಕ್ಷಣೆ ಮಾಡುತ್ತಿಲ್ಲ. ಗೋ ಮಾತೆಯ ಶಾಪ ತಟ್ಟಿ ಕೆಲವೇ ದಿನದಲ್ಲಿ ಸರ್ಕಾರ ಪತನವಾಗಲಿದೆ' ಎಂದು ಚವ್ಹಾಣ ಭವಿಷ್ಯ ನುಡಿದರು.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಉ.ಅ.ಸಂರವರ ತಾಂತ್ರಿಕ ಸಹಾಯಕರ ಕಛೇರಿ,

ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು. ಜಿಂಕೆವನ, ಕೆ.ಎಂ.ರಸ್ತೆ, ಜ್ಯೋತಿ ನಗರ, ಚಿಕ್ಕಮಗಳೂರು –577102.

ದೂರವಾಣಿ: 08262–238800 ಇಮೇಲ್: acfckm555@gmail.com

ಸಂಖ್ಯೆ: ಟೆಂಟಕಲ್ ಪೆನ್ಸಿಂಗ್/ಟೆಂಡರ್/2024–25/2ನೇ ಕರೆ ದಿನಾಂಕ :31-01-2025

ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ.

2024–25ನೇ ಸಾಲಿನಲ್ಲಿ ಕಾಡಾನೆಗಳ ಹಾವಳಿ ತಡೆಗಟ್ಟಲು ಚಿಕ್ಕಮಗಳೂರು ಅರಣ್ಯ 'ವಿಭಾಗದ ಆಲ್ದೂರು ವಲಯದಲ್ಲಿ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಪ್ರದೇಶದಲ್ಲಿ **"ಡಬಲ್ ಲೈನ್ ಸೋಲಾರ್ ಟೆಂಟಕಲ್ ಫೆನ್ಸಿಂಗ್ ನಿರ್ಮಾಣ"** ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಆಸಕ್ತ ನೊಂದಾಯಿತ ಗುತ್ತಿಗೆದಾರರಿಂದ ದ್ವಿ ಲಕೋಟೆಯಲ್ಲಿ ಅಲ್ಪಾವಧಿ ಇ-ಟೆಂಡರನ್ನು (2ನೇ ಕರೆ)ಆಹ್ವಾನಿಸಲಾಗಿದೆ.

ಅಲ್ಪಾವಧಿ ಇ–ಟೆಂಡರ್ (2ನೇ ಕರೆ)ಸ್ವೀಕರಿಸುವ ಕಡೇ ದಿನಾಂಕ:10–02–2025ರ ಸಂಜೆ 5.00 ಗಂಟೆಯವರೆಗೆ ನಿಗಧಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಯದಾಗಿರುತ್ತದೆ, ಅಥವಾ ಇ–ಸಂಗ್ರಹಣಾ ಪೋರ್ಟಲ್ ನಲ್ಲಿ **http://kppp.karnataka.gov.in** ಮಾಹಿತಿಯನ್ನು ಪಡೆಯಬಹುದು.

ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹಾಗೂ ಉ.ಅ.ಸಂ ಗಳ ತಾಂತ್ರಿಕ ಸಹಾಯಕರು ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಕೆಲಸವಿಲ್ಲದೆ ಸುಮ್ಮನೆ ಕುಳಿತವನ ಭುಜದ ಮೇಲೆ ಶನಿಯು ಬಂದು ಕೂಡುತ್ತಾನೆ.

–ಬೀಚಿ

ಕೊಳ್ಳುವ ಶಕ್ತಿ ಹೆಚ್ಚಿಸಲು ಕಸರತ್ತು ಬಿಹಾರಕ್ಕೆ ವಿಶೇಷ ಉಡುಗೊರೆ

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕೇಂದ್ರದ 2025–26ನೇ ಸಾಲಿನ ಬಜೆಟ್ ಮಂಡಿಸಿದ್ದಾರೆ. ಮಧ್ಯಮ ವರ್ಗದ ಜನರನ್ನು ಖುಷಿಪಡಿಸುವಂತಹ ಕೆಲವು ಅಂಶಗಳು ಈ ಬಜೆಟ್‌ನಲ್ಲಿ ಇವೆ. ₹12.75 ಲಕ್ಷ ವಾರ್ಷಿಕ ಆದಾಯ ಉಳ್ಳ ವೇತನದಾರರು ಮತ್ತು ₹12 ಲಕ್ಷದವರೆಗೆ ಆದಾಯ ಉಳ್ಳ ಇತರರು ಆದಾಯ ತೆರಿಗೆ ಪಾವತಿಸಬೇಕಿಲ್ಲ ಎಂಬುದು ಇದರಲ್ಲಿನ ಪ್ರಮುಖ ಅಂಶ. ಆದಾಯ ತೆರಿಗೆ ವಿನಾಯಿತಿ ಮಿತಿಯನ್ನು ಏರಿಸಬೇಕು ಎಂಬುದು ಮಧ್ಯಮ ವರ್ಗದ ಜನರ ಬಹುಕಾಲದ ಬೇಡಿಕೆಯಾಗಿತ್ತು. ಈ ವರ್ಗದ ಜನರ ಕೈಯಲ್ಲಿ ಹೆಚ್ಚು ಹಣ ಉಳಿಯಲಿ ಎಂಬುದರ ಜೊತೆಯಲ್ಲೇ ಅವರು ಹೆಚ್ಚು ಹೆಚ್ಚು ಖರ್ಚು ಮಾಡಿ ಅರ್ಥವ್ಯವಸ್ಥೆಗೆ ಚೈತನ್ಯ ತುಂಬಲಿ ಎಂಬ ಉದ್ದೇಶವೂ ಇದರ ಹಿಂದೆ ಇದೆ. ಈ ನಿರ್ಧಾರವು ಆರ್ಥಿಕ ಪ್ರಗತಿಗೆ ವೇಗ ತುಂಬಲಿದೆ ಎಂಬುದು ಹಣಕಾಸು ಸಚಿವರ ಲೆಕ್ಕಾಚಾರ ಆಗಿರಬಹುದು. ಆದರೆ, ವಾಸ್ತವದಲ್ಲಿ ಅದು ಕಾರ್ಯರೂಪಕ್ಕೆ ಬಂದರೆ ಬರುತ್ತದೆ ಎಂದು ಹೇಳಲಾಗದು. ಜಿಡಿಪಿ ಬೆಳವಣಿಗೆಯನ್ನು ಶೇಕಡ 6.6ರಷ್ಟರಲ್ಲಿ ಆದರೂ ಉಳಿಸಿಕೊಳ್ಳಲು ಆದಾಯ ತೆರಿಗೆ ವಿನಾಯಿತಿ ಮಿತಿ ಏರಿಕೆಯೊಂದೇ ಸಾಲದು ಎಂದು ರೇಟಿಂಗ್ ಸಂಸ್ಥೆ ಮೂಡೀಸ್ ಅಭಿಪ್ರಾಯಪಟ್ಟಿದೆ. ಅದೇನೇ ಇದ್ದರೂ ಹಣದುಬ್ಬರ, ವೇತನದಲ್ಲಿ ಏರಿಕೆ ಆಗದೆ ಇರುವುದು ಸೇರಿದಂತೆ ಬೇರೆ ಬೇರೆ ಬಗೆಯ ಆರ್ಥಿಕ ಸಮಸ್ಯೆಗಳಿಂದ ಕಂಗೆಟ್ಟಿರುವ ಮಧ್ಯಮ ವರ್ಗದ ಜನರು ಸ್ವಲ್ಪಮಟ್ಟಿಗೆ ನಿರಾಳರಾಗುವುದರಲ್ಲಿ ಅನುಮಾನ ಇಲ್ಲ.

ಚುನಾವಣೆಯ ಕಾರಣಕ್ಕೆ ಅಥವಾ ಬೇರೆ ಯಾವುದೇ ಕಾರಣಕ್ಕೆ ಒಂದು ರಾಜ್ಯಕ್ಕೆ ಹೆಚ್ಚಿನ ಮಹತ್ವ ಕೊಟ್ಟು, ಕೆಲವು ರಾಜ್ಯಗಳನ್ನು ನಿರ್ಲಕ್ಷಿಸುವುದು ಸರಿಯಲ್ಲ

ಆದರೆ, ಮಧ್ಯಮ ವರ್ಗವನ್ನು ಖುಷಿಪಡಿಸಿರುವ ಹಣಕಾಸು ಸಚಿವರು ಇತರ ಕ್ಷೇತ್ರಗಳ ಕುರಿತು ಅದೇ ರೀತಿಯ ಕಾಳಜಿಯನ್ನು ತೋರಿಲ್ಲ. ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಮತ್ತು ಅದರ ನಂತರದ ಆರ್ಥಿಕ ಬಿಕ್ಕಟ್ಟಿನ ಕಾಲದಲ್ಲಿ ಗ್ರಾಮೀಣ ಪ್ರದೇಶದ ಜನರಿಗೆ ಆಧಾರವಾಗಿ ನಿಂತಿದ್ದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಹೆಚ್ಚಿನ ಅನುದಾನ ಒದಗಿಸಬೇಕು ಎಂಬ ಬೇಡಿಕೆಗೆ ಸ್ಪಂದನ ಸಿಕ್ಕಿಲ್ಲ. ಕೃಷಿ, ಗ್ರಾಮೀಣಾಭಿವೃದ್ಧಿ, ಶಿಕ್ಷಣ, ಆರೋಗ್ಯದಂತಹ ಕ್ಷೇತ್ರಗಳಲ್ಲಿ ಕ್ರಾಂತಿಕಾರಕ ಯೋಜನೆಗಳೇನೂ ಪ್ರಕಟವಾಗಿಲ್ಲ. ಬದಲಿಗೆ, ಗ್ರಾಮೀಣ ರಸ್ತೆ ನಿರ್ಮಾಣಕ್ಕೆ ಅನುದಾನವನ್ನು ದೊಡ್ಡ ಪ್ರಮಾಣದಲ್ಲಿ ಕಡಿತ ಮಾಡಲಾಗಿದೆ. ಬೆಳೆ ವಿಮೆ, ರಸಗೊಬ್ಬರ ಸಹಾಯಧನಕ್ಕೆ ಸಹ ಅನುದಾನವನ್ನು ಕಡಿಮೆ ಮಾಡಲಾಗಿದೆ.

ಬಿಹಾರ ವಿಧಾನಸಭೆಗೆ ಈ ವರ್ಷದ ಕೊನೆಯಲ್ಲಿ ನಡೆಯಲಿರುವ ಚುನಾವಣೆಯನ್ನು ಗಮನದಲ್ಲಿ ಇರಿಸಿಕೊಂಡು ನಿರ್ಮಲಾ ಅವರು ಬಜೆಟ್ ಸಿದ್ಧಪಡಿಸಿದ್ದಾರೆ. ಮಖಾನಾ ಮಂಡಳಿ ಸ್ಥಾಪನೆ, ಹೊಸ ವಿಮಾನ ನಿಲ್ದಾಣಗಳ ನಿರ್ಮಾಣ, ಪಟ್ನಾ ಐಐಟಿಯ ವಿಸ್ತರಣೆ, ಆಹಾರ ತಂತ್ರಜ್ಞಾನ ಸಂಸ್ಥೆ ಸ್ಥಾಪನೆ, ಪಶ್ಚಿಮ ಕೋಸಿ ಕಾಲುವೆ ಯೋಜನೆಯಂತಹ ಹಲವು ಕೊಡುಗೆಗಳನ್ನು ಬಿಹಾರಕ್ಕೆ ನೀಡಲಾಗಿದೆ. ಇವುಗಳಲ್ಲಿ ಹೆಚ್ಚಿನ ಯೋಜನೆಗಳು ಉತ್ತರ ಬಿಹಾರ, ಮಿಥಿಲಾ ಮತ್ತು ಕೋಸಿ ಪ್ರದೇಶಗಳಲ್ಲಿ ಅನುಷ್ಠಾನಗೊಳ್ಳಲಿವೆ. ಎನ್‌ಡಿಎ ಅಂಗಪಕ್ಷಗಳಾದ ಬಿಜೆಪಿ ಮತ್ತು ಜೆಡಿಯು ಈ ಪ್ರದೇಶಗಳಲ್ಲಿ ಪ್ರಬಲವಾಗಿವೆ. ಹೀಗಾಗಿ, ಚುನಾವಣೆಯಲ್ಲಿ ಜನರ ಮೇಲೆ ಪ್ರಭಾವ ಬೀರುವುದಕ್ಕೆ ಕೇಂದ್ರದ ಬಜೆಟ್ ಅನ್ನು ಬಳಸಿಕೊಳ್ಳಲಾಗಿದೆ ಎಂಬುದರಲ್ಲಿ ಅನುಮಾನವೇನೂ ಉಳಿಯುವುದಿಲ್ಲ. ಚುನಾವಣೆಯ ಕಾರಣಕ್ಕೆ ಅಥವಾ ಬೇರೆ ಯಾವುದೇ ಕಾರಣಕ್ಕೆ ಒಂದು ರಾಜ್ಯಕ್ಕೆ ಹೆಚ್ಚಿನ ಮಹತ್ವ ಕೊಟ್ಟು, ಕೆಲವು ರಾಜ್ಯಗಳನ್ನು ನಿರ್ಲಕ್ಷಿಸುವುದು ಸರಿಯಲ್ಲ. ಕೇಂದ್ರ ಸರ್ಕಾರದ ಇಂತಹ ನಡವಳಿಕೆಯು ಒಕ್ಕೂಟ ವ್ಯವಸ್ಥೆಗೆ ಎಸಗಿದ ದ್ರೋಹ ಎಂದೇ ಭಾವಿಸಬೇಕಾಗುತ್ತದೆ. ಪ್ರಧಾನಿ ನರೇಂದ್ರ ಮೋದಿ ಅವರು ದೆಹಲಿ ವಿಧಾನಸಭೆ ಚುನಾವಣಾ ಪ್ರಚಾರದಲ್ಲಿ ಕೇಂದ್ರದ ಬಜೆಟ್ ಅನ್ನು ಪದೇ ಪದೇ ಉಲ್ಲೇಖಿಸಿದ್ದಾರೆ. ಈ ಮೂಲಕ ಬಜೆಟ್ ಸಿದ್ಧಪಡಿಸುವಾಗ ದೆಹಲಿ ಚುನಾವಣೆಯೂ ಗಮನದಲ್ಲಿ ಇತ್ತು ಎಂಬುದನ್ನು ದೃಢಪಡಿಸಿದ್ದಾರೆ.

ದಿನದ ಟ್ವೀಟ್

ಅಭಿವೃದ್ಧಿ: ಇರಲಿ ವಿವೇಚನೆ

ಓ ದೇವರೇ! ಇದು ಮೊದಲು ದಟ್ಟ ಅರಣ್ಯವಾಗಿತ್ತು. ಇಲ್ಲಿಗೆ ಬರುವವರು 3 ಕಿ.ಮೀ. ದೂರದಲ್ಲೇ ಕಾರನ್ನು ನಿಲ್ಲಿಸಿ, ತೊರೆಯ ನಡುವೆ ನಡೆದುಕೊಂಡು ಬರಬೇಕಿತ್ತು. ಈಗ ಇವರೇನು ಮಾಡಿದ್ದಾರೆ? ಆಟದ ಮೈದಾನದಲ್ಲಿ ಕಲ್ಲನ್ನು ನಿಲ್ಲಿಸಿದಂತೆ ಕಾಣುತ್ತಿದೆ.

(ಅಭಿವೃದ್ಧಿ ಹೆಸರಿನಲ್ಲಿ ಬದಲಾದ ಯಾಣದ ಈಗಿನ ಸ್ಥಿತಿಗೆ ಪ್ರತಿಕ್ರಿಯೆ)

ತ್ರಿಶೂಲ್ ಎ.,

ಕಿಡಿನುಡಿ

ಸಾವಿರಾರು ವರ್ಷಗಳ ಗುಲಾಮಗಿರಿಗೆ ಅಂತ್ಯ ಹಾಡಿ ಜಾತ್ಯತೀತ ಸಂವಿಧಾನವನ್ನು ಜಾರಿಗೆ ತಂದ ದೇಶ ನಮ್ಮದು. ಹಿಂದೂ ಸಂವಿಧಾನ ಬಂದರೆ ದೇಶದಲ್ಲಿನ ಜೈನ, ಬೌದ್ಧ, ಕ್ರೈಸ್ತ, ಮುಸ್ಲಿಂ, ವೀರಶೈವ ಲಿಂಗಾಯತ ಮುಂತಾದ ಧರ್ಮೀಯರು ಎಲ್ಲಿಗೆ ಹೋಗಬೇಕು?

ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ನಿಡುಮಾಮಿಡಿ ಮಠ

25 ವರ್ಷಗಳ ಹಿಂದೆ

ಗುರುವಾರ, 3-2-2000

● **ಪಂಚಾಯಿತಿ ಚುನಾವಣೆ ಶೌಚಾಲಯ ಕಡ್ಡಾಯವಲ್ಲ**

ಬೆಂಗಳೂರು, ಫೆ. 2– ಮನೆಯಲ್ಲಿ ಶೌಚಾಲಯ ಹೊಂದಿಲ್ಲದವರೂ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸಲು ಹೈಕೋರ್ಟ್ ಇಂದು ಅನುಮತಿ ನೀಡಿ, ಇಂಥವರ ನಾಮಪತ್ರಗಳನ್ನೂ ಸ್ವೀಕರಿಸುವಂತೆ ಜಿಲ್ಲಾಧಿಕಾರಿಗಳಿಗೆ ಆದೇಶಿಸಿತು.

ಈ ಕ್ಷೇತ್ರಗಳ ಹಾಗೂ ಅಧಿಕ ಮೀಸಲಾತಿಯನ್ನು ಪ್ರಶ್ನಿಸಿರುವ ಕ್ಷೇತ್ರಗಳ ಚುನಾವಣೆಯ ಫಲಿತಾಂಶವು ರಿಟ್ ಅರ್ಜಿಗಳ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ ಎಂದು ಸ್ಪಷ್ಟಪಡಿಸಿತು.

ಪಂಚಾಯತ್‌ರಾಜ್ ಕಾಯ್ದೆಯ ಅನ್ವಯ ಹಾಗೂ ಮೀಸಲಾತಿಗೆ ಸಂಬಂಧಿಸಿದ ತಿದ್ದುಪಡಿಗಳಾದ 4 ಮತ್ತು 5ನೇ ವಿಧಿಗಳ ಜಾರಿಗೆ ತಡೆ ಆಜ್ಞೆ ನೀಡಲು ನಿರಾಕರಿಸಿತು. ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸಬೇಕಾದರೆ ಮನೆಯಲ್ಲಿ ಶೌಚಾಲಯ ಹೊಂದಿರಲೇಬೇಕೆಂಬ ನಿಯಮ ಜಾರಿಗೆ ತಂದಿರುವುದನ್ನು ಪ್ರಶ್ನಿಸಿ ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು ಬನ್ನಿಕೆರೆಯ ವಸಂತಕುಮಾರ್ ಶೆಟ್ಟಿ ರಿಟ್ ಅರ್ಜಿ ಸಲ್ಲಿಸಿದ್ದರು.

● **‘ಅಂತರರಾಜ್ಯ ನದಿ ವಿವಾದದಲ್ಲಿ ಹಸ್ತಕ್ಷೇಪ ಇಲ್ಲ’**

ನವದೆಹಲಿ, ಫೆ. 2– ಕೃಷ್ಣಾ ಜಲ ವಿವಾದಗಳ ನ್ಯಾಯಮಂಡಳಿಯು ಸೂಚಿಸಿರುವ ಸ್ಕೀಂ ‘ಬಿ’ ನ್ಯಾಯಮಂಡಳಿಯ ತೀರ್ಪಲ್ಲವಾದ್ದರಿಂದ ಅದನ್ನು ಗೆಜೆಟ್‌ನಲ್ಲಿ ಪ್ರಕಟಿಸಲು ಆಗಿಲ್ಲ. ಈ ಯೋಜನೆಗೆ ಸಂಬಂಧಿಸಿದಂತೆ ರಾಜ್ಯಗಳಲ್ಲಿ ಒಮ್ಮತ ಇಲ್ಲದ ಕಾರಣ ಅದನ್ನು ಜಾರಿಗೆ ತರುವುದು ಕಷ್ಟವಾಗಿರುವುದಾಗಿ ಕೇಂದ್ರ ಸರ್ಕಾರವು ಇಂದು ಸುಪ್ರೀಂ ಕೋರ್ಟ್‌ನಲ್ಲಿ ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸಿತು.

ಕೃಷ್ಣಾ ಜಲ ವಿವಾದ ಕುರಿತಂತೆ ಕರ್ನಾಟಕ ಮತ್ತು ಆಂಧ್ರ ಪ್ರದೇಶದ ದಾವೆಗಳ ಮೇಲೆ ನ್ಯಾಯಮೂರ್ತಿ ಎಸ್.ಬಿ. ಮಜುಂದಾರ್ ನೇತೃತ್ವದ ಐವರು ನ್ಯಾಯಮೂರ್ತಿಗಳನ್ನು ಒಳಗೊಂಡ ಸಂವಿಧಾನ ಪೀಠದ ಮುಂದೆ ಸಾಲಿಸಿಟರ್ ಜನರಲ್ ಹರೀಶ್ ಸಾಳ್ವೆ ಅವರು ಕೇಂದ್ರ ಸರ್ಕಾರದ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 3-2-1975

● **ದೆಹಲಿಯಲ್ಲಿ ಘರ್ಷಣೆ ಆರು ಸಾವು; ಕರ್ಫ್ಯೂ**

ನವದೆಹಲಿ, ಫೆ. 2– ದೆಹಲಿಯ ಜುಮ್ಮಾ ಮಸೀದಿ ಪ್ರದೇಶದಲ್ಲಿ ಇಂದು ಗಲಭೆ ಹಾಗೂ ಅಗ್ನಿ ಪ್ರಕರಣ ನಡೆಸಿದ ಉದ್ರಿಕ್ತ ಗುಂಪು ಮತ್ತು ಪೊಲೀಸರ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ 6 ಮಂದಿ ಸತ್ತಿದ್ದಾರೆ.

ಜುಮ್ಮಾ ಮಸೀದಿಯ ನಾಯಿಬ್ ಇಮಾಂ ಅವರನ್ನು ಆಂತರಿಕ ಭದ್ರತಾ ಶಾಸನದ ಪ್ರಕಾರ ಬಂಧಿಸಿರುವುದರಿಂದ ಕುಪಿತರಾದ ನೂರಾರು ಮಂದಿ ಇದ್ದ ಭಾರಿ ಗುಂಪು ಪೊಲೀಸರ ಜತೆ ಘರ್ಷಣೆಯಲ್ಲಿ ತೊಡಗಿದಾಗ ನಡೆದ ಈ ದುರ್ಘಟನೆಯಲ್ಲಿ ಆರು ಮಂದಿ ಪೊಲೀಸರು ಸೇರಿ 100 ಮಂದಿ ಗಾಯಗೊಂಡರು.

ಈ ಪ್ರದೇಶದಲ್ಲಿ 4ನೇ ತಾರೀಖು ಬೆಳಗಿನವರೆಗೆ ಕರ್ಫ್ಯೂ ವಿಧಿಸಲಾಗಿದೆ. ಗಲಭೆ, ಬೆಂಕಿ, ಲೂಟಿ ಮುಂತಾದವುಗಳಿಗೆ ಸಂಬಂಧಿಸಿದಂತೆ ಈ ಪ್ರಕರಣದಲ್ಲಿ 195 ಮಂದಿಯನ್ನು ಬಂಧಿಸಲಾಗಿದೆ.

● **ಕೈಗಾರಿಕಾ ಲೈಸೆನ್ಸ್ ಸರಳ ಪದ್ಧತಿಗೆ ಕರೆ**

ಬೆಂಗಳೂರು, ಫೆ. 2– ಕೈಗಾರಿಕಾ ಲೈಸೆನ್ಸ್ ನೀಡಿಕೆ ಪದ್ಧತಿ ಸರಳ ಮತ್ತು ಸುಲಭ ಆಗಿರಬೇಕು.

ಮದ್ದೂರು ಬಳಿ ಇಂದು ನಡೆದ ಸ್ಕೂಟರ್ ಕಾರ್ಖಾನೆಯ ಶಂಕುಸ್ಥಾಪನೆ ಸಮಾರಂಭದಲ್ಲಿ ಕೇಂದ್ರ ಸಚಿವ ಟಿ.ಎ. ಪೈ, ಮುಖ್ಯಮಂತ್ರಿ ಡಿ. ದೇವರಾಜ ಅರಸು, ರಾಜ್ಯದ ಕೈಗಾರಿಕಾ ಸಚಿವ ಎಸ್.ಎಂ. ಕೃಷ್ಣ ಅವರು ವ್ಯಕ್ತಪಡಿಸಿದ ಅಭಿಪ್ರಾಯ ಇದು.

ಪೈ ಅವರು ‘ಲೈಸೆನ್ಸ್ ನೀಡಿಕೆ ಪದ್ಧತಿಯಿಂದ ಕೈಗಾರಿಕೆ ಉದ್ದಿಮೆದಾರರಿಗೆ ತೊಂದರೆಯಾಗಬಾರದು. ಜತೆಗೆ ಉದ್ದಿಮೆಗಳಿಗೆ ಸಾಲ–ಸೌಲಭ್ಯ ನೀಡುವ ಬ್ಯಾಂಕ್ ಹಾಗೂ ಇತರ ಸಂಸ್ಥೆಗಳು ತಮ್ಮ ನಿಯಮಗಳನ್ನು ಸಡಿಲಗೊಳಿಸಬೇಕು’ ಎಂದು ಅವರು ಹೇಳಿದರು.

ಭಾರತ ಅವರೊಂದಿಗೆ ಹೇಗೆ ನಾಜೂಕಿನಿಂದ ವ್ಯವಹರಿಸಲಿದೆ ಎನ್ನುವುದು ಕುತೂಹಲಕಾರಿ

ಟ್ರಂಪ್ ಆದೇಶ, ಆಶಯ, ಅವಸರ

ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಅಮೆರಿಕದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಪ್ರಮಾಣವಚನ ಸ್ವೀಕರಿಸುತ್ತಲೇ ಜಾಗತಿಕ ರಾಜಕೀಯದ ಅಂಗಳದಲ್ಲಿ ಸಣ್ಣ ಸುನಾಮಿ ಎದ್ದಿದೆ.

ಟ್ರಂಪ್ ಅವರು ಅಧ್ಯಕ್ಷರಾದ ತರುವಾಯ ನೀಡಿದ ಹೇಳಿಕೆ ಮತ್ತು ಹೊರಡಿಸಿದ ಕಾರ್ಯನಿರ್ವಾಹಕ ಆದೇಶಗಳನ್ನು ನೋಡಿದರೆ, ಅದರಲ್ಲಿ ಅಚ್ಚರಿಯ ಅಂಶಗಳೇನೂ ಇಲ್ಲ. ಅಕ್ರಮ ವಲಸಿಗರನ್ನು ಪತ್ತೆ ಮಾಡುವ ಮತ್ತು ಹಿಂದಕ್ಕೆ ಕಳುಹಿಸುವ, ಪೌರತ್ವ ನಿಯಮಗಳನ್ನು ಬಿಗಿಗೊಳಿಸುವ ಮಾತನ್ನು ಅವರು ಚುನಾವಣಾ ಸಂದರ್ಭದಲ್ಲೇ ಆಡಿದ್ದರು. ಅಕ್ರಮ ವಲಸೆಯನ್ನು ಯಾವುದೇ ಜವಾಬ್ದಾರಿಯುತ ಸರ್ಕಾರ ಗಂಭೀರವಾಗಿಯೇ ತೆಗೆದುಕೊಳ್ಳಬೇಕು. ಶ್ರೀಮಂತ ರಾಷ್ಟ್ರಗಳಲ್ಲಿ ನೆಲೆ ಕಂಡುಕೊಳ್ಳುವ ದಿಸೆಯಲ್ಲಿ ವ್ಯಾಪಕವಾಗಿರುವ ‘ಬರ್ತ್ ಟೂರಿಸಂ’ ಅಮೆರಿಕದ ಮಟ್ಟಿಗೆ ದಂಧೆಯಾಗಿದೆ. ಅಮೆರಿಕದಲ್ಲಿ ಮಗುವಿಗೆ ಜನ್ಮ ಕೊಡಲು ಹಾತೊರೆಯುವ ಭಾರತ ಮೂಲದವರೂ ಅಧಿಕ ಸಂಖ್ಯೆಯಲ್ಲಿದ್ದಾರೆ. ಟ್ರಂಪ್ ಅವರ ನಿಲುವು ಈ ವರ್ಗಕ್ಕೆ ಅಸಮಾಧಾನ ಉಂಟುಮಾಡಿದ್ದರೆ, ಅದನ್ನು ಭಾರತಕ್ಕೆ ಆದ ಹಿನ್ನಡೆ ಎಂದುಕೊಳ್ಳುವಂತಿಲ್ಲ.

ಬೈಡನ್ ಅವರ ಜನಪ್ರಿಯತೆಯನ್ನು ಕುಂದಿಸಿದ, ಕಮಲಾ ಹ್ಯಾರಿಸ್ ಅವರಿಗೆ ಹಿನ್ನಡೆ ಉಂಟುಮಾಡಿದ ಅಂಶಗಳಲ್ಲಿ ಪ್ರಮುಖವಾದದ್ದು ಹಣದುಬ್ಬರ. ಈ ಸಮಸ್ಯೆಗೆ ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ ಉತ್ತರ ಕಂಡುಕೊಳ್ಳಲು ಟ್ರಂಪ್ ಹೊರಟಂತಿದೆ. ಹಾಗಾಗಿಯೇ ತಮ್ಮ ಭಾಷಣದಲ್ಲಿ ‘ಅಮೆರಿಕ ಮತ್ತೊಮ್ಮೆ ಉತ್ಪಾದನಾ ರಾಷ್ಟ್ರವಾಗಲಿದೆ. ನಮ್ಮ ಕಾಲುಗಳ ಕೆಳಗೆ ಇರುವ ದ್ರವರೂಪದ ಚಿನ್ನದಿಂದ ಅದು ಸಾಧ್ಯವಾಗುತ್ತದೆ. ಅತಿದೊಡ್ಡ ತೈಲ ಮತ್ತು ಅನಿಲ ಸಂಪತ್ತು ನಮ್ಮಲ್ಲಿದೆ, ನಾವು ಅದನ್ನು ಬಳಸಲಿದ್ದೇವೆ’ ಎಂದಿದ್ದಾರೆ. ಈ ನಿಲುವು ರಷ್ಯಾದ ತೈಲ ಗ್ರಾಹಕ ರಾಷ್ಟ್ರಗಳನ್ನು ತನ್ನತ್ತ ಸೆಳೆಯುವ, ಅಷ್ಟರಮಟ್ಟಿಗೆ ರಷ್ಯಾಕ್ಕೆ ಆರ್ಥಿಕ ಆಘಾತ ನೀಡುವ ಕ್ರಮವೂ ಹೌದು. ಮುಂದಿನ ದಿನಗಳಲ್ಲಿ ಹೆಚ್ಚಿನ ತೈಲವನ್ನು ಅಮೆರಿಕದಿಂದಲೇ ಕೊಂಡುಕೊಳ್ಳಬೇಕು ಎಂಬ ಒತ್ತಡ ಭಾರತದ ಮೇಲೂ ಬೀಳಬಹುದು.

ಜೊತೆಗೆ, ಟ್ರಂಪ್ ಅಮೆರಿಕದ ವ್ಯಾಪ್ತಿಯನ್ನು ಹಿರಿದು ಮಾಡುವ ಮಾತನ್ನಾಡಿದ್ದಾರೆ. ಗ್ರೀನ್ ಲ್ಯಾಂಡ್ ಅಪರೂಪದ ಲೋಹಗಳ ದೊಡ್ಡ ನಿಕ್ಷೇಪಗಳನ್ನು ಹೊಂದಿರುವ ಭೂಪ್ರದೇಶ. ಹಾಗಾಗಿ, ಗ್ರೀನ್ ಲ್ಯಾಂಡ್ ತನ್ನದಾಗಬೇಕು ಎಂದು ಅಮೆರಿಕ ಬಯಸುತ್ತಿದೆ. ಈ ಹಿಂದೆ, 2019ರಲ್ಲೂ ಗ್ರೀನ್ ಲ್ಯಾಂಡ್ ಬಗ್ಗೆ ಟ್ರಂಪ್ ಮಾತನಾಡಿದ್ದರು. ಗ್ರೀನ್ ಲ್ಯಾಂಡ್ ಮಾರಾಟಕ್ಕಿಲ್ಲ ಎಂದು ಡೆನ್ಮಾರ್ಕ್ ಪ್ರತಿಕ್ರಿಯಿಸಿತ್ತು.

ಅಂತೆಯೇ, ಪನಾಮ ಕಾಲುವೆಯ ವಿಷಯ. ಅಟ್ಲಾಂಟಿಕ್ ಮತ್ತು ಪೆಸಿಫಿಕ್ ಸಾಗರಗಳನ್ನು ಸಂಪರ್ಕಿಸಲು ಪನಾಮ ಕಾಲುವೆಯನ್ನು ಅಮೆರಿಕ 1914ರಲ್ಲಿ ನಿರ್ಮಿಸಿತ್ತು. 1977ರ ಒಪ್ಪಂದದ ಅನ್ವಯ ಕಾಲುವೆಯ ನಿಯಂತ್ರಣವನ್ನು ಪನಾಮಕ್ಕೆ ಬಿಟ್ಟು ಕೊಡಲಾಗಿತ್ತು. ಇದೀಗ ಚೀನಾವು ಪನಾಮ ಕಾಲುವೆಯಲ್ಲಿ ತನ್ನ ಪ್ರಭಾವ ಹೆಚ್ಚಿಸಿಕೊಳ್ಳುವತ್ತ ಹೆಜ್ಜೆಯಿರಿಸಿದೆ. ಹಾಗಾಗಿಯೇ ಟ್ರಂಪ್, ಪನಾಮ ಕಾಲುವೆಯ ನಿಯಂತ್ರಣವನ್ನು ಅಮೆರಿಕ ಮರಳಿ ಪಡೆಯುತ್ತದೆ ಎಂದಿದ್ದಾರೆ. ಇದೊಂದು ಬೆದರಿಕೆಯ ಮಾತು. ಇಂತಹ ಬೆದರಿಕೆಗಳನ್ನು ಹಾಕುವುದರಲ್ಲಿ ಟ್ರಂಪ್ ಅವರು ನಿಸ್ಸೀಮ. ಕೆನಡಾವನ್ನು ಅಮೆರಿಕದ ಭಾಗವಾಗಿಸಿಕೊಳ್ಳುವ ಅವರ ಮಾತನ್ನು ಈ ವರ್ಗಕ್ಕೇ ಸೇರಿಸಬಹುದು. ಅಮೆರಿಕದ ಸರ್ಕಾರಿ ಕಡತಗಳಲ್ಲಿನ ‘ಗಲ್ಫ್ ಆಫ್ ಮೆಕ್ಸಿಕೊ’ ಉಲ್ಲೇಖಗಳನ್ನು ‘ಗಲ್ಫ್ ಆಫ್ ಅಮೆರಿಕ’ ಎಂದು ತಿದ್ದುವ ಅವರ ಆದೇಶ ಹೆಚ್ಚಿನದೇನನ್ನೂ ಸಾಧಿಸಲಾರದು.

ಟ್ರಂಪ್ ತಮ್ಮ ಭಾಷಣದಲ್ಲಿ, ‘ಶಾಂತಿ ಸ್ಥಾಪನೆ ಮತ್ತು ಏಕೀಕರಣದ ರೂವಾರಿಯಾಗಿ ನನ್ನನ್ನು ಗುರುತಿಸಬೇಕು. ಆ ದಿಸೆಯಲ್ಲಿ ಕೆಲಸ ಮಾಡುತ್ತೇನೆ’ ಎಂದಿದ್ದಾರೆ. ಈ ಮಾತು ಮುಂದಿನ ನಾಲ್ಕು ವರ್ಷಗಳಲ್ಲಿ ಜಾಗತಿಕವಾಗಿ ಅವರು ಏನನ್ನು ಸಾಧಿಸಬಯಸಿದ್ದಾರೆ ಎಂಬುದನ್ನು ಸೂಚ್ಯವಾಗಿ ಹೇಳುತ್ತಿದೆ. ಹಿಂದಿನ ಅವಧಿಯಲ್ಲಿ ಟ್ರಂಪ್ ಅವರ ವಿದೇಶಾಂಗ ನೀತಿಯು ಮಧ್ಯಪ್ರಾಚ್ಯವನ್ನು ಕೇಂದ್ರೀಕರಿಸಿಕೊಂಡಿತ್ತು. ಇಸ್ರೇಲ್ ಮತ್ತು ಅರಬ್ ರಾಷ್ಟ್ರಗಳನ್ನು ಬೆಸೆಯುವ ಪ್ರಯತ್ನಗಳು ನಡೆದಿದ್ದವು. ಈ ಬಾರಿ ಟ್ರಂಪ್ ಅಧ್ಯಕ್ಷರಾಗಿ ಪ್ರಮಾಣವಚನ ಸ್ವೀಕರಿಸುವ ಹೊತ್ತಿಗೆ ಇಸ್ರೇಲ್ ಮತ್ತು ಹಮಾಸ್ ನಡುವೆ ಕದನವಿರಾಮ ಏರ್ಪಟ್ಟಿತು. ಈ ವಿಷಯವನ್ನು ಟ್ರಂಪ್ ಅವರು ಪ್ರಸ್ತಾಪಿಸಿದಾಗ ಸ್ವತಃ ಬೈಡನ್ ಮತ್ತು ಕಮಲಾ ಹ್ಯಾರಿಸ್ ಎದ್ದುನಿಂತು ಕರತಾಡನ ಮಾಡಿದ್ದು ಟ್ರಂಪ್ ಅವರ ತಂಡದ ಶ್ರಮವನ್ನು ಅನುಮೋದಿಸುವಂತಿತ್ತು.

ಟ್ರಂಪ್ ಅವರು ಮಧ್ಯಪ್ರಾಚ್ಯದ ವಿಷಯದಲ್ಲಿ ತಾವು ಅಂದುಕೊಂಡಿದ್ದನ್ನು ಸಾಧಿಸಬೇಕಾದರೆ ಬಹುದೂರ ಸಾಗಬೇಕು. ಇಸ್ರೇಲ್ ಮತ್ತು ಪ್ಯಾಲೆಸ್ಟೀನಿಯನ್ನರ ನಡುವೆ ಶಾಂತಿ ಸ್ಥಾಪನೆ ಸಾಧ್ಯವಾಗಬೇಕು. ಲೆಬನಾನ್ ಮತ್ತು ಸಿರಿಯಾವನ್ನು ಹೊಸ ದಿಕ್ಕಿನತ್ತ ಕೊಂಡೊಯ್ಯಬೇಕು. ಇರಾನ್ ಪರಮಾಣು ಬಾಂಬ್ ಹೊಂದುವ ಮೊದಲು ಅದನ್ನು ಒಪ್ಪಂದದ ಪರಿಧಿಯೊಳಗೆ ತರಬೇಕು.

ನಿಜ, ಮಧ್ಯಪ್ರಾಚ್ಯಕ್ಕೆ ಹೊಸ ರೂಪ ನೀಡಲು ಪರಿಸ್ಥಿತಿಯೂ ಪೂರಕವಾಗಿದೆ. ಲೆಬನಾನ್ ಮೇಲೆ ಹಿಡಿತ ಸಾಧಿಸಿದ್ದ ಹಿಜ್ಬುಲ್ಲಾ ತನ್ನ ಅಗ್ರನಾಯಕನನ್ನು ಕಳೆದುಕೊಂಡಿದೆ. ಅಪಾರ ಜನಮನ್ನಣೆಯೊಂದಿಗೆ ಜೋಸೆಫ್ ಔನ್ ನೂತನ ಅಧ್ಯಕ್ಷರಾಗಿ ಪದಗ್ರಹಣ ಮಾಡಿದ್ದಾರೆ. ಅಮೆರಿಕ ಮನಸ್ಸು ಮಾಡಿದರೆ ವಿಶ್ವಸಂಸ್ಥೆ ಗುರುತಿಸಿರುವ ಇಸ್ರೇಲ್ - ಲೆಬನಾನ್ ಗಡಿಯನ್ನು ಉಭಯ ದೇಶಗಳೂ ಒಪ್ಪಿಕೊಳ್ಳುವಂತೆ ಮಾಡಬಹುದು. ಅತ್ತ ಸಿರಿಯಾದಲ್ಲಿ 2011ರಿಂದ ನಡೆಯುತ್ತಿದ್ದ ಅಂತರ್ಯುದ್ಧ ನಿರ್ಣಾಯಕ ಹಂತಕ್ಕೆ ಬಂದು, ಬಷರ್ ಅಲ್ ಅಸಾದ್ ಆಡಳಿತ ಕೊನೆಗೊಂಡಿದೆ. ನೂತನ ಆಡಳಿತವನ್ನು ಸರಿಯಾದ ದಿಕ್ಕಿನಲ್ಲಿ ನಡೆಸುವ ಕೆಲಸ ಆಗಬೇಕಿದೆ.

ಆದರೆ ಇರಾನ್ ದೇಶವನ್ನು ಸಂಭಾಳಿಸುವುದು ಕೊಂಚ ಕಷ್ಟದ ಕೆಲಸ. ಏಕೆಂದರೆ ಚೀನಾ ಮತ್ತು ರಷ್ಯಾ ಮಧ್ಯಪ್ರಾಚ್ಯದಲ್ಲಿ ತಮ್ಮ ಪ್ರಭಾವ ಉಳಿಸಿಕೊಳ್ಳಲು ಆ ದೇಶವನ್ನು ದಾಳವಾಗಿ ಬಳಸಿಕೊಳ್ಳುತ್ತಿವೆ. ಡೊನಾಲ್ಡ್ ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾಗಿ ಪ್ರಮಾಣವಚನ ಸ್ವೀಕರಿಸುವ ಕೆಲವು ದಿನಗಳ ಮುನ್ನ ರಷ್ಯಾ ಮತ್ತು ಇರಾನ್ ಸಮಗ್ರ ಕಾರ್ಯತಂತ್ರ ಪಾಲುದಾರಿಕೆ ಒಪ್ಪಂದಕ್ಕೆ ಸಹಿ ಹಾಕಿದವು. ಈ ಹಿಂದೆ, 2023ರ ಮಾರ್ಚ್ 10ರಂದು ಚೀನಾ ಮಧ್ಯಸ್ಥಿಕೆಯಲ್ಲಿ ಬೀಜಿಂಗ್‌ನಲ್ಲಿ ಸೌದಿ ಮತ್ತು ಇರಾನ್ ನಡುವೆ ಒಪ್ಪಂದ ಏರ್ಪಟ್ಟಿತ್ತು. ಆ ಕಾರಣದಿಂದಲೇ 2024ರ ನವೆಂಬರ್‌ನಲ್ಲಿ ರಿಯಾದ್‌ನಲ್ಲಿ ನಡೆದ ಅರಬ್ ಇಸ್ಲಾಮಿಕ್ ಶೃಂಗಸಭೆಯಲ್ಲಿ ಸೌದಿಯ ಯುವರಾಜ, ಇರಾನ್ ಮೇಲೆ ದಾಳಿ ಮಾಡದಂತೆ ಇಸ್ರೇಲಿಗೆ ಎಚ್ಚರಿಕೆ ನೀಡಿದ್ದರು. ಹಾಗಾಗಿ, ಇಸ್ರೇಲ್ ಮತ್ತು ಸೌದಿ ಅರೇಬಿಯಾವನ್ನು ಅಮೆರಿಕ ಜೊತೆಯಾಗಿ ಕರೆದೊಯ್ಯಬೇಕಾದರೆ, ದ್ವಿರಾಷ್ಟ್ರ ಪ್ರತಿಪಾದನೆಗೆ ಇಸ್ರೇಲ್ ಅನ್ನು ಒಪ್ಪಿಸಬೇಕಾಗುತ್ತದೆ. ಅದನ್ನು ಟ್ರಂಪ್ ಹೇಗೆ ನಿರ್ವಹಿಸುತ್ತಾರೆ ನೋಡಬೇಕು.

ಉಳಿದಂತೆ ವಿದೇಶಿ ವಸ್ತುಗಳಿಗೆ ಹೆಚ್ಚಿನ ತೆರಿಗೆ ವಿಧಿಸುವ ಕ್ರಮ ಅನಿರೀಕ್ಷಿತವಲ್ಲ. ವಿಶ್ವ ಆರೋಗ್ಯ ಸಂಸ್ಥೆಯಿಂದ ಹೊರಹೋಗುವ ನಿರ್ಧಾರ ಹಿರಿಯಣ್ಣನಿಗೆ ಭೂಷಣವಲ್ಲ. ಈ ಕುರಿತ ತಮ್ಮ ನಿಲುವನ್ನು ಟ್ರಂಪ್ ಬದಲಿಸಿಕೊಂಡರೆ ಅಚ್ಚರಿಯಿಲ್ಲ. ಬ್ರಿಕ್ಸ್ ಒಕ್ಕೂಟದ ಭಾಗವಾಗಿರುವ ಭಾರತದ ಉತ್ಪನ್ನಗಳಿಗೆ ಸುಂಕ ಹೆಚ್ಚಿಸುವ ಮಾತನಾಡುವ ಟ್ರಂಪ್, ಮರುಕ್ಷಣದಲ್ಲೇ ಭಾರತದೊಂದಿಗೆ ಉತ್ತಮ ಸಂಬಂಧ ಹೊಂದಿದ್ದೇವೆ, ಪ್ರಧಾನಿ ಮೋದಿ ಅವರು ಫೆಬ್ರುವರಿಯಲ್ಲಿ ಅಮೆರಿಕಕ್ಕೆ ಭೇಟಿ ನೀಡುತ್ತಾರೆ ಎಂದಿದ್ದಾರೆ. ಇಂತಹ ಟ್ರಂಪ್ ಅವರೊಂದಿಗೆ ಭಾರತ ಹೇಗೆ ನಾಜೂಕಿನಿಂದ ವ್ಯವಹರಿಸಲಿದೆ ಎನ್ನುವುದೂ ಮುಂದಿನ ದಿನಗಳನ್ನು ಕುತೂಹಲಕಾರಿಯಾಗಿಸುತ್ತದೆ.

ಕೊನೆಯದಾಗಿ, ಟ್ರಂಪ್ ಅವರು ತಮ್ಮ ಮೇಲಾದ ಹತ್ಯೆಯ ಪ್ರಯತ್ನವನ್ನು ಉಲ್ಲೇಖಿಸಿ, ‘ಅಮೆರಿಕವನ್ನು ಉನ್ನತ ಸ್ಥಾನಕ್ಕೆ ಏರಿಸುವ ಸಲುವಾಗಿ ದೇವರು ನನ್ನನ್ನು ಉಳಿಸಿದ್ದಾನೆ’ ಎಂಬ ಮಾತನ್ನು ಆಡಿದ್ದಾರೆ. ವಯಸ್ಸಿನ ದೃಷ್ಟಿಯಿಂದಲೂ ಅಧ್ಯಕ್ಷ ಅವಧಿಯ ಮಿತಿಯ ಕಾರಣಕ್ಕೂ ಇದು ಟ್ರಂಪ್ ಅವರಿಗೆ ಸಿಕ್ಕಿರುವ ಕೊನೆಯ ಅವಕಾಶ. ಅಮೆರಿಕದ ಅಧ್ಯಕ್ಷರ ಸಾಲಿನಲ್ಲಿ ಸಾಧಕನಾಗಿ ನಿಲ್ಲಬೇಕು, ನೊಬೆಲ್ ಶಾಂತಿ ಪುರಸ್ಕಾರಕ್ಕೂ ಭಾಜನನಾಗಬೇಕು ಎಂಬ ಆಸೆ ಟ್ರಂಪ್ ಅವರಿಗೆ ಇದ್ದಂತಿದೆ. ‘ಮೇಕ್ ಅಮೆರಿಕ ಗ್ರೇಟ್ ಅಗೇನ್’ ಎನ್ನುತ್ತಾ ಚುನಾವಣೆ ಗೆದ್ದ ಟ್ರಂಪ್, ಅಮೆರಿಕವನ್ನು ಮಹಾನ್ ರಾಷ್ಟ್ರವಾಗಿಸುವ ಉಮೇದಿನಲ್ಲಿ ಅವಸರದ ಹೆಜ್ಜೆಯಿರಿಸುತ್ತಿದ್ದಾರೆ. ಅವಸರದ ಹೆಜ್ಜೆ ಕೆಲವೊಮ್ಮೆ ಮುಗ್ಗರಿಸುವಂತೆ ಮಾಡುತ್ತದೆ.

ಚುರುಮುರಿ

ಬಂಪರ್ ಯಾರಿಗೆ?

● ಸುಮಂಗಲಾ

ಬೆಕ್ಕಣ್ಣ ಶನಿವಾರ ಬೆಳಗಿನಿಂದಲೇ ಟಿ.ವಿಯ ಮುಂದೆ ಪವಡಿಸಿತ್ತು.

‘ಹೋದ ವಾರ ವಿತ್ತ ಸಚಿವಾಲಯದಲ್ಲಿ ಹಲ್ವಾ ಕಾರ್ಯಕ್ರಮ ನಡೆದಾಗಲೇ ಅಂದ್ಕಂಡಿದ್ದೆ, ಈ ಸಲ ನಿರ್ಮಲಕ್ಕ ಖರೇಖರೇ ಸಿಹಿ ಸುದ್ದಿ ಕೊಡ್ತಾಳ ಅಂತ’ ಎಂದು ಅಗದಿ ಹೆಮ್ಮೆಯಿಂದ ಉಲಿಯಿತು.

‘ಹಲ್ವಾ ಕಾರ್ಯಕ್ರಮ ಪ್ರತಿವರ್ಷ ಮಾಡ್ತಾರಲೇ. ಪ್ರತಿವರ್ಷನೂ ಹಲ್ವಾ ಸಿಹಿ ಇರತೈತಿ. ಹಂಗಂತೇಳಿ ಬಜೆಟ್ ಸಿಹಿ ಇರತೈತೇನು?’ ನನ್ನ ಪ್ರಶ್ನೆ.

‘ಆದ್ರೆ ಈ ವರ್ಷ ಹಲ್ವಾನೂ ಸಿಹಿ, ಬಜೆಟ್ಟೂ ಸಿಹಿ’ ಬೆಕ್ಕಣ್ಣ ಹಲ್ವಾ ತಿಂದಂತೆ ಬಾಯಿ ಚಪ್ಪರಿಸಿತು.

‘ಯಾರಿಗೆ ಸಿಹಿ? ಬಜೆಟ್ಟಿನಲ್ಲಿ ಬಿ ಫಾರ್ ಬಿಹಾರ್ ಅನ್ನೋ ಹಂಗೆ ಬಿಹಾರಕ್ಕೆ ಸಿಂಹಪಾಲು ಕೊಟ್ಟಾರೆ. ಕರ್ನಾಟಕಕ್ಕೆ ಭಯಂಕರ ಕಡಿಮೆ’ ನಾನು ದೂರಿದೆ.

‘ಬಿಹಾರ ಅಂದ್ರೆ ನಮ್ಮ ಬ್ರದರ್! ಹಿಂದುಳಿದ ರಾಜ್ಯಕ್ಕೆ ಸ್ವಲ್ಪ ವಿಶೇಷ ಗಮನ ಕೊಟ್ಟರೇನು ತಪ್ಪು?’ ಬೆಕ್ಕಣ್ಣ ಸಮರ್ಥಿಸಿತು.

‘ಚುನಾವಣೆ ಮುಂದೈತಿ, ಅದಕ್ಕೇ ಈ ಎಲ್ಲಾ ಗಿಮಿಕ್. ಒಟ್ಟಾರೆ ನೋಡಿದರೆ ಗ್ರಾಮೀಣಾಭಿವೃದ್ಧಿ, ಆರೋಗ್ಯ, ಶಿಕ್ಷಣ ಇಂಥವಕ್ಕೆ ಹಂಚಿಕೆ ಕಡಿಮೆಯಾಗೈತಿ’ ಎಂದೆ.

‘ಅದೆಲ್ಲ ಬಿಡು... ನಿರ್ಮಲಕ್ಕ ಮಧ್ಯಮ ವರ್ಗಕ್ಕೆ ಬಂಪರ್ ಬಹುಮಾನ ಕೊಟ್ಟಾಳೆ! 12 ಲಕ್ಷದವರೆಗೆ ಆದಾಯವಿದ್ದೋರಿಗೆ ತೆರಿಗೇನೆ ಇಲ್ಲ. ಮಧ್ಯಮ ವರ್ಗದವರ ಕೈಯಲ್ಲಿ ಝಣಝಣ ಕಾಂಚಾಣ. ಮೋದಿಮಾಮಾನ ಹೃದಯದೊಳಗೆ ಮಧ್ಯಮ ವರ್ಗದವರೇ ಇದ್ದಾರಂತ ಶಾ ಅಂಕಲ್ಲು ಹೇಳ್ಯಾರೆ’ ಬೆಕ್ಕಣ್ಣ ಉದ್ಗರಿಸಿತು.

‘ಹೌದೌದು. ಹೃದಯದೊಳು ಮಧ್ಯಮ ವರ್ಗ, ತಲೆಯೊಳಗೆ ಸಿರಿವಂತ ಉದ್ಯಮಿಗಳು, ಕಾರ್ಪೊರೇಟ್ ವಲಯ’ ಎಂದು ನಾನು ವಾದಿಸಿದೆ.

‘ಡಿವಿಜಿಯವರು ಹೇಳಿದಂಗೆ, ಇರುವ ಭಾಗ್ಯವ ನೆನೆದು ಬಾರೆನೆಂಬುದನು ಬಿಡು. ತೆರಿಗೆ ಸ್ಲ್ಯಾಬ್ ಕೂಡ ಕಡಿಮೆ ಮಾಡ್ಯಾರೆ. ಇನ್ನಾ ಏನು ಬೇಕು ಮಧ್ಯಮ ವರ್ಗದವರಿಗೆ? ಆದರೆ ನೀ ತೆರಿಗೇಲಿ ಉಳಿಸಿದ ರೊಕ್ಕ ನನಗೇ ಕೊಡಬೇಕು ನೋಡಾ’ ಎಂದು ಬೆಕ್ಕಣ್ಣ ಕರಾರು ಹಾಕಿತು!

ಸಂಗತ

ಶುದ್ಧ ಜಲ ಮರೀಚಿಕೆಯಾಗದಿರಲಿ

ಶುದ್ಧ ಕುಡಿಯುವ ನೀರಿನ ಪೂರೈಕೆ ವಿಚಾರವಾಗಿ ಸರ್ಕಾರ ಮತ್ತು ಸ್ಥಳೀಯ ಆಡಳಿತಗಳು ಪ್ರಾಮಾಣಿಕ ಹಾಗೂ ಪಾರದರ್ಶಕ ನೀತಿಯನ್ನು ಅನುಸರಿಸಬೇಕಾಗಿದೆ

● ಪ. ರಾಮಕೃಷ್ಣ ಶಾಸ್ತ್ರಿ

ಶುದ್ಧ ಗಾಳಿ, ಶುದ್ಧ ನೀರು ಇವೆರಡೂ ಆರೋಗ್ಯಕರ ಬದುಕಿಗೆ ಬಹಳ ಅಗತ್ಯ. ಆದರೆ ಶುದ್ಧ ಗಾಳಿಯ ಕಲ್ಪನೆ ಅದೆಂದೋ ಮಾಯವಾಗಿದೆ. ಉಸಿರಾಡುವ ಗಾಳಿ ನಿಧಾನವಿಷವಾಗಿ ಪರಿಣಮಿಸಿದೆ. ಇದರ ಜೊತೆಗೆ ಗ್ರಾಮೀಣ ಮತ್ತು ಪಟ್ಟಣದ ನಿವಾಸಿಗಳಿಗೆ ಪೂರೈಕೆಯಾಗುತ್ತಿರುವ ಕುಡಿಯುವ ನೀರು ಎಷ್ಟರಮಟ್ಟಿಗೆ ಶುದ್ಧವಾಗಿದೆ ಎಂಬ ಪ್ರಶ್ನೆ ಕಾಡುತ್ತಲೇ ಇದೆ.

ಬಹುಪಾಲು ಮಂದಿ ಈಗ ಸ್ಥಳೀಯ ಆಡಳಿತಗಳು ಪೂರೈಸುವ ನೀರನ್ನೇ ಅವಲಂಬಿಸಿದ್ದಾರೆ. ಅಧಿಕಾರಿಶಾಹಿಯು ಇದನ್ನೊಂದು ಗುರುತರ ಜವಾಬ್ದಾರಿಯಾಗಿ ಭಾವಿಸಿ, ಸಮರ್ಪಕವಾಗಿ ನಿರ್ವಹಿಸಿದ್ದಿದ್ದರೆ ಜೀವಜಲ ಇಂದು ಕೆಲವೆಡೆ ಕಂಟಕವಾಗಿ ಪರಿಣಮಿಸುತ್ತಿರಲಿಲ್ಲ. ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಕುಡಿಯುವ ನೀರು ನಂಜಾಗಿ ಪರಿಣಮಿಸಿದ ಸುದ್ದಿಗಳು ಆಗಿಂದಾಗ್ಗೆ ಪ್ರಕಟವಾಗುತ್ತಲೇ ಇವೆ. ಆದರೂ ಕುಡಿಯುವ ನೀರು ಕಲುಷಿತ ಆಗದಂತೆ ನೋಡಿಕೊಳ್ಳುವ ದಿಸೆಯಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ಸರ್ಕಾರವಾಗಲಿ, ಆಯಾ ಪ್ರದೇಶದ ಆಡಳಿತದ ಹೊಣೆ ಹೊತ್ತ ಗ್ರಾಮ ಪಂಚಾಯಿತಿಗಳಾಗಲಿ ಕೈಗೊಂಡಂತೆ ಕಾಣುವುದಿಲ್ಲ.

ಗ್ರಾಮೀಣ ಪ್ರದೇಶಗಳಲ್ಲಿ ನೀರು ಪೂರೈಕೆಗಾಗಿ ಯಾವುದೋ ಕಾಲದಲ್ಲಿ ಹಾಕಿದ ಪೈಪುಗಳಿವೆ. ಇವನ್ನು ತೆಗೆದು ನೋಡಿದರೆ ಒಳಗೆ ಒಂದಿಂಚು ದಪ್ಪ ಮಣ್ಣು, ಪಾಚಿಯಂತಹ ಕಲ್ಮಶಗಳು ಅಂಟಿಕೊಂಡಿರುತ್ತವೆ. ಕೊಳವೆ ಬಾವಿಗಳಿಂದ ನೀರೆಳೆಯುವ ಕಬ್ಬಿಣದ ಪೈಪುಗಳನ್ನು ಬದಲಾಯಿಸಿ ಪಿವಿಸಿ ಪೈಪುಗಳನ್ನು ಜೋಡಿಸಬಹುದಿತ್ತು. ಕಬ್ಬಿಣದ ಪೈಪುಗಳಲ್ಲಿ ಅವ್ಯಾಹತವಾಗಿ ಬರುವ ತುಕ್ಕು, ನೀರಿನ ದುರ್ವಾಸನೆಗೆ ಕಾರಣವಷ್ಟೇ ಅಲ್ಲ, ಅದನ್ನು ಕುಡಿದವರ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತದೆ. ನೀರು ಸರಬರಾಜಿನ ಪೈಪುಗಳು ಅಲ್ಲಲ್ಲಿ ಒಡೆದು ಜೀವಜಲ ಸೋರಿ ನೆಲದಲ್ಲಿ ಇಂಗಿ ಹೋಗುತ್ತಿದೆ.

ಕೇಂದ್ರ ಸರ್ಕಾರದ ಜಲಜೀವನ ಮಿಷನ್ ಮೂಲಕ ನೀರು ಪೂರೈಕೆ ಮಾಡುವ ಜಾಹೀರಾತು ಮಾತ್ರ ಭರ್ಜರಿಯಾಗಿದೆ. ಹಲವು ಕಡೆ ಅದೊಂದು ಸಫಲ ಯೋಜನೆಯಾಗಿಲ್ಲ. ಸದ್ಯ ಗ್ರಾಮ ಪಂಚಾಯಿತಿಗಳಿಂದ ಪೂರೈಕೆಯಾಗುವ ನೀರನ್ನೇ ಈ ಹೊಸ ಪೈಪುಗಳಲ್ಲಿ ಹರಿಸಿ ಯೋಜನೆಯನ್ನು ಗುರಿ ಮುಟ್ಟಿಸಿರುವುದು ಕಂಡುಬರುತ್ತಿದೆ. ಇನ್ನು ಹರಿಯುವ ಹಳ್ಳ, ನದಿಯಂತಹ ನೀರಿನಾಸರೆಗಳಿಂದ ಪಟ್ಟಣಗಳಲ್ಲಿ ನೀರು ಶುದ್ಧೀಕರಿಸುವ ಘಟಕಗಳನ್ನು ಸ್ಥಾಪಿಸಲಾಗಿದೆ. ಬೇಸಿಗೆ ಮಧ್ಯಮಾವಧಿ ತಲುಪಿದಾಗ ಇಂತಹ ಘಟಕಗಳ ಬಳಿಗೆ ಭೇಟಿ ನೀಡಿದವರಿಗೆ ನೀರು ಕುಡಿಯುವುದೇ ಬೇಡ ಎನಿಸಬಹುದು. ಹರಿದುಬರುವ ನೀರಿನಿಂದ ಪ್ರತ್ಯೇಕಿಸಿದ ಗೋಣಿಚೀಲಗಳು, ಪ್ಲಾಸ್ಟಿಕ್ ವಸ್ತುಗಳು, ಬಟ್ಟೆಗಳು ಅಲ್ಲಿ ರಾಶಿ ಬೀಳುವ ದೃಶ್ಯವಂತೂ ಹೊಟ್ಟೆ ತೊಳಸುವಂತೆ ಇರುತ್ತದೆ. ಎಷ್ಟೇ ಶುದ್ಧೀಕರಿಸಿದ್ದೇವೆ ಎಂದು ಹೇಳಿದರೂ ಇಂತಹ ನೀರನ್ನು ಕುಡಿಯುವಾಗ ಯೋಚಿಸಲೇಬೇಕಾಗುತ್ತದೆ.

ಸರ್ಕಾರ ಮತ್ತು ಸ್ಥಳೀಯ ಆಡಳಿತಗಳು ಶುದ್ಧ ಕುಡಿಯುವ ನೀರಿನ ಪೂರೈಕೆ ವಿಚಾರವಾಗಿ ಪ್ರಾಮಾಣಿಕ ಹಾಗೂ ಪಾರದರ್ಶಕ ನೀತಿಯನ್ನು ಹೊಂದಿದಂತೆ ಭಾಸವಾಗುವುದಿಲ್ಲ. ಪ್ರತಿವರ್ಷದ ಬಜೆಟ್‌ನಲ್ಲಿ ಇದಕ್ಕಾಗಿ ಗಮನಾರ್ಹ ಮೊತ್ತವನ್ನು ತೆಗೆದಿರಿಸಿ ಜನರ ಪ್ರಾಣ ರಕ್ಷಿಸುವ ನೀರನ್ನು ಅತ್ಯಂತ ಪರಿಶುದ್ಧವಾಗಿ ಒದಗಿಸಲು ಕಾಳಜಿ ವಹಿಸಿದಂತಿಲ್ಲ. ಕ್ಷಮಾರ್ಹವಲ್ಲದ ಅಲಕ್ಷ್ಯವೇ ಕುಡಿಯುವ ನೀರು ನಂಜಾಗಲು ಕಾರಣವಾಗುತ್ತಿದೆ. ನೀರು ಸಂಗ್ರಹಿಸುವ ತೊಟ್ಟಿಗಳನ್ನು ನಿಗದಿತ ಸಮಯದೊಳಗೆ ಶುಚಿಗೊಳಿಸದ ಗ್ರಾಮ ಪಂಚಾಯಿತಿಗಳೂ ಇವೆ.

ಇದರೊಂದಿಗೆ ಹನಿ ಹನಿ ನೀರು ಕೂಡ ಚಿನ್ನಕ್ಕಿಂತ ಬೆಲೆ ಬಾಳುವುದು ಎಂಬ ಸತ್ಯವನ್ನು ಸಾರ್ವಜನಿಕರೂ ಮರೆಯುವುದುಂಟು. ನಲ್ಲಿಯಲ್ಲಿ ಸೋರಿ ಹೋಗುತ್ತಿರುವ ದೃಶ್ಯವನ್ನು ಕಂಡರೂ ‘ನನ್ನ ಮನೆಯದ್ದಲ್ಲ’ ಎಂಬ ನಿರಾಳ ಭಾವದಲ್ಲಿ ಮುಂದುವರಿಯುವವರಿದ್ದಾರೆ. ಬರುವ ನೀರನ್ನು ಆರಂಭದಲ್ಲಿ ತಮ್ಮ ಮನೆಯ ಅಗತ್ಯಗಳಿಗೆ ಭರ್ತಿ ಮಾಡಿಕೊಂಡು, ಸಾಲಿನ ಕೊನೆಯಲ್ಲಿ ಇರುವವರಿಗೆ ತೊಟ್ಟು ನೀರೂ ಸಿಗದೆ ಹೋದಾಗಲೂ ಸಂತಾಪ ಪಡದವರಿದ್ದಾರೆ. ಕುಡಿಯುವ ನೀರನ್ನು ಅನ್ಯ ಉದ್ದೇಶಗಳಿಗೆ ಬಳಸುವುದಿಲ್ಲ ಎಂಬ ಕರಾರಿಗೆ ಸಹಿ ಮಾಡಿದ್ದರೂ ತೆಂಗು, ಮಲ್ಲಿಗೆ, ತರಕಾರಿ ಗಿಡಗಳ ಬುಡ ನೆನೆಸಿಕೊಳ್ಳುವವರಿಗೂ ಬರವಿಲ್ಲ.

ನೀರನ್ನು ಪೋಲು ಮಾಡುವ ಮೊದಲು, ಹನಿ ನೀರಿಗಾಗಿ ಪರಿತಪಿಸುವ ದೇಶಗಳ ಗ್ರಾಮೀಣ ಜನರನ್ನು ನೆನಪಿಸಿಕೊಳ್ಳಬೇಕು. ನಮ್ಮಲ್ಲಿಯೂ ಹರದಾರಿ ದೂರದಿಂದ ಕೊಡ ತುಂಬಿಕೊಂಡು ಬರುವ ಸಂಕಷ್ಟ ಈಗಲೂ ಕೆಲವೆಡೆ ಇದೆ. ಶುದ್ಧ ನೀರಿನ ಸರಬರಾಜು ಹೇಗೆ ಆಡಳಿತದ ಹೊಣೆಗಾರಿಕೆಯೋ ಪ್ರತಿ ಹನಿ ನೀರನ್ನೂ ದುರ್ಬಳಕೆ ಮಾಡದ ಜಾಗೃತಿ ಬಳಕೆದಾರರಲ್ಲೂ ಇರಬೇಕಾಗಿದೆ. ಅನೇಕ ಗ್ರಾಮ ಪಂಚಾಯಿತಿಗಳು ಬರುವ ಅನುದಾನವನ್ನು ಗ್ರಾಮೀಣ ಜನರ ಕುಡಿಯುವ ನೀರು ಪೂರೈಕೆಯ ವಿದ್ಯುತ್ ವೆಚ್ಚಕ್ಕೆ ಬಳಸಿ, ಅಭಿವೃದ್ಧಿಗೆ ಬಿಡಿಗಾಸನ್ನೂ ಬಳಸದಿರುವ ಲೋಪ ಎದ್ದು ಕಾಣುತ್ತಿದೆ.

ಮಳೆಗಾಲದಲ್ಲಿ ಚಾವಣಿಯಿಂದ ಬೀಳುವ ನೀರನ್ನು ಸಂಗ್ರಹಿಸಿ, ಶುದ್ಧೀಕರಿಸಿ ಬಳಸುವುದು, ಜಲಮೂಲಗಳಿಗೆ ಸೇರಿಸುವಂತಹ ಜಲ ಸಂರಕ್ಷಣೆಯ ತಂತ್ರಗಳನ್ನು ಅಳವಡಿಸಿಕೊಳ್ಳುವಲ್ಲಿ ಸಾರ್ವಜನಿಕರನ್ನು ತೊಡಗಿಸುವ ಕೆಲಸಗಳನ್ನು ಸ್ಥಳೀಯ ಆಡಳಿತದವರು ಮಾಡಬೇಕು. ಈ ಮೂಲಕ ತಮ್ಮ ನೀರನ್ನು ತಾವೇ ಪಡೆಯಲು ಪ್ರೇರಕರಾಗಬೇಕಾದ ಅಗತ್ಯ ಇದೆ. ಬೇಸಿಗೆಯ ನೀರಿನ ಹಾಹಾಕಾರ ಶಮನಕ್ಕೂ ಇದು ನೆರವಾದೀತು.

ವಾಚಕರ ವಾಣಿ

ವಿತರಿಸಬೇಕಿದೆ ಆರ್‌ಎಫ್‌ಐಡಿ ಕಾರ್ಡ್

ಮಹಾಕುಂಭಮೇಳದಲ್ಲಿ ಇತ್ತೀಚೆಗೆ ಕಾಲ್ತುಳಿತ ಸಂಭವಿಸಿದಾಗ, ಆ ಸಂದರ್ಭದಲ್ಲಿ ಕಾಣೆಯಾದವರಿಗಾಗಿ ಮರುದಿನವೂ ಹುಡುಕಾಟ ಮುಂದುವರಿದಿದ್ದು ಖೇದಕರ. ಭಾರಿ ಸಂಖ್ಯೆಯಲ್ಲಿ ಜನ ಸೇರುವ ಇಂತಹ ಕಾರ್ಯಕ್ರಮಗಳಿಗೆ ಬರುವವರ ಹೆಸರನ್ನು ಮೊದಲೇ ಆನ್‌ಲೈನ್ ಮುಖಾಂತರ ನೋಂದಣಿ ಮಾಡಿಕೊಳ್ಳಬೇಕು. ಪ್ರತಿ ನೋಂದಣಿದಾರರಿಗೆ ಆರ್‌ಎಫ್‌ಐಡಿ (ರೇಡಿಯೊ ಫ್ರೀಕ್ವೆನ್ಸಿ ಐಡೆಂಟಿಫಿಕೇಷನ್) ಕಾರ್ಡ್ ವಿತರಣೆ ಮಾಡುವ ವ್ಯವಸ್ಥೆ ಮಾಡಬೇಕು. ಆಗ ಕಾಣೆಯಾದವರನ್ನು ಅತಿ ಸುಲಭವಾಗಿ ಹುಡುಕಲು ಸಾಧ್ಯವಾಗುತ್ತದೆ. ಈ ಮಾದರಿಯನ್ನು ಈಗಾಗಲೇ ಅಮರನಾಥ ಯಾತ್ರೆ ಮತ್ತು ವೈಷ್ಣೋದೇವಿ ಯಾತ್ರೆಗಳಲ್ಲಿ ಜಾರಿಗೆ ತರಲಾಗಿದೆ.

ಮೃತ್ಯುಂಜಯ ಕೋಡಿಹಳ್ಳಿ, ಶಿಗ್ಗಾವಿ

ಸಮ್ಮೇಳನ ಅಧ್ಯಕ್ಷತೆ: ಅರ್ಹರ ಆಯ್ಕೆ ಸೂಕ್ತ

ಮುದ್ದೇಬಿಹಾಳದಲ್ಲಿ ನಡೆಯಲಿರುವ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಗೆ ಅರ್ಜಿ ಆಹ್ವಾನಿಸಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಮುದ್ದೇಬಿಹಾಳ ತಾಲ್ಲೂಕು ಘಟಕದ ನಡೆ (ಪ್ರ.ವಾ., ಫೆ. 2) ಹಾಸ್ಯಾಸ್ಪದವಾಗಿದೆ. ಸಾಮಾನ್ಯವಾಗಿ ಸಾಹಿತ್ಯ ಸಮ್ಮೇಳನಗಳಲ್ಲಿ ಸರ್ವಾಧ್ಯಕ್ಷರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ, ಸಾಹಿತ್ಯ ಕ್ಷೇತ್ರದಲ್ಲಿ ನುರಿತ ವ್ಯಕ್ತಿಗಳನ್ನೊಳಗೊಂಡ ಒಂದು ಸಮಿತಿ ರಚಿಸಲಾಗುತ್ತದೆ. ಆ ಸಮಿತಿಯ ಸದಸ್ಯರು ಆ ವ್ಯಾಪ್ತಿಯಲ್ಲಿ ಬರುವ, ಆ ಸ್ಥಾನಕ್ಕೆ ಅರ್ಹರಾದವರ ಹೆಸರು ಹಾಗೂ ಅವರ ಬಗೆಗಿನ ವಿವರವನ್ನು ಕಲೆಹಾಕಿ, ಅವುಗಳ ಪೈಕಿ ಅತ್ಯಂತ ಸಮಂಜಸ ಎನಿಸುವ ಒಬ್ಬರ ಹೆಸರನ್ನು ಸರ್ವಾನುಮತದಿಂದ ಆಯ್ಕೆ ಮಾಡುವುದು ನಡೆದುಬಂದಿದೆ.

ಸಮ್ಮೇಳನದ ಸರ್ವಾಧ್ಯಕ್ಷತೆಗೆ ಅರ್ಜಿ ಕರೆದು ಆಯ್ಕೆ ಮಾಡುವ ಕ್ರಮ ಅನುಸರಿಸಿದರೆ, ಆ ಆಯ್ಕೆಯಲ್ಲಿ ಅರ್ಹರಲ್ಲದವರು ತೂರಿ ಬರುವ ಸಾಧ್ಯತೆಯೇ ಹೆಚ್ಚು. ಹಾಗಾಗಿ, ಕಸಾಪ ಮುದ್ದೇಬಿಹಾಳ ತಾಲ್ಲೂಕು ಘಟಕದವರು ಅರ್ಜಿ ಕರೆಯುವ ಕ್ರಮ ಬಿಟ್ಟು, ಅಧ್ಯಕ್ಷರ ಆಯ್ಕೆ ಸಲುವಾಗಿ ಒಂದು ಸಮಿತಿ ರಚಿಸಬೇಕು. ಅರ್ಹರನ್ನು ಹೆಕ್ಕಿ ತೆಗೆದು ಆ ಸ್ಥಾನದ ಘನತೆಗೆ ಕುಂದು ಬರದಂತೆ ನಿಗಾ ವಹಿಸಬೇಕು.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

ನೌಕರಿ ಖರೀದಿ ಪರಿಪಾಟ ಕೊನೆಯಾಗಲಿ

ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಆಡಳಿತಕ್ಕೆ ‘ಸರ್ಜರಿ’ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿರುವ ಸುದ್ದಿಯನ್ನು (ಪ್ರ.ವಾ., ಫೆ. 2) ಓದಿ ಆನಂದವಾಯಿತು. ಬೇಡದ ವಿಷಯಗಳಿಗಾಗಿ ಆಯೋಗ ಸುದ್ದಿಯಾಗುತ್ತಿದೆ. ಆಡಳಿತ ವ್ಯವಸ್ಥೆ ಒಂದು ರೀತಿಯಲ್ಲಿ ಜಡ್ಡುಗಟ್ಟಿದೆ. ಉದ್ಯೋಗ ಆಕಾಂಕ್ಷಿಗಳ ವಿಶ್ವಾಸ ಉಳಿಸಿಕೊಳ್ಳುವಲ್ಲಿ ಸೋತಿದೆ. ಹಿಂದೊಂದು ಕಾಲದಲ್ಲಿ ಕೆಪಿಎಸ್‌ಸಿಯಿಂದ ಆಯ್ಕೆಯಾಗುವುದು ಪ್ರತಿಷ್ಠೆಯ ಸಂಕೇತವಾಗಿತ್ತು. ಈಗ ಅಲ್ಲಿಂದ ಯಾರಾದರೂ ಪ್ರಾಮಾಣಿಕವಾಗಿ ಆಯ್ಕೆಯಾಗಿದ್ದರೂ ಅವರನ್ನು ಸಹ ಅನುಮಾನಿಸುವ ದುಃಸ್ಥಿತಿ ಬಂದಿದೆ.

ಆಯೋಗ ನಡೆಸುವ ಪ್ರತಿ ನೇಮಕಾತಿ ಪರೀಕ್ಷೆಯಲ್ಲೂ ಒಂದಲ್ಲ ಒಂದು ಎಡವಟ್ಟು ಇದ್ದೇ ಇರುತ್ತದೆ. ರಾಜ್ಯದ ವಿವಿಧ ಇಲಾಖೆಗಳಲ್ಲಿ ಇನ್ನೂ ಕೆಲವು ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿಗಳು, ನೌಕರ ವರ್ಗದವರು ಉಳಿದಿದ್ದಾರೆ. ಅಂತಹವರನ್ನು ಗುರುತಿಸಿ ನಿಯೋಜನೆಯ ಮೇಲೆ ಆಯೋಗದಲ್ಲಿ ಕೆಲಸ ಮಾಡಲು ಅವಕಾಶ ಮಾಡಿಕೊಡಬೇಕು. ಹತ್ತಾರು ವರ್ಷಗಳಿಂದಲೂ ಆಯೋಗದಲ್ಲಿ ಬೀಡು ಬಿಟ್ಟಿರುವ ಸಿಬ್ಬಂದಿಯನ್ನು ಅಲ್ಲಿಂದ ಎತ್ತಂಗಡಿ ಮಾಡಬೇಕು. ಪ್ರಾಮಾಣಿಕ ಐಎಎಸ್ ಅಧಿಕಾರಿಗಳನ್ನು ಇಲ್ಲಿಗೆ ನೇಮಿಸಿ, ಆಯೋಗದ ಕಾರ್ಯವೈಖರಿಗೆ ಚುರುಕು ಮುಟ್ಟಿಸಲು ಅವರಿಗೆ ಸ್ವಾತಂತ್ರ್ಯ ನೀಡಬೇಕು. ಎಲ್ಲಕ್ಕಿಂತಲೂ ಮಿಗಿಲಾಗಿ ಆಯೋಗಕ್ಕೆ ಸದಸ್ಯರನ್ನು ನೇಮಿಸುವಾಗ ಯಾವುದೇ ಪ್ರಲೋಭನೆಗಳಿಗೆ ಒಳಗಾಗದೆ, ಪ್ರಾಮಾಣಿಕರು, ಸಭ್ಯರು, ದಕ್ಷರು ಮತ್ತು ಸಚ್ಚಾರಿತ್ರ್ಯವಂತರನ್ನು ನೇಮಿಸುವಂತೆ ಆಗಬೇಕು. ಆಗ ಆಯೋಗವು ಸರಿದಾರಿಯಲ್ಲಿ ನಡೆಯಲು ಸಾಧ್ಯವಾಗುತ್ತದೆ. ಕಷ್ಟಪಟ್ಟು ಓದಿ ಪರೀಕ್ಷೆ ಬರೆದವರಿಗೆ ಉದ್ಯೋಗ ದೊರೆಯುತ್ತದೆ. ಹಣದ ಥೈಲಿ ಹಿಡಿದು ಉನ್ನತ ನೌಕರಿಯನ್ನು ಖರೀದಿಸುವವರಿಗೆ ಹಿನ್ನಡೆಯಾಗುತ್ತದೆ.

ಮೋದೂರು ಮಹೇಶಾರಾಧ್ಯ, ಹುಣಸೂರು

ಬಜೆಟ್ ಬಡಿದಾಟ?!

ಕೇಂದ್ರ ಬಜೆಟ್‌ಗೆ ಯಥಾಪ್ರಕಾರ
ಆಡಳಿತ ಪಕ್ಷದವರು ಹೇಳುತ್ತಿದ್ದಾರೆ
ಅಭಿವೃದ್ಧಿಗೆ ಗಟ್ಟಿ ತಳಪಾಯ
ಮಧ್ಯಮ ವರ್ಗಕ್ಕೆ ಸಿಕ್ಕ ಮಹಾ ವರದಾನ,
ಎಂದಿನಂತೆ ವಿರೋಧ ಪಕ್ಷದವರದು
ಜೊಳ್ಳು, ಖಾಲಿ ಚೊಂಬು ಎಂಬ ವ್ಯಾಖ್ಯಾನ,
ಜನಸಾಮಾನ್ಯರು...
ಇಬ್ಬರ ಅಭಿಪ್ರಾಯ ಕೇಳಿ
ಕಣ್‌ಕಣ್ ಬಿಡುತ್ತಿದ್ದಾರೆ ಪಿಳಿಪಿಳಿ!

ಎಚ್.ಕೆ.ಕೊಟ್ರಪ್ಪ, ಹರಿಹರ

ಪರಿಪೂರ್ಣ ಬಜೆಟ್ ನಿರೀಕ್ಷಿಸಬಹುದೇ?

ಎಲ್ಲರ ಚಿತ್ತ ಬಜೆಟ್‌ನತ್ತ, ಬಜೆಟ್ ಪ್ರತಿ ತಲೆ ಮೇಲೆ ಹೊತ್ತು ತಂದರು, ಎತ್ತಿನಗಾಡಿಯಲ್ಲಿ ತಂದು ಗಮನ ಸೆಳೆದರು, ಮನೆ ದೇವರ ಜಗಲಿ ಮೇಲಿಟ್ಟು ಪೂಜಿಸಿದರು, ಇಂಥಿಂಥ ಉಡುಪು ಧರಿಸಿದ್ದರು, ಅವರ ಆಶೀರ್ವಾದ ಪಡೆದರು, ಇವರ ಇಷ್ಟನೇ ಬಜೆಟ್, ಬಜೆಟ್ ವಿವರಗಳನ್ನು ನಿರರ್ಗಳವಾಗಿ ಓದಿದರು, ಎಲ್ಲೂ ನೀರು ಕುಡಿಯಲಿಲ್ಲ, ಆಗಾಗ ಕರವಸ್ತ್ರದಿಂದ ಮುಖ ಒರೆಸಿಕೊಳ್ಳುತ್ತಿದ್ದರು, ಸ್ವಲ್ಪ ಬಳಲಿದಂತೆ ಕಂಡರು, ಬೆವರಲಿಲ್ಲ, ಗಜಗಾತ್ರದ ಬಜೆಟ್, ಅವರಿಗೆ ಬೇವು ಇವರಿಗೆ ಬೆಲ್ಲ, ಅವರು ಮೇಜು ಕುಟ್ಟಿ ಸ್ವಾಗತಿಸಿದರು, ಇವರು ಪ್ರತಿಭಟಿಸಿದರು, ಅವರಿಗೆ ಬಂಪರ್ ಇವರಿಗೆ ಚೊಂಬು, ಅದು ಏರಿಕೆ ಇದು ಇಳಿಕೆ, ಜನರಿಂದ ಮಿಶ್ರ ಪ್ರತಿಕ್ರಿಯೆ, ಆಶಾದಾಯಕ, ನಿರಾಶಾದಾಯಕ, ತುಟ್ಟಿ, ಅಗ್ಗ, ಆ ದರದ ಬೆಲೆ ಗಗನಕ್ಕೆ, ಈ ದರ ಪಾತಾಳದತ್ತ, ಸೇದುವವರಿಗೆ ತುಟಿ ಬಿಸಿ, ಕುಡಿಯುವವರಿಗೆ ತಲೆ ಬಿಸಿ, ಬಡ– ಮಧ್ಯಮ ವರ್ಗದವರ ಪಾಲಿಗೆ ಹಿತಕರ ಬಜೆಟ್...

ಇಂತಹ ಮಿಶ್ರ ಪ್ರತಿಕ್ರಿಯೆಗಳಿಂದ ಒಡಗೂಡಿದ ಅನಿಸಿಕೆ ಹಾಗೂ ಅಭಿಪ್ರಾಯಗಳು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಬಜೆಟ್ ಮಂಡನೆಯ ಆಸುಪಾಸಿನ ದಿನಗಳಲ್ಲಿ ಮಾಧ್ಯಮಗಳಲ್ಲಿ ಪ್ರಕಟವಾಗುವುದು ಹಾಗೂ ಜನರ ಬಾಯಲ್ಲಿ ಬರುವುದು ಸಾಮಾನ್ಯ. ಆದರೆ ಸರ್ವರೂ ಒಪ್ಪುವ, ಸಮಾನತೆಯ, ಪರಿಪೂರ್ಣವಾದ, ಜನಪರ ಬಜೆಟ್‌ನ ನಿರೀಕ್ಷೆ ಸಾಧ್ಯವೇ ಎನ್ನುವುದು ಯಕ್ಷಪ್ರಶ್ನೆ.

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನೀತಿ ಆಯೋಗದ ವಿಶ್ಲೇಷಣೆ

ಹಣಕಾಸು ಆರೋಗ್ಯ ಸೂಚ್ಯಂಕ ಕರ್ನಾಟಕದ ಸ್ಥಿತಿ ಹೇಗಿದೆ?

ನೀತಿ ಆಯೋಗವು ಮೊದಲ ಬಾರಿಗೆ ದೇಶದ ಪ್ರಮುಖ 18 ರಾಜ್ಯಗಳ ಹಣಕಾಸಿನ ಆರೋಗ್ಯದ ಬಗ್ಗೆ ಸೂಚ್ಯಂಕ ಬಿಡುಗಡೆ ಮಾಡಿದೆ. 10ನೇ ರ‍್ಯಾಂಕ್ ಪಡೆದಿರುವ ಕರ್ನಾಟಕದ ಆರ್ಥಿಕ ಸ್ಥಿತಿಯನ್ನೂ ವಿಶ್ಲೇಷಣೆ ಮಾಡಲಾಗಿದ್ದು, ದಶಕದಲ್ಲಿ ರಾಜ್ಯದ ಸ್ಥಾನಮಾನ ಕುಸಿದಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ಇತರೆ ರಾಜ್ಯಗಳೊಂದಿಗೆ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಹೋಲಿಸಿ ನೋಡಲಾಗಿದೆ. ರಾಜ್ಯದ ವರಮಾನ ಬಹುತೇಕ ಸ್ವಂತದ ಸಂಪನ್ಮೂಲಗಳನ್ನೇ ಆಧರಿಸಿದೆ ಎಂದು ನೀತಿ ಆಯೋಗದ ವರದಿ ಹೇಳಿದೆ

ಪ್ರಜಾವಾಣಿ ವಾರ್ತೆ

ನೀತಿ ಆಯೋಗವು ರಾಜ್ಯಗಳ ಆರ್ಥಿಕ ಸ್ಥಿತಿಗತಿಗಳನ್ನು ವಿಶ್ಲೇಷಿಸುವ ಮೊದಲ ಪ್ರಯತ್ನವಾಗಿ ಹಣಕಾಸು ಆರೋಗ್ಯ ಸೂಚ್ಯಂಕವನ್ನು (ಎಫ್‌ಎಚ್‌ಐ) ಇತ್ತೀಚೆಗೆ ಬಿಡುಗಡೆ ಮಾಡಿದೆ. ಮಹಾಲೆಕ್ಕಪರಿಶೋಧಕ ಮತ್ತು ಮಹಾಲೇಖಪಾಲರ (ಸಿಎಜಿ) ದತ್ತಾಂಶ ಆಧರಿಸಿ 2022–23ರ ಹಣಕಾಸು ವರ್ಷದಲ್ಲಿ ರಾಜ್ಯಗಳ ಹಣಕಾಸಿನ ಸದೃಢತೆ ಬಗ್ಗೆ ವರದಿ ವಿಶ್ಲೇಷಿಸಿದೆ. ಈ ಸೂಚ್ಯಂಕವು 18 ಪ್ರಮುಖ ರಾಜ್ಯಗಳನ್ನು ಒಳಗೊಂಡಿದ್ದು, ಹಿಮಾಲಯ ಮತ್ತು ಈಶಾನ್ಯ ರಾಜ್ಯಗಳನ್ನು ಕೈಬಿಡಲಾಗಿದೆ.

ದೇಶದ ಒಟ್ಟು ವೆಚ್ಚದಲ್ಲಿ ರಾಜ್ಯಗಳ ವೆಚ್ಚದ ಪಾಲು ಮೂರನೇ ಎರಡರಷ್ಟು. ಹಾಗೆಯೇ ಒಟ್ಟು ಆದಾಯದಲ್ಲಿ ರಾಜ್ಯಗಳ ಆದಾಯದ ಪಾಲು ಮೂರನೇ ಒಂದರಷ್ಟು. ಹೀಗಾಗಿ ರಾಜ್ಯಗಳ ಎಫ್‌ಎಚ್‌ಐ ಮಹತ್ವ ಪಡೆದುಕೊಂಡಿದೆ.

ವೆಚ್ಚದ ಗುಣಮಟ್ಟ, ಆದಾಯ ಕ್ರೋಡೀಕರಣ, ವಿತ್ತೀಯ ವಿವೇಚನೆ, ಸಾಲ ಸೂಚ್ಯಂಕ ಮತ್ತು ಸಾಲ ಸುಸ್ಥಿರತೆ ಎಂಬ ಐದು ಪ್ರಮುಖ ಉಪ ಸೂಚ್ಯಂಕಗಳನ್ನು (ಮಾನದಂಡ) ಆಧರಿಸಿ ರಾಜ್ಯಗಳಿಗೆ ಅಂಕಗಳು ಮತ್ತು ರ‍್ಯಾಂಕಿಂಗ್ ನೀಡಲಾಗಿದೆ.

ಒಡಿಶಾ (67.8 ಅಂಕ), ಛತ್ತೀಸಗಢ (55.2), ಗೋವಾ (53.6) ಮೊದಲ ಮೂರು ಸ್ಥಾನ ಗಳಿಸಿದ್ದರೆ, ಪಶ್ಚಿಮ ಬಂಗಾಳ (21.8), ಆಂಧ್ರಪ್ರದೇಶ (20.9) ಮತ್ತು ಪಂಜಾಬ್ (10.7) ಕೊನೆಯ ಮೂರು ಸ್ಥಾನ ಪಡೆದಿವೆ. ಕರ್ನಾಟಕವು 40.8 ಅಂಕಗಳೊಂದಿಗೆ 10ನೇ ರ‍್ಯಾಂಕ್ ಗಳಿಸಿದೆ.

ಅಂಕಗಳ ಆಧಾರದಲ್ಲಿ ರಾಜ್ಯಗಳನ್ನು ಸಾಧಕ ರಾಜ್ಯ, ಮುಂಚೂಣಿಯಲ್ಲಿರುವ ರಾಜ್ಯ, ಉತ್ತಮ ನಿರ್ವಹಣೆ ತೋರುತ್ತಿರುವ ರಾಜ್ಯ ಮತ್ತು ಭರವಸೆದಾಯಕ ರಾಜ್ಯ ಎಂದು ನಾಲ್ಕು ವಿಭಾಗ ಮಾಡಲಾಗಿದೆ. ಕರ್ನಾಟಕವು ಮುಂಚೂಣಿ ರಾಜ್ಯಗಳಲ್ಲಿ ಸ್ಥಾನ ಪಡೆದಿದೆ. ಸಾಧಕ ರಾಜ್ಯಗಳು ಮತ್ತು ಭರವಸೆದಾಯಕ ರಾಜ್ಯಗಳ ನಡುವಿನ ಅಂತರ ಹೆಚ್ಚಾಗಿದೆ. ದಕ್ಷಿಣದ ರಾಜ್ಯಗಳ ಪೈಕಿ ತೆಲಂಗಾಣ ಉತ್ತಮ ನಿರ್ವಹಣೆ ತೋರಿ 8ನೇ ಸ್ಥಾನದಲ್ಲಿದ್ದರೆ, ತಮಿಳುನಾಡು, ಕೇರಳ, ಆಂಧ್ರಪ್ರದೇಶಗಳು ಹಲವು ರೀತಿಯ ಸವಾಲುಗಳನ್ನು ಎದುರಿಸುತ್ತಿವೆ.

ಕೆಲವು ರಾಜ್ಯಗಳ ಸಾಲ ಸುಸ್ಥಿರತೆಯ ಬಗ್ಗೆ ನೀತಿ ಆಯೋಗ ಕಳವಳ ವ್ಯಕ್ತಪಡಿಸಿದೆ. ಆದಾಯಕ್ಕಿಂತ ಸಾಲ ವಿಪರೀತ ಹೆಚ್ಚಿರುವುದು, ವಿವಿಧ ರಾಜ್ಯಗಳ ನಡುವಿನ ವಿತ್ತೀಯ ಸಾಧನೆಯ ಅಂತರವು ಸುಧಾರಣೆಗಳು ಮತ್ತು ಯೋಜಿತ ಮಧ್ಯಪ್ರವೇಶದ ಅಗತ್ಯವನ್ನು ಸೂಚಿಸುತ್ತದೆ ಎಂದು ಸೂಚ್ಯಂಕದ ವರದಿ ಹೇಳಿದೆ.

ಈ ಸೂಚ್ಯಂಕವು ರಾಜ್ಯಗಳ ಆರ್ಥಿಕ ಸ್ಥಿತಿಗತಿಗಳ ಚಿತ್ರಣ ನೀಡಿದೆ. ಹಣಕಾಸಿನ ಕೊರತೆ ಹೆಚ್ಚಳ, ಸಮತೋಲನವಿಲ್ಲದ ವೆಚ್ಚ, ಬಜೆಟ್ ಆಚೆಗಿನ ಸಾಲಗಳು ರಾಜ್ಯಗಳ ಹಣಕಾಸು ನಿರ್ವಹಣೆಯಲ್ಲಿ ಬದಲಾವಣೆಯ ಅಗತ್ಯವನ್ನು ಸೂಚಿಸುತ್ತವೆ ಎಂದು ಅದು ಹೇಳಿದೆ.

ಯಾವ ರಾಜ್ಯಕ್ಕೆ ಎಷ್ಟು ಅಂಕ, ರ‍್ಯಾಂಕ್?



ಕರ್ನಾಟಕಕ್ಕೆ ದೊರೆತ ಅಂಕಗಳು



ಕುಸಿದ ರಾಜ್ಯದ ಸ್ಥಾನ

ಐದು ಉಪ ಸೂಚ್ಯಂಕಗಳ ಅನುಸಾರ ಕರ್ನಾಟಕದ ಆರ್ಥಿಕ ಸ್ಥಿತಿಗತಿಯನ್ನು ವರದಿಯಲ್ಲಿ ವಿಶ್ಲೇಷಿಸಲಾಗಿದೆ. 2014–15ರ ದತ್ತಾಂಶದ ಆಧಾರದಲ್ಲಿ ಮೂರನೇ ಸ್ಥಾನ ಗಳಿಸಿದ್ದ ರಾಜ್ಯವು, ದಶಕದ ಅವಧಿಯಲ್ಲಿ (2022–23ರ ದತ್ತಾಂಶ) 10ನೇ ಸ್ಥಾನಕ್ಕೆ ಕುಸಿದಿದೆ. ಇದಕ್ಕೆ ವೆಚ್ಚದ ಗುಣಮಟ್ಟ ಮತ್ತು ಸಾಲ ಸುಸ್ಥಿರತೆಯಲ್ಲಿ ಕಳಪೆ ನಿರ್ವಹಣೆಯೇ ಕಾರಣ ಎಂದು ಹೇಳಲಾಗಿದೆ. ರಾಜ್ಯವು ಆರೋಗ್ಯ ಮತ್ತು ಶಿಕ್ಷಣಕ್ಕಾಗಿ ಅನುದಾನವನ್ನು ಪುನರ್‌ನಿಗದಿಪಡಿಸಬೇಕು ಮತ್ತು ರಾಜ್ಯದ ವರಮಾನವನ್ನು ಹೆಚ್ಚಿಸಿಕೊಳ್ಳುವತ್ತ ಗಮನ ಹರಿಸಬೇಕು ಎಂದು ನೀತಿ ಆಯೋಗ ಸಲಹೆ ನೀಡಿದೆ.

ರಾಜ್ಯದ ಬಗ್ಗೆ ವರದಿ ಹೇಳುವುದೇನು?

- ರಾಜ್ಯದಲ್ಲಿ ರಸ್ತೆಗಳು, ಸೇತುವೆಗಳು, ವಿದ್ಯುತ್ ಯೋಜನೆಗಳಿಗೆ ಬಂಡವಾಳ ವೆಚ್ಚದ ಹೆಚ್ಚಳ; ಶಿಕ್ಷಣ, ಆರೋಗ್ಯ ವೆಚ್ಚಗಳಲ್ಲಿ ಕಡಿತ
- ಕರ್ನಾಟಕವು ಒಟ್ಟು ವೆಚ್ಚದಲ್ಲಿ ಶಿಕ್ಷಣಕ್ಕೆ ಶೇ 11.6 ಮತ್ತು ಆರೋಗ್ಯಕ್ಕಾಗಿ ಶೇ 4.5 ಖರ್ಚು ಮಾಡುತ್ತಿದ್ದು, ಇದು ಇತರೆ ರಾಜ್ಯಗಳ ಸರಾಸರಿಗಿಂತ ಕಡಿಮೆ

- ಜಿಎಸ್‌ಟಿ ರಾಜ್ಯದ ಪ್ರಮುಖ ಆದಾಯ ಮೂಲವಾಗಿದೆ (ಶೇ 63). ರಾಜ್ಯದ ಆರ್ಥಿಕ ಪರಿಸ್ಥಿತಿಯು ಬಹುತೇಕ ಸ್ವಂತದ ಸಂಪನ್ಮೂಲಗಳನ್ನೇ ಆಧರಿಸಿದೆ
- 2018–19ರಿಂದ 2022–23ರವರೆಗೆ, ಸರ್ಕಾರದ ಆದಾಯವು ₹1,64,979 ಕೋಟಿಯಿಂದ ₹2,29,080 ಕೋಟಿಗೆ ಹೆಚ್ಚಾಗಿದೆ (ಶೇ 7ರಷ್ಟು ವಾರ್ಷಿಕ ಪ್ರಗತಿ). ರಾಜ್ಯದ ಒಟ್ಟು ಆಂತರಿಕ ಉತ್ಪಾದನೆಗೆ (ಜಿಎಸ್‌ಡಿಪಿ) ತಕ್ಕಂತೆ ಆದಾಯದ ಏರಿಕೆಯು (2020–21ರ ಕೋವಿಡ್ ಅವಧಿ ಹೊರತುಪಡಿಸಿ) ಸಕಾರಾತ್ಮಕವಾಗಿದೆ
- 2022-23ರಲ್ಲಿ ನಿಗದಿಪಡಿಸಿದ ಗುರಿಗಿಂತ ಶೇ 0.6ರಷ್ಟು ಹೆಚ್ಚು ಆದಾಯವನ್ನು ರಾಜ್ಯವು ಗಳಿಸಿದೆ. ಎಫ್‌ಆರ್‌ಬಿಎಂ ಕಾಯ್ದೆ ಪ್ರಕಾರ ವಿತ್ತೀಯ ಕೊರತೆಯು ಶೇ 3.5ರ ಮಿತಿಯೊಳಗಿರಬೇಕು; ರಾಜ್ಯದ ವಿತ್ತೀಯ ಕೊರತೆಯು ಶೇ 2.1ರಷ್ಟು ಇತ್ತು
- 2018–19ರಿಂದ 2022–23ರ ನಡುವೆ ಸಾರ್ವಜನಿಕ ಸಾಲದ ಪ್ರಮಾಣ ವಾರ್ಷಿಕವಾಗಿ ಶೇ 19.1ರಷ್ಟು ಹೆಚ್ಚಳವಾಗಿದೆ. ಆದರೆ ಸಾಲ ಮತ್ತು ಜಿಎಸ್‌ಡಿಪಿ ಅನುಪಾತವು 2020–21ರಿಂದ ಕಡಿಮೆಯಾಗುತ್ತಿದ್ದು, ಇದು ಭವಿಷ್ಯದ ಸಾಲ ಸುಸ್ಥಿರತೆಯನ್ನು ತೋರಿಸುತ್ತದೆ
- ಪಡೆದಿರುವ ಸಾಲದಲ್ಲಿ ದೊಡ್ಡ ಭಾಗವನ್ನು ಮರುಪಾವತಿಗೆ ಬಳಸಲಾಗಿದೆ. ಶೇ 40.5ರಷ್ಟು ಸಾಲದ ಅವಧಿ 1ರಿಂದ 6 ವರ್ಷಗಳಲ್ಲಿ ಪೂರ್ಣಗೊಳ್ಳಲಿದೆ
- 2018–19ರಲ್ಲಿ ಶೇ 7.4ರಷ್ಟಿದ್ದ ಸಾರ್ವಜನಿಕ ಸಾಲದ ಸರಾಸರಿ ಬಡ್ಡಿದರವು 2022–23ರಲ್ಲಿ ಶೇ 6.5ಕ್ಕೆ ಕುಗ್ಗಿದೆ

ಕೇರಳದ ಕಳಪೆ ಸಾಧನೆ

ಸಾಮಾನ್ಯವಾಗಿ ಕೇಂದ್ರ ಸರ್ಕಾರದ ಸಂಸ್ಥೆಗಳು ನೀಡುವ ಸೂಚ್ಯಂಕಗಳಲ್ಲಿ ಮುಂಚೂಣಿಯಲ್ಲಿರುವ ಕೇರಳವು ಹಣಕಾಸು ಆರೋಗ್ಯ ಸೂಚ್ಯಂಕದಲ್ಲಿ ಕಳಪೆ ಸಾಧನೆ ಮಾಡಿದೆ. 25.4 ಅಂಕಗಳನ್ನು ಪಡೆದಿರುವ ಕೇರಳ 15ನೇ ರ‍್ಯಾಂಕ್ ಗಳಿಸಿದೆ. ರಾಜ್ಯಗಳ ಪಟ್ಟಿಯಲ್ಲಿ ಕೊನೆಯಿಂದ ನಾಲ್ಕನೇ ಸ್ಥಾನ ಪಡೆದಿದೆ.

ರಾಜ್ಯವು ಆದಾಯ ಕ್ರೋಡೀಕರಣದಲ್ಲಿ ಅತ್ಯುತ್ತಮ ಸಾಧನೆ (54.2 ಅಂಕ) ತೋರಿದ್ದರೂ, ವೆಚ್ಚದ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಅಂಕ (4.2) ಪಡೆದಿದೆ. ಇದು ರಾಜ್ಯದ ಒಟ್ಟಾರೆ ರ‍್ಯಾಂಕಿಂಗ್‌ನ ಮೇಲೆ ಪರಿಣಾಮ ಬೀರಿದೆ.

2014–15ರಿಂದ 2021–22ರ ನಡುವಿನ ಅಂಕಿಅಂಶಗಳ ಪ್ರಕಾರ ಕೇರಳ 16ನೇ ಸ್ಥಾನದಲ್ಲಿದೆ.

ಕೇರಳದ ವರಮಾನ ಸಂಗ್ರಹ ಹೆಚ್ಚಿಲ್ಲದಿದ್ದರೂ ಅದು ಸಾಮಾಜಿಕ ಕಲ್ಯಾಣ ಯೋಜನೆಗಳಿಗಾಗಿ ಹೆಚ್ಚು ವೆಚ್ಚ ಮಾಡುತ್ತಿದೆ. 2022–23ನೇ ಸಾಲಿನಲ್ಲಿ ಅದು ತನ್ನ ಒಟ್ಟಾರೆ ವೆಚ್ಚದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕೆ ಶೇ 6.4ರಷ್ಟು ವೆಚ್ಚ ಮಾಡಿದೆ. ದೇಶದ ಪ್ರಮುಖ ರಾಜ್ಯಗಳು ಮಾಡುತ್ತಿರುವ ಸರಾಸರಿ ವೆಚ್ಚಕ್ಕಿಂತ (ಶೇ 5.6) ಇದು ಹೆಚ್ಚಾಗಿದೆ. ಆ ವರ್ಷ ಶಿಕ್ಷಣಕ್ಕಾಗಿ ಕೇರಳವು ಒಟ್ಟು ವೆಚ್ಚದಲ್ಲಿ ಶೇ 14ರಷ್ಟನ್ನು ವ್ಯಯಿಸಿದೆ.

ನೀತಿ ಆಯೋಗದ ವರದಿಯನ್ನು ಒಪ್ಪದ ಕೇರಳ ಸರ್ಕಾರ ಶಿಕ್ಷಣ, ಆರೋಗ್ಯ ಸೇರಿದಂತೆ ಇತರ ಸಾಮಾಜಿಕ ವಲಯಗಳಲ್ಲಿ ಹೆಚ್ಚು ವೆಚ್ಚ ಮಾಡುತ್ತಿರುವುದನ್ನು ಸಮರ್ಥಿಸಿಕೊಂಡಿದೆ.

ಉಪ ಸೂಚ್ಯಂಕಗಳು: ರಾಜ್ಯವಾರು ಅಂಕಗಳು

ರಾಜ್ಯ	ವೆಚ್ಚದ ಗುಣಮಟ್ಟ	ಆದಾಯ ಕ್ರೋಡೀಕರಣ	ವಿತ್ತೀಯ ವಿವೇಚನೆ	ಸಾಲ ಸೂಚ್ಯಂಕ	ಸಾಲ ಸುಸ್ಥಿರತೆ
ಒಡಿಶಾ	52	69.9	54	99	64
ಛತ್ತೀಸಗಢ	55.1	56.5	56	79.6	29
ಗೋವಾ	45.5	87.1	59.4	51	25.2
ಜಾರ್ಖಂಡ್	47.3	45.7	62.4	66.9	35.7
ಗುಜರಾತ್	40	48.7	52.7	69	42
ಮಹಾರಾಷ್ಟ್ರ	37.1	59.1	41.8	76.4	36.8
ಉತ್ತರ ಪ್ರದೇಶ	45.8	34.6	44.7	59.9	44.5
ತೆಲಂಗಾಣ	36.9	75.2	40.8	53.3	11.7
ಮಧ್ಯ ಪ್ರದೇಶ	59.7	27.6	35.6	61	27.2
ತಮಿಳುನಾಡು	32	41.2	25.8	36	11.1
ರಾಜಸ್ಥಾನ	38.3	35.4	19.9	32.3	16.8
ಬಿಹಾರ	56.1	5.3	11.5	47.2	18.8
ಹರಿಯಾಣ	24.8	47.8	26.1	24.1	14.3
ಕೇರಳ	4.2	54.2	34	23.1	11.3
ಪಶ್ಚಿಮ ಬಂಗಾಳ	32.3	12.4	25.4	18.3	20.6
ಆಂಧ್ರ ಪ್ರದೇಶ	31.4	22.1	13.3	37.8	0
ಪಂಜಾಬ್	4.7	28.1	5.6	0	15.2

2002ರಲ್ಲೇ ನಿಯಮ ರೂಪಿಸಿದ್ದ ರಾಜ್ಯ

ಹಣಕಾಸು ಆರೋಗ್ಯ ಕಾಪಾಡಿಕೊಳ್ಳುವ ದೃಷ್ಟಿಯಿಂದ ನೀತಿ ಆಯೋಗದ ಪ್ರಯತ್ನ ಮುಖ್ಯವಾದದ್ದು. ಆದರೆ ಹಣಕಾಸು ನಿಯಮಗಳನ್ನು ಮೊದಲು ಜಾರಿ ಮಾಡಿದ್ದೇ ಕರ್ನಾಟಕ. ವಿತ್ತೀಯ ಕೊರತೆಯನ್ನು ರಾಜ್ಯದ ಜಿಡಿಪಿಯ ಶೇ 3ಕ್ಕಿಂತ ಕಡಿಮೆ ಮಾಡುವುದು, ಸಾಲದ ಪ್ರಮಾಣ ಜಿಡಿಪಿ ಆಧರಿಸಿ ವಿವೇಚನಾ ಮಟ್ಟ ಮೀರದಂತೆ ನೋಡಿಕೊಳ್ಳುವುದು, ಅಭಿವೃದ್ಧಿ ವೆಚ್ಚವನ್ನು ಗರಿಷ್ಠ ಪ್ರಮಾಣದಲ್ಲಿ ಸಾಧಿಸಲು ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಕಾಯ್ದೆ–2002 ಜಾರಿ ಮಾಡಲಾಗಿತ್ತು. ನಂತರ ಕೇಂದ್ರ ಅದನ್ನು 2003ರಲ್ಲಿ ಅಳವಡಿಸಿಕೊಂಡಿತ್ತು.

ಸಿನಿ ಬಿಟ್ಸ್

ವಿದ್ಯಾಪತಿಗೆ ಗರುಡ ರಾಮ್ ವಿಲನ್

ಗರುಡ ರಾಮ್

ನಟ ಧನಂಜಯ ಅವರ ಡಾಲಿ ಪಿಕ್ಚರ್ಸ್ ನಿರ್ಮಾಣ ಮಾಡಿರುವ ‘ವಿದ್ಯಾಪತಿ’ ಸಿನಿಮಾದ ಖಳನಾಯಕನಾಗಿ ‘ಕೆ.ಜಿ.ಎಫ್’ ಖ್ಯಾತಿಯ ಗರುಡ ರಾಮ್ ನಟಿಸಿದ್ದಾರೆ.

ನಾಗಭೂಷಣ್ ನಾಯಕರಾಗಿ ನಟಿಸಿರುವ ಈ ಸಿನಿಮಾದಲ್ಲಿ ನಾಯಕಿಯಾಗಿ ಮಲೈಕಾ ವಸುಪಾಲ್ ಬಣ್ಣಹಚ್ಚಿದ್ದಾರೆ. ರಾಮಚಂದ್ರ ರಾಜು ಹೆಸರಿಗಿಂತ ‘ಗರುಡ’ ಎಂದೇ ಖ್ಯಾತಿಗಳಿಸಿರುವ ಇವರು ವಿದ್ಯಾಪತಿ ಸಿನಿಮಾದಲ್ಲೂ ರಗಡ್ ಆಗಿಯೇ ಕಾಣಿಸಿಕೊಳ್ಳಲಿದ್ದಾರೆ. ಮೇಕಿಂಗ್ ವಿಡಿಯೊವೊಂದನ್ನು ಬಿಡುಗಡೆ ಮಾಡುವ ಮೂಲಕ ಚಿತ್ರತಂಡ ಅವರನ್ನು ಸ್ವಾಗತಿಸಿದೆ. ನಾಗಭೂಷಣ್–ಗರುಡ ರಾಮ್ ಪಾತ್ರಗಳ ಬಗ್ಗೆ ಕುತೂಹಲವನ್ನೂ ಇದು ಹುಟ್ಟಿಸಿದೆ.

‘ಇಕ್ಕಟ್’ ಕಥೆ ಹೇಳಿದ್ದ ಇಶಾಂ ಮತ್ತು ಹಸೀಂ ಖಾನ್ ‘ವಿದ್ಯಾಪತಿ’ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಕರಾಟೆ ಮಾಸ್ಟರ್ ಅವತಾರದಲ್ಲಿ ರಂಗಾಯಣ ರಘು ಇಲ್ಲಿ ಕಾಣಿಸಿಕೊಂಡಿದ್ದಾರೆ. ಲವಿತ್ ಛಾಯಾಚಿತ್ರಗ್ರಹಣ, ಡಾಸ್ಮೋಡ್ ಸಂಗೀತ ನಿರ್ದೇಶನ, ಮುರುಳಿ ನೃತ್ಯ ನಿರ್ದೇಶನ, ಸುಜಿತ್ ವೆಂಕಟರಾಮಯ್ಯ ಸಾಹಿತ್ಯ, ಅರ್ಜುನ್ ಮಾಸ್ಟರ್ ಸಾಹಸ ನಿರ್ದೇಶನ ‘ವಿದ್ಯಾಪತಿ’ಗಿದೆ. ಏ.10ಕ್ಕೆ ಸಿನಿಮಾ ಬಿಡುಗಡೆಯಾಗಲಿದೆ.

ಯೋಗಿ, ಸೋನುಗೌಡ

ಫೆ.14ಕ್ಕೆ ಸಿದ್ಲಿಂಗು 2 ಬಿಡುಗಡೆ

‘ನೀರ್‌ದೋಸೆ’ ಸಿನಿಮಾ ಖ್ಯಾತಿಯ ನಿರ್ದೇಶಕ ವಿಜಯಪ್ರಸಾದ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿರುವ ‘ಸಿದ್ಲಿಂಗು–2’ ಸಿನಿಮಾ ಫೆ.14ರಂದು ಬಿಡುಗಡೆಯಾಗುತ್ತಿದೆ. ಚಿತ್ರದ ಮೊದಲ ಹಾಡು ‘ಕಥೆಯೊಂದು..’ ಇತ್ತೀಚೆಗೆ ಬಿಡುಗಡೆಗೊಂಡಿತು.

ಈ ಹಾಡನ್ನು ಅರಸು ಅಂತಾರೆ ಬರೆದಿದ್ದು, ಅನೂಪ್ ಸೀಳಿನ್ ಸಂಗೀತ ಸಂಯೋಜಿಸುವುದರ ಜೊತೆಗೆ ಹಾಡಿಗೆ ಧ್ವನಿಯಾಗಿದ್ದಾರೆ. ಯೋಗಿ ಮತ್ತು ಸೋನು ಗೌಡ ಅಭಿನಯದಲ್ಲಿ ಈ ಹಾಡು ಮೂಡಿಬಂದಿದೆ.

‘ಇದು ತುಂಬಾ ಅವಮಾನಗಳನ್ನು ಎದುರಿಸಿ ಮಾಡಿರುವ ಸಿನಿಮಾ. ನಿರ್ಮಾಪಕರಾದ ಹರಿ ಮತ್ತು ರಾಜು ನಮ್ಮ ಕಷ್ಟದ ಸಮಯದಲ್ಲಿ ಬಂದು ನಮ್ಮ ಜೊತೆಗೆ ಸಿನಿಮಾ ಮಾಡಿದ್ದಾರೆ. ನನಗೂ, ವಿಜಯಪ್ರಸಾದ್ ಅವರಿಗೂ ಈ ಸಿನಿಮಾದಲ್ಲಿ ಆಗಿರುವ ಜಗಳ, ಇರುಸುಮುರುಸು ಈ ಹಿಂದೆ ಆಗಿಲ್ಲ. ಅದು ಸಿನಿಮಾ ವಿಷಯಕ್ಕೆ ಮಾತ್ರ. ಒಬ್ಬ ಪರಿಪೂರ್ಣ ನಟ ಆಗಬೇಕು ಅಂದರೆ ಅವರ ಜೊತೆಗೆ ಕೆಲಸ ಮಾಡಬೇಕು. ಮುಂದೆಯೂ ಅವರ ಜೊತೆಗೆ ಇನ್ನಷ್ಟು ಕೆಲಸ ಮಾಡುವ ಆಸೆ ಇದೆ’ ಎಂದಿದ್ದಾರೆ ಯೋಗಿ.

‘ಇಡೀ ಸಿನಿಮಾದಲ್ಲಿ ಯೋಗಿ ಇದೇ ವೇಷದಲ್ಲಿರುತ್ತಾರೆ. ಈ ಹಾಡಿನ ಹೀರೊಗಳು ಅನೂಪ್ ಹಾಗೂ ಅರಸು’ ಎಂದರು ವಿಜಯಪ್ರಸಾದ್. ‘ಸಿದ್ಲಿಂಗು 2’ ಚಿತ್ರವನ್ನು ಶ್ರೀಹರಿ ಮತ್ತು ರಾಜು ಶೇರಿಗಾರ್ ನಿರ್ಮಿಸಿದ್ದು, ಸುಮನ್ ರಂಗನಾಥ್, ಗಿರಿಜಾ ಲೋಕೇಶ್, ಮಹಾಂತೇಶ್, ಆ್ಯಂಟೋನಿ ಕಮಲ್, ಮಂಜುನಾಥ ಹೆಗಡೆ ಮುಂತಾದವರು ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಚಿತ್ರಕ್ಕೆ ಪ್ರಸನ್ನ ಗುರ್ಲಕೆರೆ ಛಾಯಾಚಿತ್ರಗ್ರಹಣ ಮತ್ತು ಅಕ್ಷಯ್ ಪಿ. ರಾವ್ ಸಂಕಲನವಿದೆ. ‘ಭೀಮ’ ಚಿತ್ರದ ನಿರ್ಮಾಪಕ ಜಗದೀಶ್, ಈ ಚಿತ್ರವನ್ನು ರಾಜ್ಯದಾದ್ಯಂತ ಬಿಡುಗಡೆ ಮಾಡುತ್ತಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ನಮ್ಮ ಎದೆಯೊಳಗೇ ದೇವರಿದ್ದಾನೆ!

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

123

ಎರಡಕ್ಕೆ ಎರಡು ಸೇರಿದರೆ ನಾಲ್ಕಾಗುತ್ತದೆ. ಭಾರತವೂ ಸೇರಿದಂತೆ ಅಮೆರಿಕ, ಶ್ರೀಲಂಕಾ ಅಥವಾ ಎಲ್ಲಿ ಹೋದರೂ ಎರಡಕ್ಕೆ ಎರಡು ಸೇರಿದರೆ ನಾಲ್ಕೇ ಆಗುತ್ತದೆ. ಇದು ಶಾಶ್ವತ ಸತ್ಯ. ನೀರು ಅನ್ನುವುದು ಜಲಜನಕದ ಎರಡು ಅಣುಗಳು ಮತ್ತು ಆಮ್ಲಜನಕದ ಒಂದು ಅಣು ಸೇರಿ ಆಗಿದೆ ಎಂದು ವಿಜ್ಞಾನ ಹೇಳುತ್ತದೆ. ಎಲ್ಲಿ ಹೋದರೂ ಅಷ್ಟೆ. ಇದು ಕೂಡ ಬದಲಾಗುವುದಿಲ್ಲ. ತೋರುವ ಜಗತ್ತು ತಾತ್ಪೂರ್ತಿಕ ಸತ್ಯ. ಆದರೆ ಅದರ ಒಳಗಿರುವುದು ಶಾಶ್ವತ ಸತ್ಯ. ದೇಶ, ಕಾಲ ಎಲ್ಲವನ್ನೂ ಮೀರಿದ ಸತ್ಯವೊಂದಿದೆ; ಅದಕ್ಕೆ ನಾವು ದೇವರು ಎಂದು ಕರೀತೀವಿ. ವಿಜ್ಞಾನಿ ಅದಕ್ಕೆ ಶಕ್ತಿ ಅಂತ ಕರೆದರು. ತತ್ವಜ್ಞಾನಿ ಸತ್ ಅಂತ ಕರೆದಿರಬಹುದು, ಭಾವುಕ ಭಕ್ತ ಅದಕ್ಕೆ ದೇವರು ಅಂತ ಕರೆದ. ಸತ್ಯಕ್ಕೆ ನಾವು ದೇವರು ಅಂತ ಕರೀತೀವಿ. ಸತ್ಯ ಬೇರೆ ಅಲ್ಲ, ದೇವರು ಬೇರೆ ಅಲ್ಲ. ಸತ್ಯ ಎಲ್ಲಿ ಸಿಗುತ್ತದೆ? ಅದನ್ನು ಹುಡುಕಬೇಕಲ್ಲ.

ಹುಡುಗನೊಬ್ಬ ದೇವರನ್ನು ಹುಡುಕಿಕೊಂಡು ಹೊರಟನಂತೆ. ಒಬ್ಬ ಅವನಿಗೆ, ‘ದೇವರು ಪೂರ್ವದಲ್ಲಿ ಇದ್ದಾನೆ. ಪೂರ್ವ ದಿಕ್ಕಿಗೆ ಹೋಗು’ ಅಂತ ಹೇಳಿದ. ಇವ ಪೂರ್ವಕ್ಕೆ ಹೋದ. ಅಲ್ಲಿ ಸಿಗಲಿಲ್ಲ. ಇನ್ನೊಬ್ಬ, ‘ಪಶ್ಚಿಮದಲ್ಲಿ ಇದ್ದಾನೆ ದೇವರು’ ಅಂದ. ಅದಕ್ಕೆ ಇವ ಪಶ್ಚಿಮಕ್ಕೆ ಹೋದ. ಅಲ್ಲೂ ಸಿಗಲಿಲ್ಲ. ನಿರಾಸೆಯಾಗಿ ಬರುತ್ತಿದ್ದ. ಅಲ್ಲಿ ಒಬ್ಬ ಯಜಮಾನ ಕುಳಿತಿದ್ದ. ಅವ ‘ಯಾಕೆ ಮುಖ ಬಾಡಿದೆ?’ ಎಂದು ಕೇಳಿದ. ‘ದೇವರನ್ನು ಹುಡುಕಿಕೊಂಡು ಹೋಗಿದ್ದೆ, ಅವ ಸಿಗಲಿಲ್ಲ’ ಎಂದ. ‘ನೀನು ಎಲ್ಲೆಲ್ಲಿ ಹುಡುಕಿದೆ’ ಎಂದು ಕೇಳಿದ ಯಜಮಾನ. ‘ಪೂರ್ವಕ್ಕೆ ಹುಡುಕಿದೆ ಸಿಗಲಿಲ್ಲ. ಪಶ್ಚಿಮಕ್ಕೆ ಹುಡುಕಿದೆ ಸಿಗಲಿಲ್ಲ’ ಎಂದ. ಅದಕ್ಕೆ ಯಜಮಾನ ‘ದೇವರು ಇದ್ದಾನೆ. ಆದರೆ ಪೂರ್ವದಲ್ಲಿಯೂ ಇಲ್ಲ, ಪಶ್ಚಿಮದಲ್ಲಿಯೂ ಇಲ್ಲ’ ಎಂದ. ‘ಅರೆ ಅಲ್ಲೂ ಇಲ್ಲ; ಇಲ್ಲೂ ಇಲ್ಲ ಅಂತೀರಿ. ಜೊತೆಗೆ ದೇವರು ಇದ್ದಾನೆ ಅಂತೀರಿ ಅದು ಹ್ಯಾಗೆ’ ಎಂದು ಕೇಳಿದ ಹುಡುಗ. ‘ಪೂರ್ವ ಪಶ್ಚಿಮ ಎಲ್ಲಿವೆ’ ಎಂದು ಕೇಳಿದ ಯಜಮಾನ. ‘ನನ್ನ ಮುಂದೆ ಪೂರ್ವ ಐತಿ. ನನ್ನ ಹಿಂದೆ ಪಶ್ಚಿಮ ಐತಿ’ ಎಂದ ಹುಡುಗ. ‘ಹಂಗಾದರೆ ಪೂರ್ವ ಮತ್ತು ಪಶ್ಚಿಮ ಕೂಡುವ ಸ್ಥಳದಲ್ಲಿ ದೇವರು ಇದ್ದಾನೆ. ಅಂದರೆ ನಿನ್ನ ಹೃದಯದಲ್ಲಿಯೇ ದೇವರಿದ್ದಾನೆ’ ಎಂದ ಯಜಮಾನ.

ಸತ್ಯ ನಮ್ಮ ಎದೆಯೊಳಗೇ ಇದೆ. ನಾವು ಹೊರಗೆ ಹುಡುಕುತ್ತಿದ್ದೇವೆ. ಅದಕ್ಕೆ ಅದು ಕಾಣೋದಿಲ್ಲ. ದೇವರು ಹೊರಗಿಲ್ಲ. ನಮ್ಮೊಳಗೇ ಇದ್ದಾನೆ ಎನ್ನೋದನ್ನು ತಿಳಿದುಕೊಳ್ಳಬೇಕು. ಮನುಷ್ಯನ ಮನಸ್ಸೇ ಒಂದು ದೊಡ್ಡ ರಣರಂಗ ಆಗಿದೆ. ಕಷ್ಟ ಬಂದಾಗಲೆಲ್ಲಾ ದೇವರು ಅವತಾರ ತಾಳುತ್ತಾನೆ ಎಂದು ನಾವು ಕಾದು ಕುಂತೇವಿ. ದೇವರು ಹೊರಗೆ ಅವತಾರ ತಾಳಿದರೆ ಪ್ರಯೋಜನ ಇಲ್ಲ. ದೇವರು ನಮ್ಮ ಎದೆಯೊಳಗೆ ಅವತಾರ ತಾಳಬೇಕು. ದೇವರು ಮನುಷ್ಯನಿಗೆ ಜನ್ಮ ಕೊಟ್ಟ ಅಂತ ನಾವು ತಿಳಕೊಂಡೇವಿ. ಮನುಷ್ಯನಿಗೆ ದೇವರು ಜನ್ಮ ಕೊಡೋದು ಮುಖ್ಯವಲ್ಲ. ಮನುಷ್ಯ ತನ್ನ ಎದೆಯೊಳಗೆ ದೇವರಿಗೆ ಜನ್ಮ ಕೊಡಬೇಕು. ಅದು ಮುಖ್ಯ. ದೇವರು ಮನುಷ್ಯನಿಗೆ ಜನ್ಮ ಕೊಟ್ಟ ಎನ್ನುವುದು ಸೃಷ್ಟಿಯ ವಿದ್ಯಮಾನವಾದರೆ ಮನುಷ್ಯ ತನ್ನ ಎದೆಯೊಳಗೆ ದೇವರಿಗೆ ಜನ್ಮ ಕೊಟ್ಟರೆ ಸೃಷ್ಟಿಗೊಂದು ಸಮಾಧಾನ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಫೆಬ್ರುವರಿ 3, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ಪಂಚಮಿ ಗಂ. 06-53 ನಂತರ ಷಷ್ಠಿ ಗಂ. 28-38 ನಕ್ಷತ್ರ: ರೇವತಿ ಗಂ. 23-17 ಯೋಗ: ಸಾಧ್ಯ ಗಂ. 27-03 ಕರಣ: ಬಾಲವ ಗಂ. 06-53, ಮಕರ ಮಾಸದ 20 ನೇ ದಿನ, ಮಳೆನಕ್ಷತ್ರ: ಶ್ರವಣ 4.
ರಾಹುಕಾಲ : ಬೆಳಿಗ್ಗೆ 07-30 – 09-00
ಸೂರ್ಯೋದಯ : 07-00 ಸೂರ್ಯಾಸ್ತ : 06-28
ಮುಸ್ಲಿಂ ದಿನಾಂಕ : 04 ಶಬನ್
ದಿನ ವಿಶೇಷ : ಸಾರಸ್ವತ ಪಂಚಮಿ, ಅದೃಷ್ಟ ಸಂಖ್ಯೆ : 8, 1

ಮೇಷ: ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಹಲವು ಕ್ಷೇತ್ರಗಳಲ್ಲಿ ನಿರತರನ್ನಾಗಿ ಮಾಡುವಿರಿ. ಮನೆ ಖರೀದಿ ಅಥವಾ ನಿವೇಶನ ಖರೀದಿಯ ಯೋಜನೆಗಳು ಈಡೇರುವುದು. ನೀರಿನ ಬಗ್ಗೆ ಜಾಗರೂಕತೆ ಇರಲಿ.

ವೃಷಭ: ಅಳವಡಿಸಿಕೊಂಡ ಹೊಸ ಯೋಜನೆಗಳಿಂದ ಜೀವನದಲ್ಲಿ ಉತ್ತಮ ಪ್ರಗತಿ ಕಾಣಲು ಸಾಧ್ಯವಿದೆ. ಈ ಬಗ್ಗೆ ಯೋಚಿಸಿ. ದೇವರ ಕೃಪೆಯಿಂದ ಎಲ್ಲ ಕೆಲಸಗಳು ನೆರವೇರಲಿವೆ.

ಮಿಥುನ: ಮಾತನ್ನು ಬೆಳೆಸುವ ಕಾರಣದಿಂದ ಸಂಬಂಧಗಳು ಒಡೆದು ಹೋಗುವ ಸಂಭವವಿದೆ. ಸಜ್ಜನರ ಸಹವಾಸ, ಸನ್ಮಾರ್ಗದ ಬುದ್ಧಿಯನ್ನು ಕಾಪಾಡಿಕೊಳ್ಳುವುದು ಉತ್ತಮ. ಕೃಷಿ ಕಾರ್ಯಗಳು ಬಿಡುವಿಲ್ಲದೆ ನಡೆಯುವುದು.

ಕರ್ಕಾಟಕ: ಕೆಲಸಗಳಿಗೆ ಅರ್ಜಿ ತುಂಬಲು ಸೂಕ್ತವಾದ ಸಮಯ. ಬಂಗಾರದಂಥ ಬೆಲೆಬಾಳುವ ವಸ್ತು ಕಳೆದುಹೋಗುವ ಸಾಧ್ಯತೆಯಿದೆ. ಕೌಟುಂಬಿಕವಾದ ಶುಭ ಸಮಾಚಾರ ಕೇಳಿಬರಲಿದೆ.

ಸಿಂಹ: ಗಮನಕ್ಕೆ ಬರುವ ತಪ್ಪುಗಳು ಪುನರಾವರ್ತನೆಯಾಗದಂತೆ ನೋಡಿಕೊಂಡರೆ ಯಶಸ್ಸಿನ ದಾರಿ ಕಾಣಬಹುದು. ಬೇರೆಯವರ ಹಣಕಾಸಿನ ಮಧ್ಯಸ್ಥಿಕೆಯಲ್ಲಿ ಸಿಕ್ಕಿಹಾಕಿಕೊಳ್ಳಬೇಡಿ.

ಕನ್ಯಾ: ಔಷಧ ವ್ಯಾಪಾರಿಗಳಿಗೆ ಆದಾಯದ ಉತ್ತಮ ಮೂಲವು ಸಿಗುವಂತಾಗುವುದು. ಸ್ವಲ್ಪ ಪರಿಶ್ರಮವೂ ಕಾರ್ಯಸಾಧನೆಯಲ್ಲಿ ಹೆಚ್ಚಿನ ಫಲ ನೀಡಲಿದೆ. ಬದುಕಿನ ಧನ್ಯತೆಗೆ ಅಚಲವಾದ ನಂಬಿಕೆಯೇ ಮುಖ್ಯ.

ತುಲಾ: ಸಹವರ್ತಿಗಳ ಜತೆಗೆ ವ್ಯವಹಾರಿಕವಾಗಿರುವುದು ಸರಿಯಲ್ಲ ಮಾನವೀಯತೆಯನ್ನು ಬೆಳೆಸಿಕೊಳ್ಳಿರಿ. ಇಕ್ಕಟ್ಟಿಗೆ ಸಿಲುಕಿಸುವ ಪ್ರಯತ್ನವನ್ನು ನಡೆಸಲಿದ್ದಾರೆ.

ವೃಶ್ಚಿಕ: ಪರೋಪಕಾರದ ಕೆಲಸಗಳಿಗೆ ಸಕಾರಾತ್ಮಕ ಪ್ರತಿಫಲ ಕಟ್ಟಿಟ್ಟ ಬುತ್ತಿ. ವಿವಾಹ ವಯಸ್ಕ ಯೋಗ್ಯರಿಗೆ ನೂತನ ಸಂಬಂಧಗಳು ಕೂಡಿ ಬರುತ್ತವೆ. ಸುತ್ತಲ ವಾತಾವರಣವು ಸಂತಸದಾಯಕವಾಗಿರುತ್ತದೆ.

ಧನು: ಗೃಹಿಣಿಯರಿಗೆ ಕೆಲವು ಸಮಸ್ಯೆಗಳಾಗುವ ಕಾರಣ ಮನೆಯ ಸಂಪೂರ್ಣ ಜವಾಬ್ದಾರಿಯನ್ನು ಪುರುಷರು ತೆಗೆದುಕೊಳ್ಳಬೇಕಾಗುತ್ತದೆ. ಸಾಹಿತಿಗಳು ಹಾಗೂ ಕಲಾವಿದರಿಗೆ ಗೌರವ ದೊರಕಲಿದೆ.

ಮಕರ: ಕೆಲಸ ಕಾರ್ಯಗಳು ಯೋಚನೆಯ ವಿರುದ್ಧವಾಗಿ ನಡೆಯಲಿವೆ. ಆದರೆ, ಗಾಬರಿಯಾಗುವ ಅವಶ್ಯಕತೆ ಇಲ್ಲ. ತಾಂತ್ರಿಕ ವಿಷಯಗಳ ಸಲಹೆಗಾರರಿಗೆ ಮನ್ನಣೆ ದೊರೆಯುವುದು.

ಕುಂಭ: ವೈಜ್ಞಾನಿಕ ಸಂಶೋಧನೆಯಲ್ಲಿ ತೊಡಗಿರುವವರಿಗೆ ಅನಿರೀಕ್ಷಿತ ರೀತಿಯಲ್ಲಿ ಫಲಿತಾಂಶ ದೊರೆಯಲಿದೆ. ಮನೆಯಲ್ಲಿ ಕೆಲವು ಅನುಮಾನಾಸ್ಪದವಾದ ಘಟನೆಗಳು ನಡೆದು ಕಳವಳಕ್ಕೆ ಕಾರಣವಾಗುವುದು.

ಮೀನ: ನಾಲ್ಕಾರು ದಿನದ ಹಿಂದೆ ಪ್ರಾರಂಭಿಸಿದ್ದ ಯೋಜನೆ ನಿಶ್ಚಿತ ಹಂತ ತಲುಪಿ ಮನಸ್ಸಿಗೆ ಹೆಚ್ಚಿನ ಸಮಾಧಾನವಾಗುವುದು. ಸಂಗಾತಿಯು ಇರದಿರುವುದು ಒಂದು ರೀತಿಯ ಜಾಡ್ಯವನ್ನು ತರಬಹುದು.

ಪದಬಂಧ 5942

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಮಾತು ಕೊಡುವುದು (3)
4.ಮೂರು ಮಾತ್ರೆಗಳ ಕಾಲವನ್ನು ಹೊಂದಿರುವ ಅಕ್ಷರ (2)
6.ಹಿಡಿತದಿಂದ ಖರ್ಚು ಮಾಡುವಿಕೆ (4)
7.ಸರಿಯಾದ ಸಮಯ (3)
9.ಆಲಸ್ಯವನ್ನು ಬಿಟ್ಟು ಕಾರ್ಯೋನ್ಮುಖವಾಗುವಿಕೆ (3)
10.ಉದಾಹರಣೆಯಿಂದ ಕೂಡಿದುದು (5)
11.ಕಣ್ಣು ಕಾಣದವಳು (3)
13.ಪ್ರಾಯಕ್ಕೆ ಬರುತ್ತಿರುವ ಹಸು (3)
15.ಮದುವೆ ಗಂಡಿನ ಆದಾಯ! (4)
16.ನೂರು ಸಾವಿರವಿದು (2)
17.ಶುನಕ ಮೂಸುತ್ತಿರುವ ಬಳ್ಳುಳ್ಳಿ! (3)

ಮೇಲಿಂದ ಕೆಳಕ್ಕೆ
1.ಒಡೆಯನ ಕೆಲಸ (4)
2.ಪಾಯಸ ನೆಕ್ಕುತ್ತಿರುವ ಕಾಗೆ! (3)
3.ಮುಂಗುಸಿ ಇಲ್ಲಿದೆ (3)
5.ವರ್ಗ ಅಥವಾ ಇಯತ್ತೆ (4)
8.ಸಮಯವನ್ನು ವ್ಯರ್ಥವಾಗಿ ಕಳೆಯುವುದು (5)
9.ಜಾಗರಣ ಮಾಡಿದ ಬುದ್ಧಿವಂತ (2)
10.ಬರಬೇಕಾದ ಮೊಬಲಗಿನಲ್ಲಿ ತೋರಿಸುವ ರಿಯಾಯತಿ (2)
11.ಕುಲದೊಳಗೆ ವಿಸ್ಮಯ ಕಾಣುತ್ತಿದೆಯಲ್ಲ! (4)
12.ತುಸುವೆ ಬೀರಿದ ಮಂದಹಾಸ (4)
13.ಮರಾಟಿಯವರು ತೋರಿಸಿದ ಹಂಸ (3)
14.ವನದ ಬಗ್ಗೆ ಬರೆದ ಪದ್ಯ (3)



5941ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹಲಪಿ 4.ದಡಿಯ
5.ವೀರಗಲ್ಲು 6.ನಕ್ತಂಚರ
7.ಗಡ 10.ಪ್ರತಿಬಂಧಕ
12.ಕ್ಷಯ 14.ಬೋಣಿಮಾಡು
17.ಅಮಾಯಕಿ
18.ರಜಕ 19.ಆರಂಬ

ಮೇಲಿಂದ ಕೆಳಕ್ಕೆ:
1.ಬಾದಣ 2.ಹಯನ
3.ಅಂಗರಾಗ 5.ವೀರಯೋಧ
8.ಡಬ್ಬಿ 9.ಅಕ್ಷ
11.ತಿರುಬೋಕಿ 13.ಯಜಮಾನಿ
15.ಡುರಬ 16.ಬಕರ

ಸುಡೊಕು 6327

	6			2		5		
5		4			7		2	3
	2		5			6		7
8		1		3				9
			9		8			
9		2		5		3		6
7		3		9				
	8		7		5	9	3	
		9		8			7	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6326 ಸುಡೊಕು

3	4	7	6	5	1	8	2	9
8	2	9	4	7	3	1	6	5
1	6	5	8	9	2	3	4	7
4	8	2	7	1	6	9	5	3
9	7	3	5	2	8	4	1	6
6	5	1	9	3	4	7	8	2
5	3	4	2	8	9	6	7	1
2	9	8	1	6	7	5	3	4
7	1	6	3	4	5	2	9	8

ಡಾಲರ್ ಎದುರು ಮಾತ್ರ ಇಳಿಕೆ: ಸಚಿವೆ ನಿರ್ಮಲಾ

‘ರೂಪಾಯಿ ಮೌಲ್ಯ ಸ್ಥಿರ’

ನವದೆಹಲಿ (ಪಿಟಿಐ): ‘ಅಮೆರಿಕದ ಡಾಲರ್ ಬಲಗೊಳ್ಳುತ್ತಿದೆ. ಇದರ ಎದುರು ಮಾತ್ರ ರೂಪಾಯಿ ಮೌಲ್ಯ ಕುಸಿಯುತ್ತಿದೆ. ಆದರೆ, ಇತರ ಎಲ್ಲ ಕರೆನ್ಸಿಗಳ ಎದುರು ರೂಪಾಯಿ ಮೌಲ್ಯ ಸ್ಥಿರವಾಗಿದೆ’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಸುದ್ದಿಸಂಸ್ಥೆ ಪಿಟಿಐಗೆ ಭಾನುವಾರ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಅವರು, ಕಳೆದ ಕೆಲವು ತಿಂಗಳಿಂದ ಡಾಲರ್ ಎದುರು ರೂಪಾಯಿ ಮೌಲ್ಯ ಶೇ 3ರಷ್ಟು ಕುಸಿದಿದೆ. ಇದು ಕಳವಳಕಾರಿ ವಿಷಯವಾಗಿದೆ. ಮೌಲ್ಯದ ಇಳಿಕೆಯು ವಸ್ತುಗಳ ಆಮದು ವೆಚ್ಚವನ್ನು ದುಬಾರಿ ಮಾಡಲಿದೆ. ಆದರೆ, ಇತರ ದೇಶಗಳ ಕರೆನ್ಸಿ ಎದುರು ರೂಪಾಯಿ ಮೌಲ್ಯ ಚಂಚಲವಾಗಿಲ್ಲ ಎನ್ನುವುದನ್ನು ಒಪ್ಪುವುದಿಲ್ಲ ಎಂದು ಹೇಳಿದ್ದಾರೆ.

ತೆರಿಗೆ ಸಂಗ್ರಹ, ಸಾರ್ವಜನಿಕ ಸಾಲಗಳು ಹಾಗೂ ಕಲ್ಯಾಣ ಪರ ಚಟುವಟಿಕೆಗಳ ಮೇಲಿನ ವೆಚ್ಚ, ಹಣದುಬ್ಬರದ ನಿಯಂತ್ರಣ, ಆರ್ಥಿಕ ಪ್ರಗತಿಗೆ ಉತ್ತೇಜನ ಸೇರಿದಂತೆ ಆರ್ಥಿಕತೆಯ ಅಂಶಗಳು ಸದೃಢವಾಗಿವೆ. ಈ ಅಂಶಗಳು ದುರ್ಬಲವಾಗಿದ್ದರೆ, ಎಲ್ಲಾ ಕರೆನ್ಸಿಗಳ ಎದುರು ರೂಪಾಯಿ ಮೌಲ್ಯ ಸ್ಥಿರವಾಗಿರುತ್ತಿರಲಿಲ್ಲ ಎಂದರು.

2025ರಲ್ಲಿ ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಕಡಿತದ ಸುಳಿವು ನೀಡಿದ ನಂತರ ಡಾಲರ್ ಮೌಲ್ಯದಲ್ಲಿ ಏರಿಕೆಯಾಗಿದೆ. ಇದರಿಂದ ರೂಪಾಯಿ ಮೌಲ್ಯ ಇಳಿಯುತ್ತಿದೆ. ರೂಪಾಯಿ ಮೌಲ್ಯ ಇಳಿಕೆ ತಡೆಗಟ್ಟಲು ರಿಸರ್ವ್ ಬ್ಯಾಂಕ್ ತನ್ನ ವಿದೇಶಿ ವಿನಿಮಯ ಮೀಸಲು ಸಂಗ್ರಹದಿಂದ ₹6.67 ಲಕ್ಷ ಕೋಟಿ ಬಳಸಿದೆ. ಪ್ರಸ್ತುತ ವಿದೇಶಿ ವಿನಿಮಯ ಮೀಸಲು ಸಂಗ್ರಹ ₹54.57 ಲಕ್ಷ ಕೋಟಿ ಇದೆ.

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ರೂಪಾಯಿ ಮೌಲ್ಯ ಸ್ಥಿರತೆಗೆ ಮುಂದಾಗಿದೆ. ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ. ಅಮೆರಿಕದಲ್ಲಿ ಹೊಸ ಸರ್ಕಾರ ಅಧಿಕಾರಕ್ಕೆ ಬಂದಿದೆ. ಇದರಿಂದ ಡಾಲರ್ ಮೌಲ್ಯ ಏರಿಕೆಯಾಗಿದ್ದು, ರೂಪಾಯಿ ಮೌಲ್ಯದಲ್ಲಿ ಏರಿಳಿತ ಉಂಟಾಗಿದೆ ಎಂದು ಹೇಳಿದ್ದಾರೆ.

‘ಇದು ಜನರ ಬಜೆಟ್’

ನಿರ್ಮಲಾ ಸೀತಾರಾಮನ್

‘2025–26ರ ಆರ್ಥಿಕ ವರ್ಷದ ಬಜೆಟ್ ಅನ್ನು ಜನರಿಂದ, ಜನರಿಗಾಗಿ, ಜನರಿಗೋಸ್ಕರ ‘ಇರುವ ಬಜೆಟ್’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬಣ್ಣಿಸಿದ್ದಾರೆ.

‘ಪ್ರಾಮಾಣಿಕ ತೆರಿಗೆದಾರರಿಗಾಗಿದ್ದು ತಮ್ಮ ಆಕಾಂಕ್ಷೆಗಳನ್ನು ಸರ್ಕಾರ ಈಡೇರಿಸುತ್ತಿಲ್ಲ ಎಂದು ದೂರುತ್ತಿದ್ದ ಮಧ್ಯಮ ವರ್ಗದವರ ಧ್ವನಿಯನ್ನು ನಾವು ಕೇಳಿದ್ದೇವೆ. ಈ ವರ್ಗದ ಜನರ ಅನುಕೂಲಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ತೆರಿಗೆ ಕಡಿತಗೊಳಿಸುವ ನಿರ್ಧಾರ ಕೈಗೊಂಡಿದ್ದಾರೆ’ ಎಂದು ಹೇಳಿದರು.

ಅಮೆರಿಕದ ಮಾಜಿ ಅಧ್ಯಕ್ಷ ಅಬ್ರಹಾಂ ಲಿಂಕನ್ ಅವರ ಮಾತಿನಲ್ಲಿ ಪ್ರಜಾಪ್ರಭುತ್ವದ ವ್ಯಾಖ್ಯಾನದಂತೆ, ‘ಇದು ಜನರಿಂದ, ಜನರಿಗಾಗಿ, ಜನರಿಗೋಸ್ಕರ ಇರುವ ಬಜೆಟ್ ಆಗಿದೆ ಎಂದು ಸಚಿವರು ಹೇಳಿದರು.

ತೆರಿಗೆಯ ಹೊಸ ದರಗಳು ಮಧ್ಯಮ ವರ್ಗದ ಜನರ ತೆರಿಗೆ ಹೊರೆಯನ್ನು ಕಡಿಮೆ ಮಾಡುತ್ತವೆ. ಜೊತೆಗೆ ಅವರಲ್ಲಿ ಹಣದ ಹರಿವನ್ನು ಹೆಚ್ಚಿಸುತ್ತವೆ. ಇದು ಗೃಹಬಳಕೆಗೆ ಉತ್ತೇಜನ ನೀಡಲಿದ್ದು, ಉಳಿತಾಯ ಮತ್ತು ಹೂಡಿಕೆಯನ್ನು ಹೆಚ್ಚಳ ಮಾಡಲಿದೆ ಎಂದು ಹೇಳಿದರು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ 2025–26ರ ಆರ್ಥಿಕ ವರ್ಷದ ಬಜೆಟ್ ಅನ್ನು ಸಂಸತ್ತಿನಲ್ಲಿ ಫೆಬ್ರುವರಿ 1ರಂದು ಮಂಡಿಸಿದ್ದರು.

ಎಸ್‌ಐಪಿ ಹೂಡಿಕೆ ನಿಲ್ಲಿಸಬೇಡಿ

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಸಾಧಾರಣ ಗಳಿಕೆ ಕೊಡುತ್ತಿದ್ದ ಮ್ಯೂಚುವಲ್ ಫಂಡ್‌ವೊಂದರಲ್ಲಿ ಮೂರು ತಿಂಗಳ ಹಿಂದೆ ನೀವು ₹1 ಲಕ್ಷ ಹೂಡಿಕೆ ಮಾಡಿದ್ದರೆ ಅದು ಇವತ್ತಿಗೆ ಸುಮಾರು ₹93 ಸಾವಿರಕ್ಕೆ ಇಳಿಕೆಯಾಗಿರುತ್ತದೆ. ಹೌದು, ಕಳೆದ ಮೂರು ತಿಂಗಳಲ್ಲಿ ಎಲ್ಲಾ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳು ಸಹ ಶೇ 7ರಿಂದ ಶೇ 13ರವರೆಗೂ ಕುಸಿತ ಕಂಡಿವೆ. ಆರು ತಿಂಗಳ ಅಂಕಿ – ಅಂಶ ನೋಡಿದಾಗಲೂ ಮಾರುಕಟ್ಟೆಯಲ್ಲಿ ಶೇ 5ರಿಂದ ಶೇ 10ರಷ್ಟು ಇಳಿಕೆಯಾಗಿರುವುದು ಕಂಡು ಬರುತ್ತದೆ. ಷೇರು ಮಾರುಕಟ್ಟೆಯ ಸೂಚ್ಯಂಕಗಳ ಗಣನೀಯ ಕುಸಿತವೇ ಈ ಸಮಸ್ಯೆಗೆ ಮೂಲ ಕಾರಣವಾಗಿದೆ. ಷೇರುಪೇಟೆ ಸೂಚ್ಯಂಕ ನಿಫ್ಟಿ, ಕಳೆದ ಮೂರು ತಿಂಗಳ ಅವಧಿಯಲ್ಲಿ ಅಂದಾಜು ಶೇ 8ರಷ್ಟು ಕುಸಿತ ದಾಖಲಿಸಿದೆ. 2024ರ ಸೆಪ್ಟೆಂಬರ್‌ನಿಂದ ಲೆಕ್ಕಾಚಾರ ತೆಗೆದುಕೊಂಡರೆ ಈವರೆಗೆ ನಿಫ್ಟಿ ಸೂಚ್ಯಂಕ ಶೇ 11ಕ್ಕಿಂತ ಹೆಚ್ಚು ಇಳಿಕೆ ಕಂಡಿದೆ. ಆದರೆ ಅಸಲಿಗೆ ಸ್ಟಾಕ್ ಮಾರ್ಕೆಟ್ ಕುಸಿತಕ್ಕೆ ಕಾರಣವೇನು? ಮಾರುಕಟ್ಟೆ ನಕಾರಾತ್ಮಕ ಹಾದಿಯಲ್ಲಿರುವಾಗ ಮ್ಯೂಚುವಲ್ ಫಂಡ್ ಎಸ್‌ಐಪಿ ಹೂಡಿಕೆಗಳನ್ನು ನಿಲ್ಲಿಸಬೇಕಾ? ಬನ್ನಿ, ಪ್ರಸ್ತುತ ಲೇಖನದಲ್ಲಿ ಹೂಡಿಕೆದಾರರನ್ನು ಕಾಡುತ್ತಿರುವ ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳೋಣ.

ಷೇರು ಮಾರುಕಟ್ಟೆ ಕುಸಿತಕ್ಕೆ ಕಾರಣವೇನು?: ಷೇರುಪೇಟೆ ಕುಸಿತಕ್ಕೆ ಅನೇಕ ಜಾಗತಿಕ ಮತ್ತು ದೇಶೀಯ ವಿದ್ಯಮಾನಗಳು ಕಾರಣವಾಗಿವೆ. ಈಗ ಒಂದೊಂದೇ ಅಂಶಗಳನ್ನು ವಿವರವಾಗಿ ವಿಶ್ಲೇಷಣೆ ಮಾಡೋಣ.

- **ವಿದೇಶಿ ಹೂಡಿಕೆದಾರರಿಂದ ಷೇರುಗಳ ಮಾರಾಟದ ಒತ್ತಡ:** ಭಾರತೀಯ ಷೇರು ಮಾರುಕಟ್ಟೆಯು ದೇಶೀಯ ಹೂಡಿಕೆದಾರರು ಮತ್ತು ವಿದೇಶಿ ಹೂಡಿಕೆದಾರರ ಮೇಲೆ ಅವಲಂಬಿತವಾಗಿದೆ. ಭಾರತೀಯ ಷೇರು ಮಾರುಕಟ್ಟೆಯಿಂದ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ದೊಡ್ಡ ಮೊತ್ತದ ಹೂಡಿಕೆ ಹಣವನ್ನು ಇತ್ತೀಚೆಗೆ ಹಿಂತೆಗೆದುಕೊಂಡಿದ್ದಾರೆ. ಜನವರಿ ತಿಂಗಳಲ್ಲಿ ಈ ವರೆಗೆ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹64,154 ಕೋಟಿ ಹಿಂತೆಗೆದುಕೊಂಡಿದ್ದಾರೆ.
- **ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿತ:** ಅಮೆರಿಕ ಫೆಡರಲ್ ಬ್ಯಾಂಕ್ ಬಡ್ಡಿ ದರಗಳನ್ನು ಕಡಿತಗೊಳಿಸಿದರೆ ಅದರ ಅನುಕೂಲ ಭಾರತೀಯ ಷೇರುಪೇಟೆಗೆ ಆಗುತ್ತದೆ. ಆದರೆ ಡಿಸೆಂಬರ್‌ನಲ್ಲಿ ಅಮೆರಿಕದಲ್ಲಿ ಉದ್ಯೋಗ ಬೆಳವಣಿಗೆ ದರ ಉತ್ತಮಗೊಂಡಿರುವುದರಿಂದ ಬಡ್ಡಿ ದರ ಇಳಿಕೆ ನಿರ್ಧಾರವನ್ನು ಅಮೆರಿಕ ಫೆಡರಲ್ ಬ್ಯಾಂಕ್ ಮುಂದೂಡುವ ಸಾಧ್ಯತೆಯಿದೆ. ಬಡ್ಡಿ ದರ ಇಳಿಕೆ ಮಾಡದೆ ಇದ್ದಾಗ ಅಮೆರಿಕ ಡಾಲರ್ ಬಲಗೊಳ್ಳುತ್ತದೆ. ಭಾರತದ ರೂಪಾಯಿ ಮೌಲ್ಯ ಕುಸಿತವಾಗುತ್ತದೆ. ಇಂತಹ ಸಂದರ್ಭದಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಭಾರತೀಯ ಷೇರುಪೇಟೆಯಿಂದ ಹೊರ ನಡೆಯುತ್ತಾರೆ.
- **ಮಂದಗತಿಯ ಆರ್ಥಿಕ ಬೆಳವಣಿಗೆ:** 2025ರ ಜಿಡಿಪಿ ಬೆಳವಣಿಗೆಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ಶೇ 6.6ಕ್ಕೆ ಇಳಿಕೆ ಮಾಡಿದೆ. ಭಾರತದ ಆರ್ಥಿಕ ಸಮೀಕ್ಷೆಯಲ್ಲಿ ಜಿಡಿಪಿ ಬೆಳವಣಿಗೆ ದರ ಶೇ 7ರಷ್ಟಿರಲಿದೆ ಎಂದು ಅಂದಾಜು ಮಾಡಲಾಗಿದ್ದು, ಜಿಡಿಪಿ ಹೆಚ್ಚಳವಾದರೆ ಆರ್ಥಿಕ ಬೆಳವಣಿಗೆಯಾಗಿ ವಸ್ತುಗಳು ಮತ್ತು ಸೇವೆಗಳಿಗೆ ಬೇಡಿಕೆ ಹೆಚ್ಚುತ್ತದೆ. ಆದರೆ ಜಿಡಿಪಿ ಕುಸಿತವಾದರೆ ವಸ್ತುಗಳು ಮತ್ತು ಸೇವೆಗಳಿಗೆ ಬೇಡಿಕೆ ಕುಸಿದು ಆರ್ಥಿಕತೆ ಕುಂಠಿತವಾಗುತ್ತದೆ.
- **ಆಂತರಿಕ ಮೌಲ್ಯಕ್ಕಿಂತ ಹೆಚ್ಚಳವಾದ ಷೇರಿನ ಬೆಲೆ:** ಒಂದು ಷೇರಿನ ಬೆಲೆ ಜಾಸ್ತಿ ಇದೆಯಾ, ಕಡಿಮೆ ಇದೆಯಾ ಎನ್ನುವುದನ್ನು ಆಂತರಿಕ ಮೌಲ್ಯದ ಆಧಾರದಲ್ಲಿ ಆ ಷೇರಿನ ಬೆಲೆ ಏರಿಕೆಯಾಗಿದೆಯಾ ಎಂಬುದನ್ನು ಹೂಡಿಕೆದಾರರು ಗಮನಿಸುತ್ತಾರೆ. ಒಂದು ಷೇರಿನ ಬೆಲೆ ಅದರ ಆಂತರಿಕ ಮೌಲ್ಯಕ್ಕಿಂತ ವಿಪರೀತ ಜಾಸ್ತಿಯಾದರೆ ಒಂದು ಹಂತದಲ್ಲಿ ಆ ಷೇರಿನ ಬೆಲೆ ಕುಸಿತ ಕಾಣಲು ಶುರುವಾಗುತ್ತದೆ. ಈಗ ಮಾರುಕಟ್ಟೆಯಲ್ಲಿ ಇಂತಹ ಸನ್ನಿವೇಶವಿದೆ.
- **ತೈಲ ಬೆಲೆ ಹೆಚ್ಚಳ:** ತೈಲ ಬೆಲೆ ಹೆಚ್ಚಳ ಸಹ ಷೇರುಪೇಟೆ ಮೇಲೆ ನೇರ ಪರಿಣಾಮ ಬೀರಲಿದೆ. ಇತ್ತೀಚೆಗೆ, ಒಂದು ಬ್ಯಾರಲ್ ಬ್ರೆಂಟ್ ಕಚ್ಚಾ ತೈಲದ ಬೆಲೆ 80 ಡಾಲರ್‌ನಿಂತಲೂ ಹೆಚ್ಚಾಗಿದೆ. ಪ್ರಸಕ್ತ ವರ್ಷದಲ್ಲಿ ಕಚ್ಚಾ ತೈಲ ಬೆಲೆ ಪ್ರತಿ ಬ್ಯಾರಲ್‌ಗೆ 85 ಡಾಲರ್‌ವರೆಗೂ ಹೆಚ್ಚಳವಾಗುವ ಅಂದಾಜು ಇದೆ. ಭಾರತ ತೈಲ ಅವಲಂಬಿತ ರಾಷ್ಟ್ರ. ತೈಲ ಬೆಲೆ ಹೆಚ್ಚಳವಾದಾಗ ಭಾರತದ ತೈಲ ಆಮದು ವೆಚ್ಚವೂ ಏರಿಕೆಯಾಗುತ್ತದೆ. ಇನ್ನು ಅಲ್ಲದೆ, ತೈಲ ಬೆಲೆ ಹೆಚ್ಚಳ ನೇರವಾಗಿ ಉದ್ಯಮಗಳು ಮತ್ತು ಗ್ರಾಹಕರ ಮೇಲೆ ಪರಿಣಾಮ ಬೀರುತ್ತದೆ.

ಷೇರುಪೇಟೆ ಕುಸಿತದ ವೇಳೆ ಎಸ್‌ಐಪಿ ಹೂಡಿಕೆ ನಿಲ್ಲಿಸಬೇಕಾ? ನಿಲ್ಲಿಸಿದರೆ ಏನಾಗುತ್ತದೆ?: ನೀವು ಮ್ಯೂಚುವಲ್ ಫಂಡ್ ಎಸ್‌ಐಪಿ ಮೂಲಕ ಹೂಡಿಕೆ ಮಾಡಿದಾಗ ಆ ಹೂಡಿಕೆ ಹಣದಿಂದ ಮತ್ತಷ್ಟು ಗಳಿಸಬೇಕು ಎನ್ನುವುದು ನಿಮ್ಮ ಉದ್ದೇಶವಾಗಿರುತ್ತದೆ. ಅಂದರೆ ಮ್ಯೂಚುವಲ್ ಫಂಡ್ ಹೂಡಿಕೆಯಲ್ಲಿ ಹಣ ಹಾಕಿದಾಗ ದೀರ್ಘಾವಧಿಯಲ್ಲಿ ಚಕ್ರಬಡ್ಡಿಯಲ್ಲಿ ಸಿಗುವಂತಹ ಲಾಭ ಸಿಗುತ್ತದೆ. ಒಂದು ವೇಳೆ ನೀವು ಎಸ್‌ಐಪಿ ಹೂಡಿಕೆ ನಿಲ್ಲಿಸಿದಾಗ ಹಣದ ಬೆಳವಣಿಗೆ ಕುಂಠಿತವಾಗುತ್ತದೆ. ಉದಾಹರಣೆಗೆ ಮುಂದಿನ 20 ವರ್ಷ ಪ್ರತಿ ತಿಂಗಳು ₹15 ಸಾವಿರ ಎಸ್‌ಐಪಿ ಹೂಡಿಕೆ ಮಾಡಿದರೆ ಒಟ್ಟು ₹36 ಲಕ್ಷ ಹೂಡಿಕೆಯಾಗಿರುತ್ತದೆ. ಈ ಹೂಡಿಕೆ ಮೇಲೆ ಶೇ 12ರಷ್ಟು ಗಳಿಕೆ ಲಾಭ ಸಿಕ್ಕರೆ 20 ವರ್ಷಗಳ ಬಳಿಕ ಒಟ್ಟು ₹1.5 ಕೋಟಿ ನಿಮ್ಮ ಬಳಿ ಇರುತ್ತದೆ. ಒಂದೊಮ್ಮೆ ಈ 20 ವರ್ಷಗಳ ಹೂಡಿಕೆ ಅವಧಿಯಲ್ಲಿ ಪ್ರತಿ ವರ್ಷ ₹15 ಸಾವಿರ ಮೊತ್ತದ ಒಂದು ಎಸ್‌ಐಪಿಯನ್ನು ತಪ್ಪಿಸುತ್ತೀರಿ ಎಂದುಕೊಳ್ಳಿ. ಆಗ ಎಸ್‌ಐಪಿಯಲ್ಲಿ ₹36 ಲಕ್ಷದ ಬದಲು ₹33.2 ಲಕ್ಷ ಹೂಡಿಕೆಯಾಗುತ್ತದೆ. ₹1.5 ಕೋಟಿ ರೂಪಾಯಿ ಸಿಗುವ ಜಾಗದಲ್ಲಿ ₹1.1 ಕೋಟಿ ಸಿಗುತ್ತದೆ. ಅಂದರೆ ಎಸ್‌ಐಪಿ ತಪ್ಪಿಸಿದರ ಪರಿಣಾಮ ₹40 ಲಕ್ಷ ಮೊತ್ತ ಕಡಿಮೆ ಸಿಗುತ್ತದೆ. ಹಾಗಾಗಿ ಎಸ್‌ಐಪಿ ನಿಲ್ಲಿಸುವುದರಿಂದ ದೀರ್ಘಾವಧಿಯಲ್ಲಿ ಲಾಭಕ್ಕಿಂತ ನಷ್ಟವೇ ಜಾಸ್ತಿ ಎನ್ನುವುದು ಗೊತ್ತಿರಲಿ.

ಎಸ್‌ಐಪಿ ಹೂಡಿಕೆ ನಿಲ್ಲಿಸಬೇಕೆ? ಅಧ್ಯಯನ ವರದಿ ಹೇಳುವುದೇನು?: ವೈಟ್ ಓಕ್ ಕ್ಯಾಪಿಟಲ್ ಮ್ಯೂಚುವಲ್ ಫಂಡ್ಸ್ 1994ರಿಂದ 2024ರ ಅವಧಿಯನ್ನು ಗಣನೆಗೆ ತೆಗೆದುಕೊಂಡು ಒಂದು ಅಧ್ಯಯನ ನಡೆಸಿದೆ. ಮಾರುಕಟ್ಟೆ ಅತಿಯಾಗಿ ಹೆಚ್ಚಳ ಕಂಡ ದಿನ ಎಸ್‌ಐಪಿ ಹೂಡಿಕೆ ಮಾಡಿದರೆ ಏನಾಗುತ್ತದೆ, ಮಾರುಕಟ್ಟೆ ಅತಿಯಾಗಿ ಕುಸಿತ ಕಂಡ ದಿನ ಎಸ್‌ಐಪಿ ಹೂಡಿಕೆ ಮಾಡಿದರೆ ಏನಾಗುತ್ತದೆ, ಇದ್ಯಾವುದನ್ನೂ ಗಮನಿಸದೆ ಪ್ರತಿ ತಿಂಗಳ 15ರಂದು ಶಿಸ್ತುಬದ್ಧವಾಗಿ ಎಸ್‌ಐಪಿ ಹೂಡಿಕೆ ಮಾಡುತ್ತಾ ಸಾಗಿದರೆ ಏನಾಗುತ್ತದೆ ಎನ್ನುವ ಬಗ್ಗೆ ವರದಿ ಬೆಳಕು ಚೆಲ್ಲುತ್ತದೆ. ಆ ವರದಿಯ ಪ್ರಕಾರ, ಮಾರುಕಟ್ಟೆ ಅತಿಯಾಗಿ ಹೆಚ್ಚಳ ಕಂಡ ದಿನ ಹೂಡಿಕೆ ಮಾಡಿದವರಿಗೆ ಶೇ 14.5ರಷ್ಟು ಗಳಿಕೆ ಸಿಕ್ಕರೆ, ಮಾರುಕಟ್ಟೆ ಅತಿಯಾಗಿ ಕುಸಿತ ಕಂಡ ದಿನ ಹೂಡಿದವರಿಗೆ ಶೇ 15ರಷ್ಟು ಗಳಿಕೆ ದಕ್ಕಿದೆ. ಇದ್ಯಾವುದನ್ನೂ ಗಮನಿಸದೆ ಪ್ರತಿ ತಿಂಗಳ 15ರಂದು ಶಿಸ್ತುಬದ್ಧವಾಗಿ ಹೂಡಿಕೆ ಮಾಡುತ್ತಾ ಬಂದವರಿಗೆ ಶೇ 14.7ರಷ್ಟು ಗಳಿಕೆ ಲಾಭ ಸಿಕ್ಕಿದೆ. ಅಂದರೆ ದೀರ್ಘಾವಧಿಗೆ ಹೂಡಿಕೆ ಮಾಡುವಾಗ ಶಿಸ್ತುಬದ್ಧವಾಗಿ ಹೂಡಿದರೆ ಗಳಿಕೆಯಲ್ಲಿ ಹೆಚ್ಚು ವ್ಯತ್ಯಾಸವಾಗುವುದಿಲ್ಲ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ.

ಕಿವಿಮಾತು: ಮ್ಯೂಚುವಲ್ ಫಂಡ್ ಎಸ್‌ಐಪಿ ಹೂಡಿಕೆಗಳು ಮಾರುಕಟ್ಟೆ ಏರಿಳಿತಕ್ಕೆ ಒಳಪಡುತ್ತವೆ. ಆದರೆ ಅಲ್ಪಾವಧಿ ಕುಸಿತಕ್ಕೆ ಹೆಚ್ಚು ತಲೆಕೆಡಿಸಿಕೊಳ್ಳಬಾರದು. ದೀರ್ಘಾವಧಿಯ ನೋಟದೊಂದಿಗೆ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡಿದರೆ ಲಾಭದ ಸಾಧ್ಯತೆಯೇ ಹೆಚ್ಚು ಎನ್ನುವುದನ್ನು ಹಿಂದಿನ ದತ್ತಾಂಶಗಳು ಹೇಳುತ್ತವೆ. ಹಾಗಾಗಿ ಮಾರುಕಟ್ಟೆ ಕುಸಿತಕ್ಕೆ ಹೆದರಿ ಮ್ಯೂಚುವಲ್ ಫಂಡ್ ಹೂಡಿಕೆಗಳನ್ನು ನಿಲ್ಲಿಸಬೇಡಿ. ನೆನಪಿಡಿ, ಮಾರುಕಟ್ಟೆ ಕುಸಿತದ ಸಂದರ್ಭದಲ್ಲಿ ಹೂಡಿಕೆ ಮಾಡಿದಾಗ ಮ್ಯೂಚುವಲ್ ಫಂಡ್‌ನಲ್ಲಿ ಕಡಿಮೆ ಬೆಲೆಗೆ ಜಾಸ್ತಿ ಯೂನಿಟ್‌ಗಳು ಲಭಿಸುತ್ತವೆ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಚೇತರಿಕೆ ಕಂಡ ಷೇರುಪೇಟೆ

ಜನವರಿ 31ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಚೇತರಿಸಿಕೊಂಡಿವೆ. 77,500 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದಲ್ಲಿ ಶೇ 1.72ರಷ್ಟು ಗಳಿಸಿಕೊಂಡಿದೆ. 23,508 ಅಂಶಗಳಲ್ಲಿ ವಹಿವಾಟು ಮುಗಿಸಿದ ನಿಫ್ಟಿ ಶೇ 1.8ರಷ್ಟು ಜಿಗಿದಿದೆ. ಆದರೆ ಒಟ್ಟಾರೆ 2025ರ ಜನವರಿ ತಿಂಗಳನ್ನು ಪರಿಗಣಿಸಿದಾಗ ಷೇರುಪೇಟೆ ಸೂಚ್ಯಂಕಗಳು ಭಾರಿ ಇಳಿಕೆ ದಾಖಲಿಸಿರುವುದು ಕಂಡುಬರುತ್ತದೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಧ್ಯಮ ಶೇ 3.84, ಫಾರ್ಮಾ ಶೇ 1.98, ಮಾಹಿತಿ ತಂತ್ರಜ್ಞಾನ ಶೇ 1.98 ಮತ್ತು ಲೋಹ ವಲಯ ಶೇ 0.46ರಷ್ಟು ಕುಸಿತ ಕಂಡಿವೆ. ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 7.94, ಆಟೊ ಶೇ 3.14, ಫೈನಾನ್ಸ್ ಶೇ 3.14, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 2.67, ಬ್ಯಾಂಕ್ ಶೇ 2.52 ಎನರ್ಜಿ ಶೇ 1.9, ಎಫ್‌ಎಂಸಿಜಿ ಶೇ 1.11 ಮತ್ತು ಅನಿಲ ಮತ್ತು ತೈಲ ಸೂಚ್ಯಂಕ ಶೇ 1.1ರಷ್ಟು ಗಳಿಸಿಕೊಂಡಿವೆ.

ಇಳಿಕೆ – ಗಳಿಕೆ: ನಿಫ್ಟಿಯಲ್ಲಿ ಸನ್ ಫಾರ್ಮಾ ಶೇ 4.33, ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 3.91, ವಿಪ್ರೊ ಶೇ 2.52, ಟೆಕ್ ಮಹೀಂದ್ರ ಶೇ 2.44, ಟಾಟಾ ಮೋಟರ್ಸ್ ಶೇ 2.44, ಹಿಂಡಾಲ್ಕೊ ಇಂಡಸ್ಟ್ರೀಸ್ ಶೇ 2.07, ಅದಾನಿ ಎಂಟರ್‌ಪ್ರೈಸಸ್ ಶೇ 1.2, ಟಿಸಿಎಸ್ ಶೇ 1.02, ಏರ್‌ಟೆಲ್ ಶೇ 0.97, ಬಿಪಿಸಿಎಲ್ ಶೇ 0.78, ಡಾ. ರೆಡ್ಡೀಸ್ ಲ್ಯಾಬ್ಸ್ ಶೇ 0.58 ಮತ್ತು ಐಷರ್ ಮೋಟರ್ಸ್ ಶೇ 0.24ರಷ್ಟು ಕುಸಿದಿವೆ.

ಭಾರತ್ ಎಲೆಕ್ಟ್ರಾನಿಕ್ಸ್ ಶೇ 8.4, ಹೀರೊ ಮೋಟೊಕಾರ್ಪ್ ಶೇ 7.16, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 6.81, ಬಜಾಜ್ ಫೈನಾನ್ಸ್ ಶೇ 6, ಬಜಾಜ್ ಆಟೊ ಶೇ 5.5, ಟ್ರೆಂಟ್ ಶೇ 4.81, ನೆಸ್ಲೆ ಇಂಡಿಯಾ ಶೇ 4.62, ಸಿಪ್ಲಾ ಶೇ 4.51, ಇಂಡಸ್‌ಇಂಡ್ ಬ್ಯಾಂಕ್ ಶೇ 4.39, ಹಿಂದುಸ್ತಾನ್ ಯೂನಿಲಿವರ್ ಶೇ 4.32, ಎಕ್ಸಿಸ್ ಬ್ಯಾಂಕ್ ಶೇ 4.02, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶೇ 3.86ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಈ ವಾರ ಪವರ್ ಗ್ರಿಡ್, ಡಿವೀಸ್ ಲ್ಯಾಬ್, ಆದಿತ್ಯ ಬಿರ್ಲಾ ಕ್ಯಾಪಿಟಲ್, ಟೈಟನ್, ಏಷ್ಯನ್ ಪೇಂಟ್ಸ್, ಟಾಟಾ ಪವರ್, ಗ್ಲಾಂಡ್ ಫಾರ್ಮಾ, ಟಾಟಾ ಕೆಮಿಕಲ್ಸ್, ಸಿಂಫನಿ, ವಿಆರ್‌ಎಲ್ ಲಾಜಿಸ್ಟಿಕ್ಸ್, ಏರ್‌ಟೆಲ್, ಎಸ್‌ಬಿಐ, ಬ್ರಿಟಾನಿಯಾ, ಹೀರೊ ಮೋಟೊಕಾರ್ಪ್, ಐಟಿಸಿ, ಎಂಆರ್‌ಎಫ್, ಎಲ್‌ಐಸಿ ಸೇರಿದಂತೆ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಕೇಂದ್ರ ಬಜೆಟ್‌ನ ಘೋಷಣೆಗಳು, ಆರ್‌ಬಿಐ ಹಣಕಾಸು ಸಮಿತಿ ಸಭೆಯ ತೀರ್ಮಾನಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ವಿದ್ಯುತ್ ಬಳಕೆ ಹೆಚ್ಚಳ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಜನವರಿ ತಿಂಗಳಲ್ಲಿ ದೇಶದಲ್ಲಿ 13,749 ಕೋಟಿ ಯೂನಿಟ್ ವಿದ್ಯುತ್ ಬಳಕೆ ಆಗಿದೆ ಎಂದು ಕೇಂದ್ರ ಸರ್ಕಾರ ಭಾನುವಾರ ತಿಳಿಸಿದೆ.

2024ರ ಜನವರಿಯಲ್ಲಿ 13,394 ಕೋಟಿ ಯೂನಿಟ್ ವಿದ್ಯುತ್ ಬಳಕೆ ಆಗಿತ್ತು. ಇದಕ್ಕೆ ಹೋಲಿಸಿದರೆ ಶೇ 2.7ರಷ್ಟು ಮಾತ್ರ ಏರಿಕೆ ಆಗಿದೆ ಎಂದು ತಿಳಿಸಿದೆ.

ಜನವರಿಯಲ್ಲಿ ಹಗಲು ಮತ್ತು ರಾತ್ರಿ ವೇಳೆ ಸಾಮಾನ್ಯ ತಾಪಮಾನಕ್ಕಿಂತ ಹೆಚ್ಚಿನ ತಾಪಮಾನ ವಿದ್ದರಿಂದ ಜನರು ಹೀಟರ್, ಗೀಸರ್ ಬಳಕೆ ಮಾಡುವುದನ್ನು ಕಡಿಮೆ ಮಾಡಿದ್ದಾರೆ. ಇದರಿಂದ ವಿದ್ಯುತ್ ಬೇಡಿಕೆ ಮತ್ತು ಬಳಕೆ ಪ್ರಮಾಣದಲ್ಲಿ ಕಡಿಮೆ ಆಗಿದೆ.

ಫೆಬ್ರುವರಿಯಲ್ಲೂ ವಿದ್ಯುತ್ ಬಳಕೆ ಕಡಿಮೆ ಆಗಬಹುದು ಎಂದು ತಿಳಿಸಿದೆ. ಪ್ರಸಕ್ತ ವರ್ಷದ ಬೇಸಿಗೆ ಅವಧಿಯಲ್ಲಿ ವಿದ್ಯುತ್ ಬೇಡಿಕೆಯು 270 ಗಿಗಾವಾಟ್‌ಗೆ ತಲುಪುವ ನಿರೀಕ್ಷೆಯಿದೆ ಎಂದು ತಿಳಿಸಿದೆ.

ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಪ್ರಕಾರ ಜನವರಿ ತಿಂಗಳಲ್ಲಿ 18.98 ಡಿಗ್ರಿ ಸೆಲ್ಸಿಯಸ್ ಸರಾಸರಿ ತಾಪಮಾನವಿತ್ತು. ಇದು 1901,1958 ಮತ್ತು 1990ರ ಬಳಿಕ ದಾಖಲಾದ ಹೆಚ್ಚಿನ ತಾಪಮಾನವಾಗಿದೆ.

ಫೆಬ್ರುವರಿಯಲ್ಲಿ ದೇಶದ ಬಹುತೇಕ ಪ್ರದೇಶದಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ತಾಪಮಾನ ಮತ್ತು ಸಾಮಾನ್ಯಕ್ಕಿಂತ ಕಡಿಮೆ ಮಳೆ ಆಗುವ ಅಂದಾಜು ಇದೆ ಎಂದು ಐಎಂಡಿ ಹೇಳಿದೆ.

ಎಂ–ಕ್ಯಾಪ್ ಏರಿಕೆ

ನವದೆಹಲಿ (ಪಿಟಿಐ): ಕಳೆದ ವಾರ ನಡೆದ ಷೇರುಪೇಟೆ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳ ಏರಿಕೆಯಿಂದ ಪ್ರಮುಖ 10 ಕಂಪನಿಗಳ ಪೈಕಿ 7 ಕಂಪನಿಗಳ ಮಾರುಕಟ್ಟೆ ಮೌಲ್ಯಕ್ಕೆ (ಎಂ–ಕ್ಯಾಪ್) ₹1.83 ಲಕ್ಷ ಕೋಟಿ ಸೇರ್ಪಡೆಯಾಗಿದೆ.

ಹಿಂದುಸ್ತಾನ್ ಯೂನಿಲಿವರ್ ಮಾರುಕಟ್ಟೆ ಮೌಲ್ಯಕ್ಕೆ ₹32,471 ಕೋಟಿ ಸೇರ್ಪಡೆಯಾಗಿದೆ. ಕಂಪನಿಯ ಒಟ್ಟು ಎಂ–ಕ್ಯಾಪ್ ₹5.89 ಲಕ್ಷ ಕೋಟಿಯಾಗಿದೆ. ಐಸಿಐಸಿಐ ಬ್ಯಾಂಕ್ ₹32,302 ಕೋಟಿ, ಎಚ್‌ಡಿಎಫ್‌ಸಿ ಬ್ಯಾಂಕ್ ₹30,822 ಕೋಟಿ, ಐಟಿಸಿ ₹26,212 ಕೋಟಿ, ರಿಲಯನ್ಸ್ ಇಂಡಸ್ಟ್ರೀಸ್ ₹25,373 ಕೋಟಿ, ಎಸ್‌ಬಿಐ ₹19,411 ಕೋಟಿ, ಎಲ್‌ಐಸಿಯ ಮಾರುಕಟ್ಟೆ ಮೌಲ್ಯಕ್ಕೆ ₹16,729 ಕೋಟಿ ಸೇರ್ಪಡೆಯಾಗಿದೆ.

ಟಿಸಿಎಸ್ ₹28,058 ಕೋಟಿ, ಭಾರ್ತಿ ಏರ್‌ಟೆಲ್ ₹11,211 ಕೋಟಿ ಮತ್ತು ಇನ್ಫೊಸಿಸ್ ಮಾರುಕಟ್ಟೆ ಮೌಲ್ಯದಲ್ಲಿ ₹9,653 ಕೋಟಿ ಇಳಿಕೆಯಾಗಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Engg/ Production Technical

PREM INDUSTRIES Plastic Injection Moulding Plant @ Mysore, Requires Production Head & Manager, Quality Head & Manager. Minimum 7 Years Experience in Operations & Position with Complete Knowledge in Process / Plastic Moulds. Contact: hr@premind.com 8105305827/ 9364005127

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಕಂಪನಿಗಳಿಗೆ ಬೇಕಾಗಿದ್ದಾರೆ. ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, TVSಗಳಿಗೆ SSLC, PUC,Degree, ITI,Diplomaದವರು. 18,000/- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9902643405

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ 14,000-18,000. 8951315839, 7022770052

ಪ್ರವಾಸ

Travel

28.2.25 ಕೇರಳ: 5 ದಿನ. 14.3.25 ಶ್ರೀಶೈಲ ಮಂತ್ರಾಲಯ ಹೈದರಾಬಾದ್ 5 ದಿನಗಳು 15.3.25 ರಾಜಸ್ಥಾನ 9 ದಿನ 17.3.25 ಪ್ರಯಾಗ್ ರಾಜ್ ಕಾಶಿ 25.3.25 ಮೂರು ಜ್ಯೋತಿರ್ಲಿಂಗ ಶಿರಡಿ 4 ದಿನಗಳು. 2.4.25 ಕಲ್ಕತ್ತಾ ಪುರಿ ಜಗನ್ನಾಥ ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು ಮೊ: 8496044942

ಮಹಕುಂಭಮೇಳ 144 ವರ್ಷಕ್ಕೊಮ್ಮೆ ರಿಯಾಯಿತಿ ದರದಲ್ಲಿ 23/02/2025 6ದಿನ ವಿಮಾನದಲ್ಲಿ ಪ್ರಯೋಗರಾಜ್ ಕಾಶಿ`ಗಯಾ ಅಯೋಧ್ಯಾ.(ಕೆಲವೇ ಸೀಟುಗಳಿವೆ) ಪ್ರತಿ`ತಿಂಗಳು ಅಂಡಮಾನ್ ಹವಳದ್ವೀಪ ''ಶ್ರೀಸಾಯಿ`ರಾಘವೇಂದ್ರ ಟ್ರಾವೆಲ್ಸ್'' 9739847429/ 9845560219

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

ಶಿಕ್ಷಣ

ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ

www.dhclassifieds.com ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: 9731810277 9886213331 9845114560

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕೆನಡಾ, ಮೆಕ್ಸಿಕೊ, ಚೀನಾ ಮೇಲೆ ಸುಂಕ

ರಾಷ್ಟ್ರಹಿತಕ್ಕಾಗಿ ಈ ಕ್ರಮ: ಶ್ವೇತಭವನ • ಪ್ರತೀಕಾರವಾಗಿ ಸುಂಕ ವಿಧಿಸಿದ ಕೆನಡಾ

ಪಾಮ್ ಬೀಚ್ (ಎಎಫ್‌ಪಿ): ಕೆನಡಾ ಮತ್ತು ಮೆಕ್ಸಿಕೊ ದೇಶಗಳಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಶೇ 25ರಷ್ಟು ಮತ್ತು ಚೀನಾದ ವಸ್ತುಗಳ ಮೇಲೆ ಶೇ 10ರಷ್ಟು ಸುಂಕವನ್ನು ಹೆಚ್ಚಿಸಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಶನಿವಾರ ಆದೇಶ ಹೊರಡಿಸಿದ್ದಾರೆ. ಮಂಗಳವಾರದಿಂದ ಈ ಪರಿಷ್ಕೃತ ಸುಂಕವು ಆಯಾ ದೇಶಗಳ ಮೇಲೆ ಜಾರಿಯಾಗಲಿದೆ.

ಅಮೆರಿಕದ ಈ ಕ್ರಮವನ್ನು ಮೂರೂ ದೇಶಗಳು ಖಂಡಿಸಿವೆ. ಇದಕ್ಕೆ ಪ್ರತೀಕಾರವಾಗಿ ಕ್ರಮ ಕೈಗೊಳ್ಳುವುದಾಗಿ ಈ ದೇಶಗಳು ಹೇಳಿವೆ. ಅದರಂತೆ, 106.6 ಬಿಲಿಯನ್ ಡಾಲರ್‌ನಷ್ಟು (ಸುಮಾರು ₹9.24 ಲಕ್ಷ ಕೋಟಿ) ಮೊತ್ತದ ಅಮೆರಿಕದ ವಸ್ತುಗಳ ಮೇಲೆ ಕೆನಡಾವು ಶೇ 25ರಷ್ಟು ಆಮದು ಸುಂಕ ವಿಧಿಸಲು ನಿರ್ಧರಿಸಿದೆ. ಮೆಕ್ಸಿಕೊ ಕೂಡ ಪ್ರತಿಕ್ರಿಯಿಸಿದ್ದು, ಸೂಕ್ತ ಕ್ರಮ ಕೈಗೊಳ್ಳುವ ಘೋಷಣೆ ಮಾಡಿದೆ. ವಿಶ್ವ ವ್ಯಾಪಾರ ಸಂಸ್ಥೆಗೆ ದೂರು ನೀಡುವುದಾಗಿ ಚೀನಾ ಹೇಳಿದೆ.

ಈ ಮೂರು ದೇಶಗಳಿಂದ ಅಮೆರಿಕಕ್ಕೆ ಆಮದಾಗುತ್ತಿದ್ದ ಕಡಿಮೆ ಬೆಲೆಯ ವಸ್ತುಗಳ ಮೇಲಿನ ಸುಂಕ ವಿನಾಯಿತಿಯನ್ನೂ ಟ್ರಂಪ್ ಅವರು ರದ್ದು ಮಾಡಿದ್ದಾರೆ. ಆದರೆ, ಅಮೆರಿಕಕ್ಕೆ ಕೆನಡಾದಿಂದ ಬರುತ್ತಿರುವ ವಿದ್ಯುತ್ ಮತ್ತು ತೈಲಗಳ ಮೇಲಿನ ಸುಂಕದಲ್ಲಿ ಮಾತ್ರ ಯಾವುದೇ ಏರಿಕೆಯನ್ನು ಅಲ್ಲಿನ ಸರ್ಕಾರ ಘೋಷಿಸಿಲ್ಲ.

‘ಅಂತರರಾಷ್ಟ್ರೀಯ ತುರ್ತು ಆರ್ಥಿಕ ಅಧಿಕಾರ ಕಾಯ್ದೆ’ಯ ಅನ್ವಯ ಟ್ರಂಪ್ ಅವರು ಈ ಆದೇಶ ಹೊರಡಿಸಿದ್ದಾರೆ. ‘ರಾಷ್ಟ್ರದ ಹಿತವನ್ನು ಕಾಪಾಡಲು ಸುಂಕವು ಅತ್ಯಂತ ಶಕ್ತಿಯುತ ಮಾಧ್ಯಮವಾಗಿದೆ. ಅಕ್ರಮ ವಲಸಿಗರು ಮತ್ತು ಮಾದಕವಸ್ತುಗಳು ಅದರಲ್ಲೂ ಪ್ರಮುಖವಾಗಿ ಫೆಂಟನೆಲ್, ಅಮೆರಿಕವನ್ನು ಪ್ರವೇಶಿಸದಂತೆ ತಡೆಯಲು ಈ ಆದೇಶ ಹೊರಡಿಸಲಾಗಿದೆ’ ಎಂದು ಶ್ವೇತ ಭವನ ಹೇಳಿದೆ.

ಈ ವಾರದಲ್ಲಿ ಯುರೋಪಿಯನ್ ಯೂನಿಯನ್‌ನ ದೇಶಗಳ ಮೇಲೆಯೂ ಸುಂಕ ವಿಧಿಸುತ್ತೇನೆ ಎಂದು ಟ್ರಂಪ್ ಅವರು ಹೇಳಿದ್ದಾರೆ.

‘ಅಮೆರಿಕಕ್ಕೆ ಕಾದಿದೆ ಸಂಕಷ್ಟ’

ಕೆನಡಾ, ಮೆಕ್ಸಿಕೊ ಮತ್ತು ಚೀನಾ ದೇಶಗಳಿಂದ ದೊಡ್ಡ ಪ್ರಮಾಣದಲ್ಲಿ ಅಮೆರಿಕವು ಆಮದು ಮಾಡಿಕೊಳ್ಳುತ್ತದೆ. ಈಗ ಈ ದೇಶಗಳ ಮೇಲೆ ಅಮೆರಿಕ ಹೆಚ್ಚಿನ ಆಮದು ಸುಂಕ ವಿಧಿಸಿದೆ. ಇದಕ್ಕೆ ಪ್ರತಿಯಾಗಿ ಕೆನಡಾ ಈಗಾಗಲೇ ಅಮೆರಿಕ ಮೇಲೆ ಆಮದು ಸುಂಕ ವಿಧಿಸಿದೆ. ಇದರಿಂದ ಅಮೆರಿಕಕ್ಕೆ ಹೆಚ್ಚಿನ ನಷ್ಟವಾಗಲಿದೆ. ಒಂದು ವೇಳೆ ಚೀನಾ ಹಾಗೂ ಮೆಕ್ಸಿಕೊ ದೇಶಗಳು ಕೂಡ ಕೆನಡಾ ದಾರಿಯನ್ನೇ ಹಿಡಿದರೆ ಅಮೆರಿಕಕ್ಕೆ ಸಂಕಷ್ಟ ಎನ್ನುತ್ತಾರೆ ಅರ್ಥಶಾಸ್ತ್ರಜ್ಞರು.

‘ಈ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಅಮೆರಿಕವು ಶೇ 0.7ರಷ್ಟು ಹಣದುಬ್ಬರವನ್ನು ಎದುರಿಸಲಿದೆ. ಜನರು ಖರ್ಚು ಕಡಿಮೆ ಮಾಡಲಿದ್ದಾರೆ ಮತ್ತು ಹೂಡಿಕೆ ಪ್ರಮಾಣ ಕುಸಿಯಲಿದೆ’ ಎಂದು ಆರ್ಥಿಕ ತಜ್ಞರು ಅಂದಾಜಿಸಿದ್ದಾರೆ. ‘ವ್ಯಾಪಾರ ನೀತಿಗಳಲ್ಲಿನ ಇಂಥ ಅನಿಶ್ಚಿತತೆಯು ಮಾರುಕಟ್ಟೆಯಲ್ಲಿ ನಿರಂತರ ಬದಲಾವಣೆಗಳನ್ನು ತಂದೊಡ್ಡಲಿದೆ. ಇಂಥ ಪರಿಸ್ಥಿತಿಯು ಖಾಸಗಿ ವಲಯಕ್ಕೆ ತೀವ್ರ ಪೆಟ್ಟು ನೀಡಲಿದೆ. ಟ್ರಂಪ್ ಅವರು ತಮ್ಮ ಪ್ರಚಾರದುದ್ದಕ್ಕೂ ವ್ಯಾಪರ ಸ್ನೇಹಿ ಆಡಳಿತ ನೀಡುತ್ತೇವೆ ಎಂದು ಹೇಳಿಕೊಂಡಿದ್ದರು. ಆದರೆ, ಅವರು ಈ ಕ್ರಮಗಳು ವ್ಯಾಪಾರ ಸ್ನೇಹಿಯಾಗಿಲ್ಲ’ ಎಂದಿದ್ದಾರೆ.



ನನ್ನ ಈ ನಿರ್ಧಾರದಿಂದ ನಮಗೆ ಆರ್ಥಿಕ ನಷ್ಟವಾಗಬಹುದು. ದೇಶದ ಹಿತಕ್ಕಾಗಿ ಈ ನಷ್ಟವನ್ನು ಅನುಭವಿಸಲೇಬೇಕು. ನಾವು ಅಮೆರಿಕವನ್ನು ಮತ್ತೊಮ್ಮೆ ಶ್ರೇಷ್ಠ ಮಾಡೋಣ

ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

ಫೆಂಟನಲ್ ಸಮಸ್ಯೆ ಅಮೆರಿಕದ್ದು. ಮಾದಕವಸ್ತು ಜಾಲ ತಡೆಗೆ ಸಂಬಂಧಿಸಿ ಅಮೆರಿಕದೊಂದಿಗೆ ಸೇರಿಕೊಂಡು ಹಲವು ಕಾರ್ಯಾಚರಣೆಯನ್ನು ನಡೆಸಿದ್ದೇವೆ

ಚೀನಾ ವಿದೇಶಾಂಗ ಸಚಿವಾಲಯ

‘ಅಮೆರಿಕದಲ್ಲಿ ಉದ್ಯೋಗ ನಷ್ಟವಾಗಲಿದೆ’

‘ಸುಂಕ ವಿಧಿಸಲು ನಮಗೆ ಇಷ್ಟವಿಲ್ಲ. ಆದರೆ, ಹೀಗೆ ಮಾಡದೆ ಬೇರೆ ವಿಧಿಯಿಲ್ಲ. ಈ ನಿರ್ಧಾರವು ಕೆನಡಾ ಜನರ ಮೇಲೆಯೂ ವ್ಯತಿರಿಕ್ತ ಪರಿಣಾಮ ಬೀರುತ್ತದೆ ನಿಜ. ಇದಕ್ಕೂ ಮಿಗಿಲಾಗಿ ಇದರಿಂದ ಅಮೆರಿಕ ಜನರ ಮೇಲೆಯೇ ಹೆಚ್ಚು ಪರಿಣಾಮ ಉಂಟಾಗಲಿದೆ. ಅಮೆರಿಕದ ವಾಹನ ಜೋಡಣಾ ಘಟಕಗಳು ಹಾಗೂ ತಯಾರಿಕಾ ಘಟಕಗಳು ಮುಚ್ಚಲಿವೆ. ಇದರಿಂದ ಉದ್ಯೋಗ ನಷ್ಟ ಸಂಭವಿಸಲಿದೆ’ ಎಂದು ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

‘ನಮ್ಮ, ಮೆಕ್ಸಿಕೊ ಮತ್ತು ಅಮೆರಿಕದ ಮಧ್ಯೆ ಮುಕ್ತ ವ್ಯಾಪಾರ ಒಪ್ಪಂದ ಇದೆ. ಈಗ ನಮ್ಮ ಮಧ್ಯೆಯೇ ವ್ಯಾಪಾರ ಯುದ್ಧ ಆರಂಭಿಸಿದ್ದೇವೆ. ಇದರಿಂದ ಉತ್ತರ ಅಮೆರಿಕ ಭಾಗಕ್ಕೆ ವಸ್ತುಗಳ ಹರಿವಿನಲ್ಲಿ ಕಡಿತವಾಗಲಿದೆ. ಜೊತೆಗೆ, ಕೆನಡಾ ಮೂಲಕ ಅಕ್ರಮ ವಲಸಿಗರು ಮತ್ತು ಫೆಂಟನೆಲ್ ಅಮೆರಿಕವನ್ನು ಪ್ರವೇಶಿಸುತ್ತಿದೆ ಎಂದು ಟ್ರಂಪ್ ಆರೋಪಿಸಿದ್ದಾರೆ. ಆದರೆ, ನಮ್ಮ ನೆಲದಿಂದ ಕೇವಲ ಶೇ 1ರಷ್ಟು ಫೆಂಟನೆಲ್ ಅಮೆರಿಕ ತಲುಪುತ್ತಿದೆ. ಕೆಲವೇ ಸಂಖ್ಯೆಯ ಅಕ್ರಮ ವಲಸಿಗರು ಅಲ್ಲಿಗೆ ಹೋಗುತ್ತಿದ್ದಾರಷ್ಟೆ’ ಎಂದರು.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪಾತಕಿ ಜೋಗಿಂದರ್ ಭಾರತಕ್ಕೆ ಹಸ್ತಾಂತರ

ನವದೆಹಲಿ (ಪಿಟಿಐ): ವಿವಿಧ ಪ್ರಕರಣಗಳಲ್ಲಿ ಪೊಲೀಸರಿಗೆ ಬೇಕಾಗಿದ್ದ ಪಾತಕಿ ಜೋಗಿಂದರ್ ಗ್ಯೋಂಗ್‌ನನ್ನು ಫಿಲಿಪ್ಪೀನ್ಸ್‌ನಿಂದ ಕರೆತರಲಾಗಿದೆ ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ.

ಜೋಗಿಂದರ್‌ನನ್ನು ಸದ್ಯ ದೆಹಲಿ ಪೊಲೀಸರ ವಶಕ್ಕೆ ನೀಡಲಾಗಿದೆ. ಈತನ ವಿರುದ್ಧ ದರೋಡೆ, ಕೊಲೆ ಯತ್ನ, ಸುಲಿಗೆಗಾಗಿ ಅಪಹರಣ ಸೇರಿದಂತೆ ಹಲವು ಪ್ರಕರಣಗಳು ದಾಖಲಾಗಿವೆ ಎಂದು ಸಿಬಿಐ ವಕ್ತಾರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ವಿದೇಶದಲ್ಲಿ ತಲೆಮರೆಸಿಕೊಂಡಿದ್ದ ಜೋಗಿಂದರ್‌ನನ್ನು ಭಾರತಕ್ಕೆ ವಾಪಸು ಕರೆತರಲು ಕಳೆದ ವರ್ಷ ಅಕ್ಟೋಬರ್ 25ರಂದು ‘ರೆಡ್ ಕಾರ್ನರ್’ ನೋಟಿಸ್ ಹೊರಡಿಸಲಾಗಿತ್ತು. ನಮ್ಮ ಮನವಿಗೆ ಸ್ಪಂದಿಸಿದ ಫಿಲಿಪ್ಪೀನ್ಸ್‌ನ ‘ವಲಸೆ ಅಧಿಕಾರಿ’ಗಳು ಈತನನ್ನು ಬಂಧಿಸಿ, ಭಾರತಕ್ಕೆ ಹಸ್ತಾಂತರ ಮಾಡಿದ್ದಾರೆ’ ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ. ಈತ ಕ್ರಿಮಿನಲ್ ಸಂಚು ಹಾಗೂ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಹರಿಯಾಣ ಹಾಗೂ ದೆಹಲಿ ಪೊಲೀಸರಿಗೆ ಬೇಕಾಗಿದ್ದ.

ಶಸ್ತ್ರಾಸ್ತ್ರಗಳ ಅಕ್ರಮ ಸಂಗ್ರಹಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಜೋಗಿಂದರ್, ಪೆರೋಲ್ ಮೇಲೆ ಜೈಲಿನಿಂದ ಹೊರಬಂದಿದ್ದ ವೇಳೆ ಕೊಲೆ ಮಾಡಿ ವಿದೇಶಕ್ಕೆ ಪರಾರಿಯಾಗಿದ್ದ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹470-687
ದ್ವಿತಳಿ (ಬಿ.ವಿ)	₹166-844

ಎನ್‌ಇಸಿಸಿ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹515
12 ಕ್ಕೆ	₹70
ಮೈಸೂರು	
100ಕ್ಕೆ	₹517

ನೋಂದಣಿರಹಿತರಿಗೆ ಪ್ರಹಾರ

ಒಂದನೇ ಪುಟದಿಂದ...

ನೋಂದಣಿರಹಿತ ಮತ್ತು ಪರವಾನಗಿರಹಿತ ಮೈಕ್ರೊ ಫೈನಾನ್ಸ್ ಕಂಪನಿಗಳು, ಲೇವಾದೇವಿದಾರರು ನೀಡಿರುವ ಸಾಲ ಹಾಗೂ ಬಡ್ಡಿ ವಸೂಲಿಗೆ ಸಂಬಂಧಿಸಿದಂತೆ ಸಾಲಗಾರರ ಮೇಲೆ ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಅವಕಾಶವಿರುವುದಿಲ್ಲ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಿದ ಮತ್ತು ವಿಚಾರಣಾ ಹಂತದಲ್ಲಿ ಇರುವ ಎಲ್ಲ ಪ್ರಕರಣಗಳೂ ಸುಗ್ರೀವಾಜ್ಞೆ ಜಾರಿಯಾದ ಕ್ಷಣದಿಂದ ರದ್ದುಗೊಳ್ಳಲಿವೆ ಎಂಬ ಅಂಶವೂ ಕರಡಿನಲ್ಲಿದೆ.

ಸುಗ್ರೀವಾಜ್ಞೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅನುಮೋದನೆ ನೀಡಿದ ಬಳಿಕ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರ ಅಂಕಿತಕ್ಕೆ ಕಳುಹಿಸಲಾಗುವುದು ಎಂದು ಸರ್ಕಾರದ ಉನ್ನತ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

3 ವರ್ಷ ಜೈಲು, ₹5 ಲಕ್ಷ ದಂಡ: ಸಾಲಗಾರರಿಗೆ ಹಿಂಸೆ, ಕಿರುಕುಳ ನೀಡುವ ಮೈಕ್ರೊ ಫೈನಾನ್ಸ್ ಕಂಪನಿಗಳು ಅಥವಾ ಲೇವಾದೇವಿದಾರರಿಗೆ ಆರು ತಿಂಗಳಿಗಿಂತ ಕಡಿಮೆ ಇಲ್ಲದ, ಮೂರು ವರ್ಷದವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ₹5 ಲಕ್ಷದವರೆಗೆ ವಿಸ್ತರಿಸಬಹುದಾದ ದಂಡ ವಿಧಿಸಲು ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ, ನೋಂದಣಿ ಪ್ರಾಧಿಕಾರವು ಅಂತಹ ಸಂಸ್ಥೆಗಳ ನೋಂದಣಿಯನ್ನು ಅಮಾನತು ಅಥವಾ ರದ್ದುಪಡಿಸುವ ಕಠಿಣ ನಿಯಮ ಕೂಡಾ ಈ ಸುಗ್ರೀವಾಜ್ಞೆಯಲ್ಲಿದೆ.

‘ಸಾಲಗಾರರ ಮೇಲೆ ದೌರ್ಜನ್ಯ ಎಸಗುವ ಮೈಕ್ರೊ ಫೈನಾನ್ಸ್ ಕಂಪನಿಗಳು ಅಥವಾ ಲೇವಾದೇವಿದಾರಿಗೆ ಮೂರು ವರ್ಷದವರೆಗೆ ಜೈಲು ಮತ್ತು ₹1 ಲಕ್ಷವರೆಗೆ ದಂಡ ವಿಧಿಸಲು ಅವಕಾಶ ಕಲ್ಪಿಸುವ ಸುಗ್ರೀವಾಜ್ಞೆ ಹೊರಡಿಸುವ ಕುರಿತು ಗುರುವಾರ (ಜನವರಿ 30) ಬೆಳಿಗ್ಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆಸಲಾಗಿತ್ತು. ಆದರೆ, ಚರ್ಚೆಯ ಸಂದರ್ಭದಲ್ಲಿ ಕೆಲವು ತಾಂತ್ರಿಕ ಸಮಸ್ಯೆಗಳು ಪ್ರಸ್ತಾಪಗೊಂಡ ಕಾರಣ ಮತ್ತು ನಿಯಮಗಳನ್ನು ಇನ್ನಷ್ಟು ಬಿಗಿಗೊಳಿಸಬೇಕೆಂಬ ಕಾರಣಕ್ಕೆ ಕಾನೂನು ಸಚಿವ ಎಚ್‌.ಕೆ. ಪಾಟೀಲ, ಗೃಹ ಸಚಿವ ಜಿ. ಪರಮೇಶ್ವರ, ಸಹಕಾರ ಸಚಿವ ಕೆ.ಎನ್. ರಾಜಣ್ಣ ಮತ್ತು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಜೊತೆ ಮುಖ್ಯಮಂತ್ರಿ ಅದೇ ದಿನ ಸಂಜೆ ಸಭೆ ನಡೆಸಿದ್ದರು. ಶನಿವಾರ (ಫೆಬ್ರುವರಿ 1) ಮತ್ತೊಂದು ಸುತ್ತಿನ ಸಭೆ ನಡೆಸಿದ ಎಚ್‌.ಕೆ. ಪಾಟೀಲ ಮತ್ತು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಸುಗ್ರೀವಾಜ್ಞೆಯಲ್ಲಿ ಇರಬೇಕಾದ ಕಾನೂನು ಅಂಶಗಳನ್ನು ಅಂತಿಮಗೊಳಿಸಿದರು’ ಎಂದು ಮೂಲಗಳು ಹೇಳಿವೆ.

ನೋಂದಾಯಿತ ಕಚೇರಿ ಹೊಂದಿರಬೇಕು: ಪ್ರತಿಯೊಂದು ಮೈಕ್ರೊ ಫೈನಾನ್ಸ್ ಕಂಪನಿ ಅಥವಾ ಲೇವಾದೇವಿದಾರ ಏಜೆನ್ಸಿ ಸ್ಥಳೀಯವಾಗಿ ನೋಂದಾಯಿತ ಕಚೇರಿ ಹೊಂದಿರಬೇಕು. ಸಾಲಗಾರರಿಗೆ ವಿಧಿಸುವ ಬಡ್ಡಿ ದರದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕು. ಸಾಲಗಾರರಿಗೆ ನೀಡುವ ಸಾಲದ ಕಾರ್ಡ್‌ನಲ್ಲಿ ವಿಧಿಸಿದ ಬಡ್ಡಿ, ಸಾಲಕ್ಕೆ ಸಂಬಂಧಿಸಿದ ಎಲ್ಲ ಷರತ್ತುಗಳು ಮತ್ತು ನಿಬಂಧನೆಗಳು, ಸಾಲ ಮರು ಪಾವತಿ ವಿವರಗಳನ್ನು ಸಾಲಗಾರನಿಗೆ ಅರ್ಥವಾಗುವ ಭಾಷೆಯಲ್ಲಿ ನೀಡಬೇಕು. ಸಾಲಗಾರರ ಜೊತೆ ಕನ್ನಡದಲ್ಲಿಯೇ ಸಂವಹನ ಮಾಡಬೇಕು ಎಂದು ಕರಡಿನಲ್ಲಿ ವಿವರಿಸಲಾಗಿದೆ.

ವರದಿ ಸಲ್ಲಿಸದಿದ್ದರೆ ಶಿಕ್ಷೆ: ಸಾಲಗಾರರು ಸಾಲ ಮರುಪಾವತಿಸುವಾಗ ರಸೀದಿ ನೀಡಬೇಕು. ಅಲ್ಲದೆ, ಎಲ್ಲ ಮೈಕ್ರೊ ಫೈನಾನ್ಸ್ ಕಂಪನಿಗಳು ಅಥವಾ ಲೇವಾದೇವಿದಾರ ಏಜೆನ್ಸಿಗಳು ತಮ್ಮ ವಹಿವಾಟಿಗೆ ಸಂಬಂಧಿಸಿದ ಎಲ್ಲ ವಿವರಗಳ ಸಹಿತ ತ್ರೈಮಾಸಿಕ ಮತ್ತು ವಾರ್ಷಿಕ ವರದಿಯನ್ನು ನೋಂದಣಿ ಪ್ರಾಧಿಕಾರಕ್ಕೆ ಸಲ್ಲಿಸಬೇಕು. ವರದಿ ಸಲ್ಲಿಸಲು ವಿಫಲವಾಗುವ ಸಂಸ್ಥೆಗಳಿಗೆ ಆರು ತಿಂಗಳ ಜೈಲು ಶಿಕ್ಷೆ ಅಥವಾ ₹10 ಸಾವಿರದವರೆಗೆ ವಿಸ್ತರಿಸಬಹುದಾದ ದಂಡ ಅಥವಾ ಈ ಎರಡನ್ನೂ ವಿಧಿಸಲು ಕೂಡಾ ಸುಗ್ರೀವಾಜ್ಞೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

₹52 ಕೋಟಿಯ ಗಾಂಜಾ, ಚಿನ್ನ, ವಜ್ರ ವಶ: 8 ಮಂದಿ ಬಂಧನ

ಮುಂಬೈ (ಪಿಟಿಐ): ಇಲ್ಲಿನ ಛತ್ರಪತಿ ಶಿವಾಜಿ ಮಹಾರಾಜ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸುಮಾರು ₹52 ಕೋಟಿಗೂ ಅಧಿಕ ಮೌಲ್ಯದ ಮಾದಕ ವಸ್ತು, ಚಿನ್ನ, ವಜ್ರಗಳನ್ನು ವಶಪಡಿಸಿಕೊಂಡು, ಎಂಟು ಮಂದಿಯನ್ನು ಬಂಧಿಸಲಾಗಿದೆ ಎಂದು ಕಸ್ಟಮ್ಸ್ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಜ.28ರಿಂದ 31ರವರೆಗೆ ನಡೆಸಿದ ವಿಶೇಷ ಕಾರ್ಯಾಚರಣೆ ವೇಳೆ, ₹50.116 ಕೋಟಿ ಮೌಲ್ಯದ 50.11 ಕೆ.ಜಿ ಗಾಂಜಾ (ಹೈಡ್ರೋಪೋನಿಕ್ ವೀಡ್), ₹93.8 ಲಕ್ಷದ ವಜ್ರಗಳು ಹಾಗೂ ₹1.5 ಕೋಟಿ ಮೌಲ್ಯದ 2.073 ಕೆ.ಜಿ ಚಿನ್ನ ವಶಪಡಿಸಿಕೊಳ್ಳಲಾಯಿತು. ಕಸ್ಟಮ್ಸ್ ಕಾಯ್ದೆಯಡಿ 6 ಪ್ರಕರಣಗಳನ್ನು ದಾಖಲಿಸಿ, ಎಂಟು ಜನರನ್ನು ಬಂಧಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಹಾಕುಂಭ: ಉತ್ತರ ಪ್ರದೇಶ ಪೊಲೀಸರಿಂದ 16 ಸಾವಿರ ಮೊಬೈಲ್ ಫೋನ್‌ಗಳ ದತ್ತಾಂಶ ಪರಿಶೀಲನೆ

ಕಾಲ್ತುಳಿತ ದುರಂತ: ಪಿತೂರಿ ಕುರಿತು ತನಿಖೆ

ಪ್ರಜಾವಾಣಿ ವಾರ್ತೆ

ಲಖನೌ: ಪ್ರಯಾಗ್‌ರಾಜ್‌ನ ಮಹಾಕುಂಭದಲ್ಲಿ ಮೌನಿ ಅಮಾವಾಸ್ಯೆ ದಿನ (ಜ. 29) ಅಮೃತ ಸ್ನಾನದ ಸಂದರ್ಭದಲ್ಲಿ ಸಂಭವಿಸಿದ ಕಾಲ್ತುಳಿತವು 'ಪಿತೂರಿ'ಯ ಭಾಗವಾಗಿತ್ತೇ ಎಂಬ ಕುರಿತೂ ಉತ್ತರ ಪ್ರದೇಶದ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಆ ದಿನ ನಡೆದ ಕಾಲ್ತುಳಿತದಲ್ಲಿ 30 ಭಕ್ತರು ಮೃತಪಟ್ಟು, 60ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು.

'ಮಧ್ಯರಾತ್ರಿ ಕಾಲ್ತುಳಿತ ಸಂಭವಿಸಿದ ವೇಳೆ ಸಕ್ರಿಯವಾಗಿದ್ದ ಸಹಸ್ರಾರು ಮೊಬೈಲ್ ಫೋನ್‌ಗಳ ದತ್ತಾಂಶವನ್ನು ಉತ್ತರ ಪ್ರದೇಶ ಪೊಲೀಸರ ವಿಶೇಷ ಕಾರ್ಯಪಡೆ (ಎಸ್‌ಟಿಎಫ್) ವಿಶ್ಲೇಷಿಸುತ್ತಿದೆ' ಎಂದು ಮೂಲಗಳು ತಿಳಿಸಿವೆ.

'ತನಿಖೆಯ ಭಾಗವಾಗಿ ಸುಮಾರು 16 ಸಾವಿರ ಮೊಬೈಲ್ ಫೋನ್ ಸಂಖ್ಯೆಗಳ ದತ್ತಾಂಶವನ್ನು ಪರಿಶೀಲಿಸಲಾಗುತ್ತಿದೆ. ಇವುಗಳಲ್ಲಿ ಬಹುತೇಕ ಸಂಖ್ಯೆಗಳು ದುರಂತದ ಬಳಿಕ ಸ್ವಿಚ್ಡ್‌ಆಫ್ ಆಗಿವೆ' ಎಂದಿವೆ.

'ಕಾಲ್ತುಳಿತವು ಪಿತೂರಿಯಿಂದ ಸಂಭವಿಸಿತ್ತೇ ಎಂಬ ಆಯಾಮದಲ್ಲೂ ತನಿಖೆ ನಡೆಸುತ್ತಿದ್ದೇವೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ನೂಕುನುಗ್ಗಲು ಉಂಟಾದ ರಾತ್ರಿ ಭಕ್ತರನ್ನು ಉದ್ದೇಶಪೂರ್ವಕವಾಗಿ ಮುಂದಕ್ಕೆ ತಳ್ಳಿದ ಯುವಕರ ಗುಂಪನ್ನು ಪೊಲೀಸರು ಹುಡುಕುತ್ತಿದ್ದಾರೆ. ಈ ಸಂಬಂಧ ಮಹಾಕುಂಭದಲ್ಲಿ ಬಳೆಗಳು ಮತ್ತು ಪೂಜಾ ಸಾಮಗ್ರಿಗಳನ್ನು ಮಾರುವವರನ್ನು ಪ್ರಶ್ನಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

ಮಹಾಕುಂಭ ಮೇಳದಲ್ಲಿ ಪವಿತ್ರ ಸ್ನಾನಕ್ಕೆ ಭಾನುವಾರ ಸೇರಿದ್ದ ಜನಸ್ತೋಮ ಪಿಟಿಐ ಚಿತ್ರ

'ಸಿಸಿಟಿವಿ ಕ್ಯಾಮೆರಾ ದೃಶ್ಯಗಳನ್ನು ವಿಶ್ಲೇಷಿಸಲಾಗುತ್ತಿದೆ. ಚಹರೆ ಗುರುತಿಸುವ ಆ್ಯಪ್ ನೆರವನ್ನು ಪಡೆದು ಅವರನ್ನು ಗುರುತಿಸಲು ಯತ್ನಿಸುತ್ತಿದ್ದೇವೆ' ಎಂದು ಅಧಿಕಾರಿ ಹೇಳಿದ್ದಾರೆ.

ವಸಂತ ಪಂಚಮಿಯತ್ತ ಗಮನ: 'ಸದ್ಯ ನಾವು ವಸಂತ ಪಂಚಮಿಯ ದಿನ ನಡೆಯುವ ಮೂರನೇ ಅಮೃತ ಸ್ನಾನದತ್ತ ಗಮನ ಕೇಂದ್ರೀಕರಿಸಿದ್ದೇವೆ. ಆ ದಿನ ಯಾವುದೇ ಅವಘಡಗಳು ನಡೆಯದಂತೆ ಎಚ್ಚರವಹಿಸಿದ್ದೇವೆ' ಎಂದು ಅವರು ಹೇಳಿದ್ದಾರೆ.

'ಹೋಟೆಲ್ ಉದ್ಯಮಕ್ಕೆ ನಷ್ಟ'

ಪ್ರಯಾಗರಾಜ್ (ಪಿಟಿಐ): ಇತ್ತೀಚೆಗೆ ಸಂಭವಿಸಿದ ಕಾಲ್ತುಳಿತ ಕಾರಣ ಪ್ರಯಾಗರಾಜ್‌ನ ಹಲವು ಹೋಟೆಲ್‌ಗಳ ಬುಕ್ಕಿಂಗ್‌ನಲ್ಲಿ ತೀವ್ರ ಕುಸಿತ ಉಂಟಾಗಿದೆ.

ಕಾಲ್ತುಳಿತ ಸಂಭವಿಸಿದ್ದರಿಂದ ಮಹಾಕುಂಭ ಮೇಳಕ್ಕೆ ಬರುವ ಭಕ್ತರ ಸಂಖ್ಯೆಯನ್ನು ಪೊಲೀಸರು ನಿಯಂತ್ರಿಸಿದ್ದರು. ಮೇಳಕ್ಕೆ ಬರುವ ಹಲವು ಮಾರ್ಗಗಳನ್ನು ಬಂದ್ ಮಾಡಲಾಗಿತ್ತು. ಈ ಕಾರಣದಿಂದ ಈಗಾಗಲೇ ಬುಕ್ಕಿಂಗ್ ಮಾಡಿಕೊಂಡಿದ್ದ ಭಕ್ತರು ಹೋಟೆಲ್‌ಗಳಿಗೆ ಬರಲು ಸಾಧ್ಯವಾಗಲಿಲ್ಲ. ಇನ್ನೊಂದೆಡೆ, ಕುಂಭಮೇಳಕ್ಕೆ ಬರುವ ಭಕ್ತರ ಸಂಖ್ಯೆಯೇ ಕಡಿಮೆಯಾಗಿದೆ ಎಂದು ಮಾಲೀಕರು ಬೇಸರ ವ್ಯಕ್ತಪಡಿಸಿದ್ದಾರೆ.

'ಕಾಲ್ತುಳಿತ ಘಟನೆ ಬಳಿಕ ಮುಂಗಡ ಬುಕ್ಕಿಂಗ್ ಮಾಡಿದವರು ಸಹ ಆಗಮಿಸುತ್ತಿಲ್ಲ. ಜೊತೆಗೆ, ಪ್ರಯಾಗರಾಜ್‌ನ ಹೋಟೆಲ್‌ಗಳಲ್ಲಿ ಶೇ 40ರಿಂದ ಶೇ 50ರಷ್ಟು ಹೋಟೆಲ್ ಕೊಠಡಿಗಳು ಖಾಲಿಯಾಗಿವೆ' ಎಂದು ಪ್ರಯಾಗರಾಜ್ ಹೋಟೆಲ್ ಮತ್ತು ರೆಸ್ಟೋರೆಂಟ್ ಅಭಿವೃದ್ಧಿ ಸಂಘದ ಅಧ್ಯಕ್ಷ ಸರ್ದಾರ್ ಹರ್ಜೀತ್ ಸಿಂಗ್ ಅವರು ಮಾಹಿತಿ ನೀಡಿದರು.

ವಸಂತ ಪಂಚಮಿ 'ಪವಿತ್ರ ಸ್ನಾನ' ಇಂದು

ಮಹಾಕುಂಭ ನಗರ: ತ್ರಿವೇಣಿ ಸಂಗಮದಲ್ಲಿ ವಸಂತ ಪಂಚಮಿ ದಿನವಾದ ಸೋಮವಾರ ಮೂರು ಕೋಟಿಗೂ ಹೆಚ್ಚಿನ ಸಂಖ್ಯೆಯ ಭಕ್ತರು ಪವಿತ್ರ ಸ್ನಾನ ಮಾಡಲಿದ್ದು, ಯಾವುದೇ ರೀತಿಯ ಅನಾಹುತ ಸಂಭವಿಸದಂತೆ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ.

ಕುಂಭಮೇಳದ ಮೂರನೇ ಪವಿತ್ರ ಸ್ನಾನದ ದಿನವಾದ ವಸಂತ ಪಂಚಮಿಯಂದು ಪವಿತ್ರ ಸ್ನಾನ ಮಾಡಲು ಅಸಂಖ್ಯಾತ ಭಕ್ತರು ಮಹಾಕುಂಭ ನಗರದಲ್ಲಿ ಭಾನುವಾರವೇ ಜಮಾಯಿಸಿದ್ದರು.

33.61 ಕೋಟಿ ಭಕ್ತರಿಂದ ಪವಿತ್ರ ಸ್ನಾನ: ಭಾನುವಾರ ಮಧ್ಯಾಹ್ನ 12 ಗಂಟೆ ವೇಳೆಗೆ 90 ಲಕ್ಷ ಭಕ್ತರು ಗಂಗಾ ಮತ್ತು ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದರು. ಜ. 13ರಿಂದ ಇದುವರೆಗೂ 33.61 ಕೋಟಿ ಭಕ್ತರು ಮಿಂದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತೆಲಂಗಾಣ: ಹಿಂದುಳಿದ ವರ್ಗದವರ ಪ್ರಮಾಣ ಶೇ 46

ಹೈದರಾಬಾದ್ (ಪಿಟಿಐ): ತೆಲಂಗಾಣದ ಒಟ್ಟು 3.70 ಕೋಟಿ ಜನಸಂಖ್ಯೆಯಲ್ಲಿ ಮುಸ್ಲಿಂ ಅಲ್ಪಸಂಖ್ಯಾತರನ್ನು ಹೊರತುಪಡಿಸಿ ಹಿಂದುಳಿದ ವರ್ಗದವರು ಶೇಕಡಾ 46.25 ರಷ್ಟಿದ್ದಾರೆ ಎಂದು ರಾಜ್ಯದಲ್ಲಿ ನಡೆಸಿದ ಜಾತಿ ಸಮೀಕ್ಷೆಯ ವರದಿ ತಿಳಿಸಿದೆ.

ಪರಿಶಿಷ್ಟ ಜಾತಿಯವರು ಶೇ 17.43 ಮತ್ತು ಪರಿಶಿಷ್ಟ ಪಂಗಡದವರು ಶೇ 10.45ರಷ್ಟಿದ್ದಾರೆ. ಇತರೆ ಜಾತಿಗಳಿಗೆ ಸೇರಿದವರು ಶೇ 13.31, ಮುಸ್ಲಿಮರಲ್ಲಿ ಹಿಂದುಳಿದ ವರ್ಗದವರು ಶೇ 10.08 ಹಾಗೂ ಮುಸ್ಲಿಮರಲ್ಲಿ ಇತರೆ ಜಾತಿಗಳಿಗೆ ಸೇರಿದವರು ಶೇ 2.48 ರಷ್ಟಿದ್ದಾರೆ.

ಸಮೀಕ್ಷೆ ನಡೆಸಿರುವ ರಾಜ್ಯ ಯೋಜನಾ ಇಲಾಖೆಯು ತನ್ನ ವರದಿಯನ್ನು ಸಚಿವ ಎನ್. ಉತ್ತಮ್ ಕುಮಾರ್ ರೆಡ್ಡಿ ನೇತೃತ್ವದ ಸಂಪುಟ ಉಪ ಸಮಿತಿಗೆ ಭಾನುವಾರ ಸಲ್ಲಿಸಿದೆ.

ಫೆಬ್ರವರಿ 4ರಂದು ರಾಜ್ಯ ಸಚಿವ ಸಂಪುಟದ ಮುಂದೆ ವರದಿಯನ್ನು ಮಂಡಿಸಲಾಗುವುದು ಎಂದು ಸಚಿವರು ತಿಳಿಸಿದರು. ಅದೇ ದಿನ, ವಿಧಾನಸಭೆಯ ವಿಶೇಷ ಅಧಿವೇಶನದಲ್ಲಿ ವರದಿಯ ಬಗ್ಗೆ ಚರ್ಚೆ ನಡೆಯಲಿದೆ.

ಸಂಖ್ಯೆಗಳಲ್ಲಿ ನೋಡಿದಾಗ, ಮುಸ್ಲಿಂ ಅಲ್ಪಸಂಖ್ಯಾತರನ್ನು ಹೊರತುಪಡಿಸಿ ಹಿಂದುಳಿದ ವರ್ಗದವರು 1.64 ಕೋಟಿ ಮಂದಿ ಇದ್ದಾರೆ. ಪರಿಶಿಷ್ಟ ಜಾತಿಯವರು 61.84 ಲಕ್ಷ, ಪರಿಶಿಷ್ಟ ಪಂಗಡದವರು 37.05 ಲಕ್ಷ, ಮುಸ್ಲಿಮರಲ್ಲಿ ಹಿಂದುಳಿದ ವರ್ಗದವರು 35.76 ಲಕ್ಷ ಹಾಗೂ ಮುಸ್ಲಿಮರಲ್ಲಿ ಇತರೆ ಜಾತಿಗಳಿಗೆ ಸೇರಿದವರು 8.80 ಲಕ್ಷ ಮಂದಿ ಇದ್ದಾರೆ. ರಾಜ್ಯದ ಜನಸಂಖ್ಯೆಯಲ್ಲಿ ಮುಸ್ಲಿಮರ ಒಟ್ಟು ಪ್ರಮಾಣ ಶೇ 12.56ರಷ್ಟಿದೆ ಎಂದು ಸಚಿವರು ಭಾನುವಾರ ಸುದ್ದಿಗಾರರಿಗೆ ಮಾಹಿತಿ ನೀಡಿದರು.

ವರದಿಯನ್ನು ಐತಿಹಾಸಿಕ ಎಂದು ಬಣ್ಣಿಸಿದ ರೆಡ್ಡಿ, 'ಸಮೀಕ್ಷೆಯು 3.54 ಕೋಟಿ ಮಂದಿಯನ್ನು (ಜನಸಂಖ್ಯೆಯ ಶೇ 96.9) ಒಳಗೊಂಡಿದೆ' ಎಂದು ಹೇಳಿದರು.

'ಶೇ 3.1 ರಷ್ಟು ಜನರು (16 ಲಕ್ಷ) ಸಮೀಕ್ಷೆಯ ಅವಧಿಯಲ್ಲಿ ಲಭ್ಯವಿಲ್ಲದ್ದರಿಂದ ಅಥವಾ ಅದರಲ್ಲಿ ಭಾಗವಹಿಸಲು ಆಸಕ್ತಿ ತೋರಿಸದ ಕಾರಣ ಸಮೀಕ್ಷೆಯಿಂದ ಹೊರಗೆ ಉಳಿದಿದ್ದಾರೆ' ಎಂದು ತಿಳಿಸಿದರು.

'ಬುಡಕಟ್ಟು ಸಮುದಾಯಗಳ ಖಾತೆಯನ್ನು ಬ್ರಾಹ್ಮಣರಿಗೆ ನೀಡಿ'

ನವದೆಹಲಿ/ತಿರುವನಂತಪುರ (ಪಿಟಿಐ): 'ಬುಡಕಟ್ಟು ಸಮುದಾಯಗಳಿಗೆ ಸಂಬಂಧಿಸಿ ಖಾತೆಗಳ ಜವಾಬ್ದಾರಿಯನ್ನು ಬ್ರಾಹ್ಮಣ ಅಥವಾ ನಾಯ್ಡು ಸಮುದಾಯಗಳ ಜನರಿಗೆ ನೀಡಬೇಕು' ಎಂಬ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ರಾಜ್ಯ ಸಚಿವ ಸುರೇಶ್ ಗೋಪಿ ಅವರ ಹೇಳಿಕೆಯು ವಿವಾದದ ಸ್ವರೂಪ ಪಡೆದುಕೊಂಡಿದೆ.

ಸುರೇಶ್ ಗೋಪಿ

ವಿವಾದವೆದ್ದ ಬೆನ್ನಲ್ಲೇ ಸುರೇಶ್ ಅವರು ತಮ್ಮ ಹೇಳಿಕೆಯನ್ನು ವಾಪಸ್ ಪಡೆದಿದ್ದಾರೆ ಮತ್ತು ತಮ್ಮ ಹೇಳಿಕೆಗೆ ಸಮರ್ಥನೆಯನ್ನೂ ನೀಡಿದ್ದಾರೆ. 'ನಾನು ಒಳ್ಳೆಯ ಉದ್ದೇಶದಿಂದ ಈ ಹೇಳಿಕೆ ನೀಡಿದ್ದೆ' ಎಂದಿದ್ದಾರೆ.

ದೆಹಲಿ ವಿಧಾನಸಭೆ ಚುನಾವಣೆ ಪ್ರಚಾರದಲ್ಲಿ ಭಾಗವಹಿಸಿ ಸುರೇಶ್ ಅವರು ಮಾತನಾಡಿದರು. 'ಮೇಲ್ವರ್ಗದವರಿಗೆ ಸಂಬಂಧಿಸಿದ ಖಾತೆಗಳ ಜವಾಬ್ದಾರಿಯನ್ನು ಬುಡಕಟ್ಟು ಸಮುದಾಯದ ಜನರಿಗೆ ನೀಡಬೇಕು. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಇಂಥ ಬದಲಾವಣೆಗಳಾಗುವ ಅಗತ್ಯ ಇದೆ' ಎಂದೂ ಹೇಳಿದ್ದರು.

> **ಸುರೇಶ್ ಅವರು ಜಾತಿ ಪದ್ಧತಿಯ ತುತ್ತೂರಿಯಾಗಿದ್ದಾರೆ. ಕುರಿಯನ್, ಕೇರಳವನ್ನು ಅವಮಾನಿಸಿದ್ದಾರೆ. ಈ ಇಬ್ಬರನ್ನು ಸಚಿವ ಸ್ಥಾನದಿಂದ ಕೆಳಗಿಳಿಸಬೇಕು**
> **ಬಿನೋಯ್ ವಿಶ್ವಂ,** ಸಿಪಿಐ ರಾಜ್ಯ ಕಾರ್ಯದರ್ಶಿ, ಕೇರಳ

'ನನ್ನನ್ನು ಬುಡಕಟ್ಟು ವ್ಯವಹಾರಗಳ ಖಾತೆಯ ಸಚಿವನನ್ನಾಗಿ ಮಾಡಿ' ಎಂದು ಇತ್ತೀಚೆಗೆ ಸುರೇಶ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಲ್ಲಿ ಮನವಿ ಮಾಡಿದ್ದರು.

'ಕೇಂದ್ರದಿಂದ ಹೆಚ್ಚಿನ ಅನುದಾನ ಪಡೆಯಲು ಶಿಕ್ಷಣ, ಮೂಲಸೌಕರ್ಯ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ಹಿಂದೆ ಬಿದ್ದಿದ್ದೇವೆ ಎಂದು ಕೇರಳ ಘೋಷಿಸಿಕೊಳ್ಳಬೇಕು' ಎಂದು ಕೇಂದ್ರದ ರಾಜ್ಯ ಖಾತೆ ಸಚಿವ ಕೇರಳದ ಜಾರ್ಜ್ ಕುರಿಯನ್ ಅವರು ನೀಡಿದ ಹೇಳಿಕೆಯ ಕುರಿತೂ ವಿವಾದವೆದ್ದಿದೆ. ಕೇರಳದ ಈ ಇಬ್ಬರು ರಾಜಕಾರಣಿಗಳ ಬಗ್ಗೆ ಕೇರಳದಾದ್ಯಂತ ಆಕ್ರೋಶ ವ್ಯಕ್ತವಾಗಿದೆ.

'ಈಗಲ್' ರಚಿಸಿದ ಕಾಂಗ್ರೆಸ್

ನವದೆಹಲಿ (ಪಿಟಿಐ): ಚುನಾವಣಾ ಆಯೋಗದ ಕಾರ್ಯವಿಧಾನವನ್ನು ಪರಾಮರ್ಶಿಸಲು 'ನಾಯಕರ ಹಾಗೂ ತಜ್ಞರ ವಿಶೇಷಾಧಿಕಾರ ಕಾರ್ಯಪಡೆ'ಯೊಂದನ್ನು (ಎಂಪವರ್ಡ್ ಆ್ಯಕ್ಷನ್ ಗ್ರೂಪ್ ಆಫ್ ಲೀಡರ್ಸ್ ಆ್ಯಂಡ್ ಎಕ್ಸ್‌ಪರ್ಟ್ಸ್–ಈಗಲ್) ಕಾಂಗ್ರೆಸ್ ಭಾನುವಾರ ರಚಿಸಿದೆ.

ಅಜಯ್ ಮಾಕನ್, ದಿಗ್ವಿಜಯ ಸಿಂಗ್, ಅಭಿಶೇಕ್ ಮನು ಸಿಂಘ್ವಿ, ಪ್ರವೀಣ್ ಚಕ್ರವರ್ತಿ, ಪವನ್ ಖೇರಾ, ಗುರ್ದೀಪ್ ಸಿಂಗ್ ಸಪ್ಪಾಲ್, ನಿತಿನ್ ರಾವುತ್ ಮತ್ತು ಚಲ್ಲಾ ವಂಶಿ ಚಂದ್ ರೆಡ್ಡಿ– ಈ ಪಡೆಯ ಸದಸ್ಯರು. ಈ ಪಡೆಯು ತಕ್ಷಣದಿಂದಲೇ ಕಾರ್ಯಾರಂಭ ಆಗುವಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಆದೇಶ ಹೊರಡಿಸಿದ್ದಾರೆ.

ಮಹಾರಾಷ್ಟ್ರದಲ್ಲಿ ನಡೆದ ವಿಧಾನಸಭೆ ಚುನಾವಣೆಯ ಕುರಿತು ಈ ಪಡೆಯು ಆದಷ್ಟು ಬೇಗ ವರದಿ ನೀಡಲಿದೆ.

ನವದೆಹಲಿ: ಕೊಳೆಗೇರಿ ನಿವಾಸಿಗಳಿಗೆ ಹಣ ಹಂಚಿಕೆ– ಕೇಜ್ರಿವಾಲ್ ಆರೋಪ

ಮತದಾನದ ಹಕ್ಕು ಕಸಿಯಲು ಸಂಚು

ನವದೆಹಲಿ (ಪಿಟಿಐ): ಮುಂಬರುವ ನವದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಕೊಳೆಗೇರಿ ನಿವಾಸಿಗಳು ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗದ ಜನರ ಮತದಾನದ ಹಕ್ಕು ಕಸಿಯುವ ವ್ಯವಸ್ಥಿತ ಹುನ್ನಾರ ನಡೆದಿದೆ ಎಂದು ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಆರೋಪ ಮಾಡಿದ್ದಾರೆ.

'ಕೊಳೆಗೇರಿಗಳು ಮತ್ತು ಧೋಬಿ ಘಾಟ್‌ನಲ್ಲಿರುವ ನಿವಾಸಿಗಳು ಈ ಬಗ್ಗೆ ನನಗೆ ದೂರು ನೀಡಿದ್ದಾರೆ' ಎಂದು ಅವರು ಭಾನುವಾರ ವಿಡಿಯೊ ಸಂದೇಶದಲ್ಲಿ ಹೇಳಿದ್ದಾರೆ. ನಮ್ಮ ಪ್ರತಿಸ್ಪರ್ಧಿ ಪಕ್ಷದ ಕಾರ್ಯಕರ್ತರು ಅವರ ಬಳಿ ತೆರಳಿ ಹಣ ಹಂಚುತ್ತಿದ್ದಾರೆ ಎಂದೂ ಆರೋಪಿಸಿದ್ದಾರೆ.

'ಧೋಬಿ ಘಾಟ್, ಕೊಳೆಗೇರಿಗಳು ಸೇರಿದಂತೆ ಎಲ್ಲೆಡೆಯಿಂದ ನನಗೆ ಕರೆಗಳು ಬರುತ್ತಿವೆ. ಪಕ್ಷವೊಂದರ ಕಾರ್ಯಕರ್ತರು ಮನೆ ಮನೆಗೆ ತೆರಳಿ ಮತದಾರರಿಗೆ ಆಮಿಷವೊಡ್ಡುತ್ತಿದ್ದಾರೆ. ₹3,000 ತೆಗೆದುಕೊಳ್ಳಿ, ಚುನಾವಣಾ ಆಯೋಗವು ಅಧಿಕಾರಿಗಳನ್ನು ನಿಮ್ಮ ಮನೆಗೆ ಕಳುಹಿಸಿ, ಮತದಾನಕ್ಕೆ ವ್ಯವಸ್ಥೆ ಮಾಡುತ್ತಾರೆ. ಆ ಬಳಿಕ ಬೆರಳಿಗೆ ಅಳಿಸಲಾಗದ ಶಾಯಿ ಹಾಕಲಾಗುತ್ತದೆ. ನೀವು ಮತಗಟ್ಟೆಗೆ ಹೋಗಬೇಡಿ ಎಂದು ಅವರು ಮತದಾರರಿಗೆ ಸುಳ್ಳು ಮಾಹಿತಿ ನೀಡುತ್ತಿದ್ದಾರೆ. ಇದು ಜನರ ವಿರುದ್ಧ ನಡೆದಿರುವ ದೊಡ್ಡ ಪಿತೂರಿ' ಎಂದು ದೂರಿದ್ದಾರೆ.

'ಅವರು ಹಣ ನೀಡಿದರೆ ಅದನ್ನು ತೆಗೆದುಕೊಳ್ಳಿ. ಆದರೆ ಬೆರಳಿಗೆ ಶಾಯಿ ಹಾಕಲು ಅವಕಾಶ ನೀಡಬೇಡಿ. ಮತದಾನ ಮಾಡದೆಯೇ ಶಾಯಿ ಹಾಕಿಸಿಕೊಂಡರೆ, ನಕಲಿ ಮತದಾನದ ಆರೋಪದಲ್ಲಿ ನೀವು ಬಂಧನಕ್ಕೆ ಒಳಗಾಗುತ್ತೀರಿ' ಎಂದು ಅವರು ಎಚ್ಚರಿಸಿದರು.

ಬಿಜೆಪಿ 'ಗೂಂಡಾಗಿರಿ': ಮತದಾನದ ದಿನಾಂಕ ಸಮೀಪಿಸುತ್ತಿರುವಂತೆಯೇ ಕೇಜ್ರಿವಾಲ್ ಅವರು ಬಿಜೆಪಿ ವಿರುದ್ಧ ವಾಗ್ದಾಳಿ ತೀವ್ರಗೊಳಿಸಿದ್ದಾರೆ.

'ಎಎಪಿಯು ಈ ಚುನಾವಣೆಯಲ್ಲಿ ಗೆಲ್ಲುವುದು ಖಚಿತವಾಗಿರುವುದರಿಂದ ಗೃಹ ಸಚಿವ ಅಮಿತ್ ಶಾ ಕಂಗೆಟ್ಟಿದ್ದಾರೆ. ಆದ್ದರಿಂದ ಬಿಜೆಪಿಯು ಗೂಂಡಾಗಿರಿ ನಡೆಸುತ್ತಿದೆ. ಬಿಜೆಪಿ ಪಕ್ಷ ಸೇರಿ, ಇಲ್ಲದಿದ್ದರೆ ಬಂಧನಕ್ಕೆ ಒಳಗಾಗಿ ಎಂದು ನಮ್ಮ ಮುಖಂಡರು ಹಾಗೂ ಕಾರ್ಯಕರ್ತರನ್ನು ಬೆದರಿಸುತ್ತಿದ್ದಾರೆ' ಎಂದು ಆರೋಪಿಸಿದ್ದಾರೆ.

'ಸ್ವತಂತ್ರ ವೀಕ್ಷಕರ ನೇಮಿಸಿ'

ಕೇಜ್ರಿವಾಲ್

ತಾವು ಸ್ಪರ್ಧಿಸುತ್ತಿರುವ ನವದೆಹಲಿ ಕ್ಷೇತ್ರದಲ್ಲಿ ಮತದಾನ ಪ್ರಕ್ರಿಯೆ ಸುಸೂತ್ರವಾಗಿ ನಡೆಯಲು ಸ್ವತಂತ್ರ ವೀಕ್ಷಕರನ್ನು ನೇಮಿಸುವಂತೆ ಕೋರಿ ಕೇಜ್ರಿವಾಲ್ ಅವರು ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದಾರೆ.

'ಬಿಜೆಪಿ ಕಾರ್ಯಕರ್ತರು ನಮ್ಮ ಪಕ್ಷದ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದ್ದು, ಅವರನ್ನು ಬಂಧಿಸಬೇಕು. ತಪ್ಪಿತಸ್ಥರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದ ಪೊಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸಬೇಕು' ಎಂದೂ ಪತ್ರದಲ್ಲಿ ಆಗ್ರಹಿಸಿದ್ದಾರೆ.

'ಬಜೆಟ್: ಪ್ರತಿ ಕುಟುಂಬದಲ್ಲೂ ಸಂತಸ'

ನವದೆಹಲಿ (ಪಿಟಿಐ): ಕೇಂದ್ರ ಬಜೆಟ್ ಪ್ರತಿ ಕುಟುಂಬದಲ್ಲೂ ಸಂತೋಷವನ್ನು ತುಂಬಿದೆ ಎಂದು ಪ್ರತಿಪಾದಿಸಿದ ಪ್ರಧಾನಿ ನರೇಂದ್ರ ಮೋದಿ, 'ಇಂತಹ ಮಧ್ಯಮ ವರ್ಗದ ಸ್ನೇಹಿ ಬಜೆಟ್ ಮಂಡನೆಯಾಗಿರುವುದು ಭಾರತದ ಇತಿಹಾಸದಲ್ಲಿ ಇದೇ ಮೊದಲು' ಎಂದು ಭಾನುವಾರ ಹೇಳಿದ್ದಾರೆ.

ಚುನಾವಣಾ ರ‍್ಯಾಲಿಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಬಜೆಟ್‌ನಲ್ಲಿ ಮಧ್ಯಮ ವರ್ಗದವರಿಗೆ ನೀಡಿರುವ ಕೊಡುಗೆಗಳನ್ನು ಪ್ರಸ್ತಾಪಿಸಿದರು. '₹12 ಲಕ್ಷದವರೆಗೆ ಆದಾಯ ಹೊಂದಿರುವವರ ಮೇಲಿನ ತೆರಿಗೆಯ ಭಾರ ಸ್ವಾತಂತ್ರ್ಯ ನಂತರ ಈ ರೀತಿಯಲ್ಲಿ ಒಮ್ಮೆಯೂ ತಗ್ಗಿಯೇ ಇಲ್ಲ' ಎಂದರು.

> **ಎಎಪಿಯ ದುರಾಡಳಿತಕ್ಕೆ ದೆಹಲಿಯ ಜನರು ಸಾಕಷ್ಟು ಬೆಲೆ ತೆತ್ತಿದ್ದಾರೆ. ಆದ್ದರಿಂದ ಈ ಬಾರಿ ಎಎಪಿ ಸರ್ಕಾರವನ್ನು ಕಿತ್ತುಹಾಕಲು ನಿರ್ಧರಿಸಿದ್ದಾರೆ**
> **ನರೇಂದ್ರ ಮೋದಿ,** ಪ್ರಧಾನಿ

ಆಮ್ ಆದ್ಮಿ ಪಕ್ಷ ಸರ್ಕಾರವು ಸುಳ್ಳು ಭರವಸೆಗಳನ್ನು ನೀಡುತ್ತಾ ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ಆರೋಪಿಸಿದ ಪ್ರಧಾನಿ, 'ಎಎಪಿ ಸರ್ಕಾರದ ಕೆಟ್ಟ ನೀತಿಗಳಿಂದಾಗಿ ಹಲವು ಕಾರ್ಖಾನೆಗಳ ಬಾಗಿಲು ಮುಚ್ಚಿವೆ. ಜನರನ್ನು ಲೂಟಿ ಮಾಡಿದವರು ಅದಕ್ಕೆ ತಕ್ಕ ಬೆಲೆ ತೆರಬೇಕಾಗುತ್ತದೆ' ಎಂದು ಎಚ್ಚರಿಸಿದರು.

'ಎಎಪಿಯ ಸುಳ್ಳು ಭರವಸೆಗಳು ಒಂದೆಡೆಯಾದರೆ, ಮೋದಿ ಅವರ ಗ್ಯಾರಂಟಿಗಳು ಇನ್ನೊಂದೆಡೆ. ಎಎಪಿಯು ತನ್ನ 11 ವರ್ಷಗಳ ಆಡಳಿತದಲ್ಲಿ ರಾಷ್ಟ್ರದ ರಾಜಧಾನಿಯನ್ನು ವಿನಾಶದತ್ತ ತಳ್ಳಿದೆ. ದೆಹಲಿಯ ಅಭಿವೃದ್ಧಿ ಮತ್ತು ಬೆಳವಣಿಗೆಗೆ ಬದ್ಧವಾಗಿರುವ ಡಬಲ್ ಎಂಜಿನ್ ಸರ್ಕಾರವನ್ನು ಚುನಾಯಿಸಲು ಜನರು ತೀರ್ಮಾನಿಸಿದ್ದಾರೆ' ಎಂದು ಹೇಳಿದರು.

ನ್ಯಾಕ್ ಪರಿಶೀಲನಾ ಸಮಿತಿ ಅಧ್ಯಕ್ಷ ಸೆರೆ

ಒಂದನೇ ಪುಟದಿಂದ...

ಕೆಎಲ್‌ಇಎಫ್ ಸಂಸ್ಥೆಯ ಪದಾಧಿಕಾರಿಗಳು ನ್ಯಾಕ್ ಪರಿಶೀಲನಾ ತಂಡಕ್ಕೆ ನಗದು, ಚಿನ್ನಾಭರಣ, ಮೊಬೈಲ್ ಫೋನ್ ಮತ್ತು ಲ್ಯಾಪ್‌ಟಾಪ್ ನೀಡಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು. ಇದಕ್ಕೆ ಸಂಬಂಧಿಸಿದಂತೆ ಸಿಬಿಐ ಪ್ರಕರಣ ದಾಖಲಿಸಿಕೊಂಡು, ಶೋಧ ಕಾರ್ಯ ನಡೆಸಿದೆ.

ಲಂಚ ಪಡೆದ ಆರೋಪದಲ್ಲಿ ನ್ಯಾಕ್ ಪರಿಶೀಲನಾ ಸಮಿತಿಯ ಅಧ್ಯಕ್ಷ, ಜಾರ್ಖಂಡ್‌ನ ರಾಮಚಂದ್ರ ಚಂದ್ರವಂಶಿ ವಿಶ್ವವಿದ್ಯಾಲಯದ ಕುಲಪತಿ- ಸಮರೇಂದ್ರ ನಾಥ್ ಸಹಾ ಅವರನ್ನು ಬಂಧಿಸಲಾಗಿದೆ.

ರಾಜೀವ್ ಸಿಜಾರಿಯಾ (ಜೆಎನ್‌ಯು ಪ್ರಾಧ್ಯಾಪಕ), ಡಿ.ಗೋಪಾಲ್ (ಡೀನ್, ಭಾರತ್ ಇನ್‌ಸ್ಟಿಟ್ಯೂಟ್ ಆಫ್ ಲಾ), ರಾಜೇಶ್ ಸಿಂಗ್ ಪವಾರ್ (ಡೀನ್, ಜಾಗರಣ್ ಲೇಕ್‌ಸಿಟಿ ವಿ.ವಿ), ಮಾನಸ್ ಕುಮಾರ್ ಮಿಶ್ರಾ (ನಿರ್ದೇಶಕರು, ಜಿ.ಎಲ್.ಬಜಾಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಮ್ಯಾನೇಜ್‌ಮೆಂಟ್), ಗಾಯತ್ರಿ ದೇವರಾಜ (ಪ್ರಾಧ್ಯಾಪಕರು, ದಾವಣಗೆರೆ ವಿ.ವಿ) ಮತ್ತು ಬುಲು ಮಹಾರಾಣಾ (ಪ್ರಾಧ್ಯಾಪಕರು, ಸಂಬಲ್‌ಪುರ ವಿ.ವಿ) ಅವರು ಸಿಬಿಐ ಬಂಧಿಸಿರುವ ನ್ಯಾಕ್ ಪರಿಶೀಲನಾ ಸಮಿತಿ ಸದಸ್ಯರು.

ದಾವಣಗೆರೆ ವಿ.ವಿ.ಯಲ್ಲಿ ಸಿಬಿಐ ಶೋಧ?

ದಾವಣಗೆರೆ: ಇಲ್ಲಿನ ದಾವಣಗೆರೆ ವಿಶ್ವವಿದ್ಯಾಲಯದ ಮೈಕ್ರೊ ಬಯಾಲಜಿ ವಿಭಾಗದ ಪ್ರೊ.ಗಾಯತ್ರಿ ದೇವರಾಜ ಅವರನ್ನು ಭ್ರಷ್ಟಾಚಾರ ಪ್ರಕರಣವೊಂದರಲ್ಲಿ ವಶಕ್ಕೆ ಪಡೆಯುವುದಕ್ಕೂ ಮುನ್ನ ಕೇಂದ್ರೀಯ ತನಿಖಾ ದಳದ (ಸಿಬಿಐ) ಅಧಿಕಾರಿಗಳು ವಿಶ್ವವಿದ್ಯಾಲಯದಲ್ಲಿ ಶೋಧ ನಡೆಸಿದ್ದರು ಎನ್ನಲಾಗಿದೆ.

ನ್ಯಾಕ್ ತಪಾಸಣಾ ಸಮಿತಿಯ ಸದಸ್ಯರೂ ಆಗಿರುವ ಗಾಯತ್ರಿ ಅವರನ್ನು ಸಿಬಿಐ ಅಧಿಕಾರಿಗಳು ಈಚೆಗೆ ವಿಚಾರಣೆಗೆ ಒಳಪಡಿಸಿದ್ದರು. ವಿಶ್ವವಿದ್ಯಾಲಯದ ಕುಲಸಚಿವೆಯಾಗಿಯೂ ಕಾರ್ಯನಿರ್ವಹಿಸಿದ್ದ ಅವರ ನಿವಾಸಕ್ಕೂ ಭೇಟಿ ನೀಡಿ ಪರಿಶೀಲಿಸಿದ್ದರು ಎಂದು ಮೂಲಗಳು ಮಾಹಿತಿ ನೀಡಿವೆ.

'ಸಿಬಿಐ ಅಧಿಕಾರಿಗಳು ಪ್ರೊ.ಗಾಯತ್ರಿ ಅವರನ್ನು ಬಂಧಿಸಿರುವ ವಿಚಾರ ಗಮನಕ್ಕೆ ಬಂದಿಲ್ಲ. ವಿಶ್ವವಿದ್ಯಾಲಯದಲ್ಲಿ ಶೋಧ ನಡೆಸಿರುವ ಬಗ್ಗೆಯೂ ಮಾಹಿತಿ ಇಲ್ಲ' ಎಂದು ಕುಲಪತಿ ಪ್ರೊ.ಬಿ.ಡಿ.ಕುಂಬಾರ ತಿಳಿಸಿದ್ದಾರೆ.

ಇತರ ಆರೋಪಿಗಳು

'ಕೆಎಲ್‌ಇಎಫ್ ಅಧ್ಯಕ್ಷ ಕೋನೇರು ಸತ್ಯನಾರಾಯಣ, ನ್ಯಾಕ್ ಮಾಜಿ ಉಪ ಸಲಹೆಗಾರ ಎಲ್.ಮಂಜುನಾಥ ರಾವ್, ಬೆಂಗಳೂರು ವಿ.ವಿ ಪ್ರಾಧ್ಯಾಪಕ ಐಕ್ಯುಎಸಿ–ನ್ಯಾಕ್ ನಿರ್ದೇಶಕ ಎಂ.ಹನುಮಂತಪ್ಪ ಮತ್ತು ನ್ಯಾಕ್ ಸಲಹೆಗಾರ ಎಂ.ಎಸ್.ಶ್ಯಾಮಸುಂದರ್ ಅವರ ಹೆಸರು ಎಫ್‌ಐಆರ್‌ನಲ್ಲಿ ಇದೆ. ಆದರೆ ಅವರನ್ನು ಇನ್ನೂ ಬಂಧಿಸಿಲ್ಲ' ಎಂದು ಸಿಬಿಐ ಹೇಳಿದೆ.

ಸರ್ಕಾರದ ವಿರುದ್ಧ ರಾಹುಲ್, ಪ್ರಿಯಾಂಕಾ ವಾಗ್ದಾಳಿ

ಅಯೋಧ್ಯೆ: ದಲಿತ ಮಹಿಳೆ ಶವ ಪತ್ತೆ

ನವದೆಹಲಿ(ಪಿಟಿಐ): ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ಗುರುವಾರ ರಾತ್ರಿ ನಾಪತ್ತೆಯಾಗಿದ್ದ 22 ವರ್ಷದ ದಲಿತ ಮಹಿಳೆಯೊಬ್ಬರು ಗ್ರಾಮ ಸಮೀಪವೇ ನಾಲೆಯೊಂದರಲ್ಲಿ ಶನಿವಾರ ಶವವಾಗಿ ಪತ್ತೆಯಾಗಿದ್ದಾರೆ.

ಈ ಘಟನೆ ಬಗ್ಗೆ ಬಿಜೆಪಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿರುವ ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ಅವರು, ಕೊಲೆ ಆರೋಪಿಗಳಿಗೆ ಕಠಿಣ ಶಿಕ್ಷೆಯಾಗಬೇಕು. ಈ ಪ್ರಕರಣದಲ್ಲಿ ತಕ್ಷಣ ಕ್ರಮ ತೆಗೆದುಕೊಳ್ಳದಿರುವ ಪೊಲೀಸ್ ಅಧಿಕಾರಿಗಳ ವಿರುದ್ಧವೂ ಕ್ರಮ ಆಗಬೇಕು ಎಂದು ಆಗ್ರಹಿಸಿದ್ದಾರೆ.

ಮಹಿಳೆ ಗುರುವಾರ ರಾತ್ರಿಯಿಂದ ನಾಪತ್ತೆಯಾಗಿದ್ದರು. ಹುಡುಕಾಟ ನಡೆಸಿದಾಗ ಗ್ರಾಮದಿಂದ 500 ಮೀಟರ್ ದೂರದಲ್ಲಿರುವ ಸಣ್ಣ ಕಾಲುವೆಯಲ್ಲಿ ಆಕೆಯ ಶವ ಶನಿವಾರ ಬೆಳಿಗ್ಗೆ ಪತ್ತೆಯಾಯಿತು. ಶವದ ಮೈಮೇಲೆ ಬಟ್ಟೆ ಇರಲಿಲ್ಲ. ಕೈಕಾಲುಗಳನ್ನು ಹಗ್ಗಗಳಿಂದ ಕಟ್ಟಲಾಗಿತ್ತು. ಕಣ್ಣುಗಳು ಇರಲಿಲ್ಲ. ದೇಹದ ಮೇಲೆ ಆಳ ಗಾಯಗಳಾಗಿವೆ. ಮೂಳೆ ಮುರಿದಿವೆ. ಆಕೆಯನ್ನು ಕೊಲೆ ಮಾಡಲಾಗಿದೆ ಎಂದು ಕುಟುಂಬದವರು ಆರೋಪಿಸಿದ್ದಾರೆ.

ನಾಪತ್ತೆ ಬಗ್ಗೆ ಶುಕ್ರವಾರವೇ ದೂರು ನೀಡಿದರೂ ಪೊಲೀಸರು ಕ್ರಮ ತೆಗೆದುಕೊಳ್ಳಲಿಲ್ಲ. ಪೊಲೀಸ್ ಅಧಿಕಾರಿಗಳು ನಿಷ್ಕ್ರಿಯತೆ ತೋರಿಸಿದರು ಎಂದು ಕುಟುಂಬ ಆರೋಪಿಸಿದೆ.

'ಅಯೋಧ್ಯೆಯಲ್ಲಿ ದಲಿತ ಮಹಿಳೆಯನ್ನು ಕ್ರೂರವಾಗಿ ಹತ್ಯೆ ಮಾಡಿರುವುದು ಅತ್ಯಂತ ನಾಚಿಕೆಗೇಡಿನ ಸಂಗತಿ. ಇದು ಹೃದಯ ವಿದ್ರಾವಕ ಘಟನೆ. ಎಷ್ಟು ದಿನ ಮತ್ತು ಎಷ್ಟು ಕುಟುಂಬಗಳು ಹೀಗೆ ನರಳಬೇಕು? ಬಹುಜನ ವಿರೋಧಿ ಬಿಜೆಪಿ ಆಡಳಿತದಲ್ಲಿ, ವಿಶೇಷವಾಗಿ ಉತ್ತರ ಪ್ರದೇಶದಲ್ಲಿ, ಘೋರ ದೌರ್ಜನ್ಯಗಳು, ಅನ್ಯಾಯಗಳು ಮತ್ತು ದಲಿತರ 'ಹತ್ಯೆಗಳು ಹೆಚ್ಚುತ್ತಿವೆ' ಎಂದು ರಾಹುಲ್ ಗಾಂಧಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಅಯೋಧ್ಯೆಯಲ್ಲಿ ಭಾಗವತ ಕಥೆ ಕೇಳಲು ಹೋಗಿದ್ದ ದಲಿತ ಹೆಣ್ಣುಮಗಳ ಮೇಲೆ ಎಸಗಿದ ಅನಾಗರಿಕ ಕೃತ್ಯ, ಕ್ರೌರ್ಯ ಮಾನವೀಯತೆಗೆ ನಾಚಿಕೆ ಹುಟ್ಟಿಸುತ್ತದೆ. ಬಿಜೆಪಿಯ ಜಂಗಲ್ ರಾಜ್‌ನಲ್ಲಿ ದಲಿತರು, ಆದಿವಾಸಿಗಳು, ಹಿಂದುಳಿದವರು ಮತ್ತು ಬಡವರ ಗೋಳು ಕೇಳಲು ಯಾರೂ ಇಲ್ಲ. ಉತ್ತರ ಪ್ರದೇಶ ಸರ್ಕಾರವೆಂದರೆ, ದಲಿತರ ಮೇಲಿನ ದೌರ್ಜನ್ಯಕ್ಕೆ ಅನ್ವರ್ಥಕವಾಗಿದೆ' ಎಂದು ಪ್ರಿಯಾಂಕಾ ಗಾಂಧಿ ವಾಗ್ದಾಳಿ ನಡೆಸಿದ್ದಾರೆ.

ಪೊಲೀಸರು ಶುಕ್ರವಾರ ದೂರು ಸ್ವೀಕರಿಸಿದ ನಂತರ ನಾಪತ್ತೆ ವರದಿ ದಾಖಲಿಸಿದ್ದಾರೆ. ತನಿಖೆ ಆರಂಭಿಸಿದ್ದು, ಆರೋಪಿಗಳ ಪತ್ತೆಗೆ ಪ್ರಯತ್ನಗಳು ನಡೆಯುತ್ತಿವೆ ಎಂದು ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಅಶುತೋಷ್ ತಿವಾರಿ ತಿಳಿಸಿದ್ದಾರೆ.

ಸೊಳ್ಳೆ ನಿಯಂತ್ರಣಕ್ಕೆ ಗಂಬೂಸಿಯಾ, ಗಪ್ಪಿ: ಕೇಂದ್ರಕ್ಕೆ ಎನ್‌ಜಿಟಿ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ವಿವಿಧೆಡೆ ಸೊಳ್ಳೆಗಳ ನಿಯಂತ್ರಣಕ್ಕೆ ಜಲ ಮೂಲಗಳಲ್ಲಿ ಬಿಡುಗಡೆ ಮಾಡುತ್ತಿರುವ 'ಗಂಬೂಸಿಯಾ ಅಫಿನಿಸ್' ಮತ್ತು 'ಪೊಸಿಲಿಯಾ ರೆಟಿಕ್ಯುಲಾಟಾ' (ಗಪ್ಪಿ) ಜಾತಿಯ ಮೀನುಗಳ ಕುರಿತು ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ರಾಷ್ಟ್ರೀಯ ಹಸಿರು ನ್ಯಾಯಪೀಠ (ಎನ್‌ಜಿಟಿ) ನೋಟಿಸ್ ಜಾರಿಗೊಳಿಸಿದೆ.

ಈ ಕುರಿತ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪ್ರಕಾಶ್ ಶ್ರೀವಸ್ತಾವ ಅವರ ನೇತೃತ್ವದ ಎನ್‌ಜಿಟಿ ಪ್ರಧಾನ ಪೀಠ ಕೇಂದ್ರಕ್ಕೆ ನೋಟಿಸ್ ನೀಡಿದೆ.

ಕರ್ನಾಟಕ, ಅಸ್ಸಾಂ, ಅರುಣಾಚಲ ಪ್ರದೇಶ, ಗುಜರಾತ್, ಮಹಾರಾಷ್ಟ್ರ, ರಾಜಸ್ಥಾನ, ತಮಿಳುನಾಡು, ಉತ್ತರ ಪ್ರದೇಶ, ಒಡಿಶಾ, ಪಂಜಾಬ್ ಮತ್ತು ಆಂಧ್ರ ಪ್ರದೇಶಗಳಲ್ಲಿ ಕೆರೆ, ಕಟ್ಟೆ ಮತ್ತಿತರ ಜಲ ಮೂಲಗಳಲ್ಲಿ ಸೊಳ್ಳೆ ನಿಯಂತ್ರಿಸಲು 'ಗಂಬೂಸಿಯಾ ಅಫಿನಿಸ್' ಮೀನನ್ನು ಬಿಡುಗಡೆ ಮಾಡಲಾಗುತ್ತಿದೆ. ಅಲ್ಲದೆ ಮಹಾರಾಷ್ಟ್ರ, ಕರ್ನಾಟಕ, ಪಂಜಾಬ್ ಮತ್ತು ಒಡಿಶಾ ರಾಜ್ಯಗಳಲ್ಲಿ 'ಗಪ್ಪಿ' ಜಾತಿಯ ಮೀನನ್ನು ಬಿಡಲಾಗುತ್ತಿದೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ಆಕ್ರಮಣಕಾರಿ ಪ್ರಭೇದಗಳ ಕುರಿತು ಅಧ್ಯಯನ ನಡೆಸುವ ತಜ್ಞರ ಗುಂಪಿನ (ಐಎಸ್‌ಎಸ್‌ಜಿ) ವರದಿಯ ಪ್ರಕಾರ, ಈ ಮೀನುಗಳು ವಿಶ್ವದ 100 ಅತಿ ಅಕ್ರಮಣಕಾರಿ ಜಾತಿಗಳ ಪಟ್ಟಿಯಲ್ಲಿವೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರವು ಈ ಎರಡೂ ಪ್ರಭೇದದ ಮೀನುಗಳನ್ನು ಆಕ್ರಮಣಕಾರಿ ಎಂದು ಘೋಷಿಸಿದೆ. ಅವುಗಳಿಂದ ಸ್ಥಳೀಯ ಮೀನು ಪ್ರಭೇದಗಳಿಗೆ ಆಹಾರದ ಕೊರತೆ ಉಂಟಾಗಿ, ಜಲಚರ ಪರಿಸರ ವ್ಯವಸ್ಥೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ಹೇಳಿದೆ ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.

ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ದೇಶಗಳಲ್ಲಿ ಈ ಸೊಳ್ಳೆ ನಿಯಂತ್ರಣ ಮೀನುಗಳ ಮೇಲೆ ನಿಷೇಧ ಹೇರಲಾಗಿದೆ ಎಂಬುದನ್ನು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ರಾಜಾಡಳಿತದ ಮೇಲೊಂದು ನೋಟ; ಇಂದಿನ ಆಡಳಿತಗಾರರ ಮನಃಸ್ಥಿತಿಗೆ ಟೀಕೆ

'ಕಾದಾಡಿದ ರಾಜರು; ಕಾಡುವ ರಾಜಕಾರಣಿಗಳು'

• ವಿಕ್ರಂ ಕಾಂತಿಕೆರೆ

ಜೈಪುರ: ದಕ್ಷಿಣ ಭಾರತದ ರಾಜರ ಆಡಳಿತ ವೈಖರಿ, ಅಂತಃಪುರದಲ್ಲಿ ರಾಣಿಯರ ವಿಲಾಸ, 'ಸೆರೆ'ಯಾದ ಮಹಿಳೆಯರ ಸ್ಥಿತಿಗತಿಯ ಕುರಿತ ಚರ್ಚೆ ಜೈಪುರ ಸಾಹಿತ್ಯ ಉತ್ಸವದಲ್ಲಿ ಭಾನುವಾರ ಸಾಹಿತಿ- ಚಿಂತಕರ ಮನಮಿಡಿಯುವಂತೆ ಮಾಡಿತು.

ದೇಶ ಮತ್ತು ರಾಜ್ಯಗಳಲ್ಲಿ ಈಗಲೂ ದಬ್ಬಾಳಿಕೆಯ ಪ್ರವೃತ್ತಿ ಇದೆ ಎಂಬ ಆರೋಪವೂ ಗೋಷ್ಠಿಗಳಲ್ಲಿ ಕೇಳಿಬಂತು. ಮುಂಬೈಯಲ್ಲಿ ನಡೆದ ಚಲನಚಿತ್ರೋತ್ಸವಕ್ಕೆ ರಾಜಕಾರಣಿಗಳನ್ನು ಆಹ್ವಾನಿಸದೇ ಇದ್ದುದನ್ನು 'ಅವಮಾನ' ಎಂದು ಬಾಳಾ ಠಾಕ್ರೆ ಆರೋಪಿಸಿದ್ದನ್ನು ನಟ, ನಿರ್ಮಾಪಕ ಮತ್ತು ನಿರ್ದೇಶಕ ಅಮೋಲ್ ಪಾಲೇಕರ್ ಪ್ರಸ್ತಾಪಿಸಿದರೆ, ಮತದಾರರು ಮತ್ತು ಮಾಧ್ಯಮಗಳನ್ನು ಕೇಂದ್ರ ಸರ್ಕಾರ ತನ್ನ ಸುಪರ್ದಿಯಲ್ಲಿ ಇರಿಸಿಕೊಳ್ಳಲು ಪ್ರಯತ್ನಿಸುತ್ತಿದೆ, ಅದಕ್ಕೆ ಬಗ್ಗದವರು ತೊಂದರೆ ಅನುಭವಿಸುವಂತಾಗಿದೆ ಎಂದು ಪತ್ರಕರ್ತ ರಾಜ್‌ದೀಪ್ ಸರದೇಸಾಯಿ ಆರೋಪಿಸಿದರು.

'ಪುರುಷಾರ್ಥ' ಎಂಬ ಗೋಷ್ಠಿಯಲ್ಲಿ ಶಶಿ ತರೂರು ಮಾತನಾಡಿದರು. ಫ್ರಾನ್ಸಿಸ್ ಮಿರಾಲ್ಸ್ ಮತ್ತು ಪಲ್ಲವಿ ಅಯ್ಯರ್ ಪಾಲ್ಗೊಂಡಿದ್ದರು

'ಬೈಠಕ್'ನಲ್ಲಿ ನಡೆದ 'ನೆಲ ಮತ್ತು ಜಲದ ಒಡೆಯರು: ಚೋಳರ ಆಡಳಿತದ ಇತಿಹಾಸ' ಎಂಬ ಗೋಷ್ಠಿಯಲ್ಲಿ ಮನು ಎಸ್.ಪಿಳ್ಳೆ ಜೊತೆ ಮಾತುಕತೆ ನಡೆಸಿದ ಇತಿಹಾಸಕಾರ ಅನಿರುದ್ಧ ಕನಿಸೆಟ್ಟಿ ಅವರು ಯುದ್ಧದಲ್ಲಿ ಸಾಗಾಟ ಸಾಮರ್ಥ್ಯವು ಗೆಲುವಿಗೆ ಪ್ರಮುಖ ಕಾರಣವಾಗುತ್ತದೆ. ಚೋಳರು ಈ ವಿಷಯದಲ್ಲಿ ಮುಂದಿದ್ದರು ಎಂದರು.

'ತಂಜಾವೂರಿನ ವಿಮಾನೇಶ್ವರ ದೇವಸ್ಥಾನವನ್ನು ಏಳು ವರ್ಷಗಳಲ್ಲಿ ನಿರ್ಮಿಸಲಾಗಿತ್ತು. ಆ ಕಾಲದಲ್ಲಿ ಇದಕ್ಕಾಗಿ ಏಳು ಸಾವಿರ ಟನ್ ಗ್ರಾನೈಟ್ ತೆಗೆದುಕೊಂಡು ಬರಲಾಗಿತ್ತು. ಚೋಳರ ಸಾಗಾಟ ಸಾಮರ್ಥ್ಯಕ್ಕೆ ಅದು ಉತ್ತಮ ನಿದರ್ಶನ' ಎಂದು ಅವರು ಹೇಳಿದರು.

'ಯುದ್ಧ ಚೋಳರ ಪ್ರಮುಖ ಅಸ್ತ್ರವಾಗಿತ್ತು. ರಾಜರಾಜ ಚೋಳ ಈ ಕುರಿತು ಶಾಸನಗಳಲ್ಲಿ ಅಭಿಮಾನದಿಂದ ಹೇಳಿಕೊಂಡಿದ್ದಾನೆ. ರಾಜಾಡಳಿತದ ಕಾಲದಲ್ಲಿ ಯುದ್ಧದ ಸಂದರ್ಭದಲ್ಲಿ ಮಹಿಳೆಯರನ್ನು ಹೀನಾಯವಾಗಿ ನಡೆಸಿಕೊಳ್ಳಲಾಗುತ್ತಿತ್ತು. ಪ್ರಾಣಿಗಳು ಮತ್ತು ಸಂಪತ್ತನ್ನು ವಶಪಡಿಸಿಕೊಂಡಂತೆಯೇ ಮಹಿಳೆಯರನ್ನು ಸೆರೆ ಹಿಡಿಯುತ್ತಿದ್ದರು. ಚೋಳ ರಾಜರು ಕೂಡ ಇಂಥ ಕ್ರೌರ್ಯದಿಂದ ಹೊರತಾಗಿರಲಿಲ್ಲ' ಎಂದು ಅವರು ಹೇಳಿದರು.

ಹಿಂದುತ್ವದ ನಾನಾ ಮುಖಗಳ ಚರ್ಚೆ

ಹಿಂದುತ್ವದ ನಾನಾ ಮುಖಗಳ ಚರ್ಚೆಯೂ ಗೋಷ್ಠಿಗಳಲ್ಲಿ ನಡೆಯಿತು. ಪುರುಷಾರ್ಥದ ಕುರಿತ ಸಂವಾದದಲ್ಲಿ 'ಹಿಂದುತ್ವಕ್ಕೆ ನಾನಾ ಮುಖಗಳು ಇದ್ದು ಚಾರ್ವಾಕ ಪದ್ಧತಿಯೂ ಅದರಲ್ಲಿ ಒಂದು. ಜ್ಞಾನ, ಶಿಕ್ಷಣ, ನೊಂದವರ ಕೈ ಹಿಡಿಯುವುದು ಕೂಡ ಹಿಂದುತ್ವದ ಭಾಗವೇ ಆಗಿದೆ. ಶ್ರೀರಾಮ್ ಎಂದು ಹೇಳದೇ ಇದ್ದರೆ ತಲೆ ಒಡೆಯುವ ಸಿದ್ಧಾಂತ ಹಿಂದೂಗಳದ್ದಲ್ಲ' ಎಂದು ಸಂಸದ ಶಶಿ ತರೂರು ಹೇಳಿದರು.

ರಾಜಕೀಯ ಹಿಂದುತ್ವದ ಜನನ ಎಂಬ ಗೋಷ್ಠಿಯಲ್ಲಿ ಮಾತನಾಡಿದ ಹಿಂದೋಳ್ ಸೇನ್ ಗುಪ್ತಾ, ಹಿಂದುತ್ವದ ರಾಜಕೀಯ ಆರ್‌ಎಸ್‌ಎಸ್ ಮತ್ತು ಬಿಜೆಪಿಯ ಒಳಗೇ ಉತ್ಪತ್ತಿ ಆಗುತ್ತದೆಯೇ ಅಥವಾ ಬೇರೆ ಯಾವುದಾದರೂ ಮೂಲಗಳಿವೆಯೇ ಎಂಬುದನ್ನು ಪತ್ತೆಮಾಡಬೇಕಾಗಿದೆ ಎಂದರು.

'ಹಿಂದುತ್ವವನ್ನು ರಾಜಕೀಯ ಅಸ್ತ್ರವಾಗಿ ಬಳಸಿಕೊಳ್ಳುವ ಪಕ್ಷಗಳು ದೇಶದ ಸಾಂಸ್ಕೃತಿಕ ಆಯಾಮಗಳ ಬಗ್ಗೆ ಯೋಚನೆ ಮಾಡುವುದಿಲ್ಲ' ಎಂದರು.

ಸಾವರ್ಕರ್ ಮತ್ತು ಮಹಾರಾಷ್ಟ್ರದ ಬಗ್ಗೆ ಮಾತನಾಡಿದ ಜಾನಕಿ ಬಾಕಳೆ, ಸಾವರ್ಕರ್ ಧಾರ್ಮಿಕ ಮೂಲಭೂತವಾದಿ ಆಗಿರಲಿಲ್ಲ. ಪ್ರಾದೇಶಿಕವಾಗಿ ಪೂರ್ವಗ್ರಹಪೀಡಿತರಾಗಿದ್ದರು. ಜಾತಿ ವಿರೋಧಿ ಆಗಿದ್ದುದರಿಂದ ಸನಾತನಿಗಳಿಂದಲೇ ಅವರು ವಿರೋಧ ಎದುರಿಸಿದ್ದರು ಎಂದರು.

'ಶಾಲಾ–ಕಾಲೇಜುಗಳಲ್ಲಿ ಸಂಸ್ಕೃತ ಅಭ್ಯಾಸಕ್ಕೆ ಅವಕಾಶ ಕಲ್ಪಿಸಿ'

ಪ್ರಜಾವಾಣಿ ವಾರ್ತೆ

ಮೈಸೂರು: ಶಾಲಾ–ಕಾಲೇಜುಗಳಲ್ಲಿ ಸಂಸ್ಕೃತ ಅಭ್ಯಾಸಕ್ಕೆ ಅವಕಾಶ ಕಲ್ಪಿಸಬೇಕು ಎಂದು 'ಸಂಸ್ಕೃತ ಭಾರತಿ ಕರ್ನಾಟಕ ದಕ್ಷಿಣ ಸಂಸ್ಕೃತ ಕಾವೇರಿ ಪ್ರಾಂತ ಸಮ್ಮೇಳನ' ಸರ್ಕಾರವನ್ನು ಒತ್ತಾಯಿಸಿದೆ.

ಇಲ್ಲಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಭಾನುವಾರ ಮುಕ್ತಾಯವಾದ ಸಮ್ಮೇಳನದದಲ್ಲಿ ಹಲವು ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಭಾನುವಾರ ನಡೆದ ಸಂಸ್ಕೃತಭಾರತಿ ಕರ್ನಾಟಕ ದಕ್ಷಿಣ ಸಂಸ್ಕೃತ ಕಾವೇರಿ ಪ್ರಾಂತ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಜನರು

ಭಾರತದ ಆತ್ಮವೆಂದರೆ ಸಂಸ್ಕೃತ. ಆದ್ದರಿಂದ ಶಾಲಾ– ಕಾಲೇಜುಗಳಲ್ಲಿ ಕಡ್ಡಾಯವಲ್ಲದಿದ್ದರೂ ಐಚ್ಛಿಕವಾಗಿ ಕಲಿಯಲು, ಬೋಧಿಸಲು ಅವಕಾಶ ನೀಡಬೇಕು. ಎಲ್ಲ ಕಡೆಗಳಲ್ಲೂ ಸಂಸ್ಕೃತ ಶಿಕ್ಷಕರನ್ನು ನೇಮಿಸಬೇಕು. ಪ್ರಾಯೋಗಿಕವಾಗಿ ಪೂರ್ವ ಪ್ರಾಥಮಿಕ ಹಂತದ ಒಂದು ಸಾವಿರ ಶಾಲೆಗಳಲ್ಲಿ ಆರಂಭಿಸಬೇಕು ಎಂದು ಆಗ್ರಹಿಸಿತು.

ಸಂಸ್ಕೃತ ಅಕಾಡೆಮಿ ಸ್ಥಾಪಿಸಬೇಕು. ಸಂಸ್ಕೃತ ಲೇಖಕರು, ಅಧ್ಯಾಪಕರಿಗೆ ಪ್ರೋತ್ಸಾಹ ನೀಡಬೇಕು; ಪ್ರಶಿಕ್ಷಣ ಕೊಡಬೇಕು. ಸಂಸ್ಕೃತ ಸಂಶೋಧನೆಗೆ ಒತ್ತು ನೀಡಬೇಕು. ಕನ್ನಡ ಪಂಡಿತ ಪರೀಕ್ಷೆಯನ್ನು ಪುನರಾರಂಭಿಸಬೇಕು. ಕನ್ನಡ ಮತ್ತು ತೆಲುಗು ಎಂ.ಎ. ಕೋರ್ಸ್‌ನಲ್ಲಿ ಈ ಹಿಂದೆ ಇದ್ದಂತೆ ಸಂಸ್ಕೃತ ಅಧ್ಯಯನ ವಿಷಯವನ್ನು ಸೇರಿಸೇಕು. ಸರಳ ಸಂಸ್ಕೃತ ಪರೀಕ್ಷೆಗಳ ಯೋಜನೆಗೆ ಪ್ರೋತ್ಸಾಹ ಕೊಡಬೇಕು. ಸಂಸ್ಕೃತ ನೀತಿ ಬೋಧನೆಗಾಗಿ ವಾರದಲ್ಲಿ ಎರಡು ತರಗತಿಗಳಲ್ಲಿ ಸುಭಾಷಿತ, ಶ್ಲೋಕ ಅಳವಡಿಸಬೇಕು ಎಂದು ಒತ್ತಾಯಿಸಿತು.

ಸಂಸ್ಕೃತ ಪಾಠಶಾಲೆಗಳ ವಿದ್ಯಾರ್ಥಿಗಳಿಗೆ ಮೂಲ ಸೌಕರ್ಯ ಒದಗಿಸಬೇಕು. ಉಚಿತವಾಗಿ ಪಠ್ಯಪುಸ್ತಕ ವಿತರಿಸಬೇಕು. ಈ ಭಾಷೆಯ ಕುರಿತಾದ ಕೆಲಸಗಳನ್ನು ರೂಪಿಸಲು ಸಂಸ್ಕೃತ ಸಲಹಾ ಸಮಿತಿ ರಚಿಸಬೇಕು ಎಂದು ಆಗ್ರಹಿಸಿತು.

ಈ ನಿರ್ಣಯಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಸಂಘಟಕರು ತಿಳಿಸಿದರು.

19 ವರ್ಷದೊಳಗಿನ ಮಹಿಳಾ ಟಿ20 ವಿಶ್ವಕಪ್ • ತ್ರಿಷಾ ಆಲ್‌ರೌಂಡ್ ಆಟ

ಭಾರತಕ್ಕೆ ಎರಡನೇ ಕಿರೀಟ

ಕ್ವಾಲಾಲಂಪುರ (ಪಿಟಿಐ): ಬೆಂಗಳೂರಿನ ನಿಕಿ ಪ್ರಸಾದ್ ನಾಯಕತ್ವದ ಭಾರತ ತಂಡವು 19 ವರ್ಷದೊಳಗಿನ ಮಹಿಳೆಯರ ಟಿ20 ವಿಶ್ವಕಪ್ ಜಯಿಸಿತು. ತಂಡವು ಸತತ ಎರಡನೇ ಬಾರಿ ಈ ಸಾಧನೆ ಮಾಡಿತು.

ಭಾನುವಾರ ನಡೆದ ಫೈನಲ್‌ನಲ್ಲಿ ಜಿ. ತ್ರಿಷಾ (15ಕ್ಕೆ3 ಹಾಗೂ ಔಟಾಗದೇ 44) ಆಲ್‌ರೌಂಡ್ ಆಟದ ಬಲದಿಂದ ಭಾರತ ತಂಡವು 9 ವಿಕೆಟ್‌ಗಳಿಂದ ದಕ್ಷಿಣ ಆಫ್ರಿಕಾ ಎದುರು ಜಯಿಸಿತು. ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ತಂಡದ ನಾಯಕಿ ಕೈಲಾ ರೇನೆಕೆ ಅವರು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಅವರಿಗೇ ಈ ನಿರ್ಧಾರ ತಿರುಗು-ಬಾಣವಾಯಿತು. ಭಾರತದ ತ್ರಿಷಾ, ಸ್ಪಿನ್ನರ್‌ಗಳಾದ ಪರುಣಿಕಾ ಸಿಸೊಡಿಯಾ (6ಕ್ಕೆ2), ಆಯುಷಿ ಶುಕ್ಲಾ (9ಕ್ಕೆ2) ಮತ್ತು ವೈಷ್ಣವಿ ಶರ್ಮಾ (23ಕ್ಕೆ2) ಅವರ ದಾಳಿಗೆ ದಕ್ಷಿಣ ಆಫ್ರಿಕಾ ತಂಡವು 20 ಓವರ್‌ಗಳಲ್ಲಿ 82 ರನ್‌ಗಳಿಗೆ ಕುಸಿಯಿತು.

ಇದಕ್ಕುತ್ತರವಾಗಿ ಭಾರತ ತಂಡವು 11.2 ಓವರ್‌ಗಳಲ್ಲಿ 1 ವಿಕೆಟ್‌ಗೆ 84 ರನ್ ಗಳಿಸಿ ಗೆದ್ದಿತು. ತ್ರಿಷಾ 33 ಎಸೆತಗಳಲ್ಲಿ 8 ಬೌಂಡರಿ ಸಹಿತ 44 ರನ್ ಗಳಿಸಿದರು. ಸನಿಕಾ ಚಳ್ಕೆ (ಔಟಾಗದೆ 26; 22ಎ, 4x4)ತಂಡವನ್ನು ಗೆಲುವಿನ ದಡ ಸೇರಿಸಿದರು.

ಟೂರ್ನಿಯುದ್ದಕ್ಕೂ ಅಜೇಯವಾಗುಳಿದಿದ್ದ ನಿಕಿ ಬಳಗವು ಫೈನಲ್‌ನಲ್ಲಿಯೂ ಪಾರಮ್ಯ ಮೆರೆಯಿತು. ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ತಂಡವನ್ನು ಸೋಲಿಸಿ, ಮೊದಲ ಬಾರಿಗೆ ಪ್ರಶಸ್ತಿ ಸುತ್ತಿಗೆ ಪ್ರವೇಶಿಸಿದ್ದ ದಕ್ಷಿಣ ಆಫ್ರಿಕಾ ತಂಡವು ಎಲ್ಲ ವಿಭಾಗಗಳಲ್ಲಿಯೂ ಮಂಕಾಯಿತು.

ಇನಿಂಗ್ಸ್‌ನ ಎರಡನೇ ಓವರ್ ನಲ್ಲಿಯೇ ಪರುಣಿಕಾ ಸಿಸೋಡಿಯಾ ಬೌಲಿಂಗ್‌ನಲ್ಲಿ ಸಿಮೋನ್ ಲಾರೆನ್ಸ್ ಕ್ಲೀನ್‌ಬೌಲ್ಡ್ ಆದರು. ನಂತರ ಅಗ್ರಕ್ರಮಾಂಕದ ಬ್ಯಾಟರ್‌ಗಳು ಒಬ್ಬರ ಹಿಂದೆ ಒಬ್ಬರು ಪೆವಿಲಿಯನ್‌ಗೆ ಹೋದರು. ಮಧ್ಯಮ ಕ್ರಮಾಂಕದಲ್ಲಿ ಮೀಕೆ ವ್ಯಾನ್ ವೂರ್ಸ್ಟ್ (23; 18ಎ) ಮತ್ತು ಫೇ ಕೌಲಿಂಗ್ (15; 20ಎ, 6X1) ಅವರಿಬ್ಬರು ಒಂದಷ್ಟು ಪ್ರತಿರೋಧ ತೋರಿದರು. ಆದರೆ ಭಾರತದ ಬೌಲರ್‌ಗಳ ಮೋಡಿಯ ಮುಂದೆ ದಕ್ಷಿಣ ಆಫ್ರಿಕಾ ತಂಡಕ್ಕೆ ಮೂರಂಕಿ ಮೊತ್ತ ಗಳಿಸಲು ಸಾಧ್ಯವಾಗಲಿಲ್ಲ. ಟೂರ್ನಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟರ್ ತ್ರಿಷಾ (309) ಅವರ ಆರ್ಭಟಕ್ಕೆ ಬೌಲರ್‌ಗಳ ಆಟ ನಡೆಯಲಿಲ್ಲ. ತಂಡವು ಎರಡನೇ ಬಾರಿ ಕಿರೀಟ ಧರಿಸಿತು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 20 ಓವರ್‌ಗಳಲ್ಲಿ 82 (ಮೀಕೆ ವ್ಯಾನ್ ವೂರ್ಸ್ಟ್ 23, ಪರುಣಿಕಾ ಸಿಸೋಡಿಯಾ 6ಕ್ಕೆ2, ಆಯುಷಿ ಶುಕ್ಲಾ 9ಕ್ಕೆ2, ವೈಷ್ಣವಿ ಶರ್ಮಾ 23ಕ್ಕೆ2, ಜಿ. ತ್ರಿಷಾ 15ಕ್ಕೆ3) ಭಾರತ: 11.2 ಓವರ್‌ಗಳಲ್ಲಿ 1ಕ್ಕೆ84 (ಜಿ. ತ್ರಿಷಾ ಔಟಾಗದೆ 44, ಸನಿಕಾ ಚಳ್ಕೆ ಔಟಾಗದೆ 26)

ಕ್ವಾಲಾಲಂಪುರದಲ್ಲಿ ಭಾನುವಾರ ಮುಕ್ತಾಯವಾದ 19 ವರ್ಷದೊಳಗಿನ ಮಹಿಳೆಯರ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಭಾರತ ತಂಡದ ಆಟಗಾರ್ತಿಯರ ಸಂಭ್ರಮ–ಬಿಸಿಸಿಐ ವಿಮೆನ್ ಎಕ್ಸ್ ಖಾತೆಯಿಂದ

ಶಾಂತ ಚಿತ್ತಕ್ಕೆ ದೊರೆತ ಜಯ: ನಿಕಿ ಪ್ರಸಾದ್

‘ನಾವೆಲ್ಲರೂ ಸಾಧ್ಯವಾದಷ್ಟೂ ಶಾಂತಚಿತ್ತ ಮತ್ತು ಏಕಾಗ್ರತೆಯಿಂದ ಆಡುವ ಪ್ರಯತ್ನ-ವನ್ನು ಪ್ರತಿ ಹಂತದಲ್ಲಿಯೂ ಮಾಡಿದೆವು. ಅದು ಉತ್ತಮ ಫಲ ನೀಡಿತು’ ಎಂದು ಭಾರತ 19 ವರ್ಷದ ಮಹಿಳಾ ತಂಡದ ನಾಯಕಿ ನಿಕಿ ಪ್ರಸಾದ್ ಸಂತಸ ವ್ಯಕ್ತಪಡಿ-ಸಿದರು.

ಭಾನುವಾರ ಫೈನಲ್ ಪಂದ್ಯದಲ್ಲಿ ಜಯಿಸಿದ ನಂತರ ಅವರು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

‘ನಾವು ಏನು ಮಾಡಬಲ್ಲೆವು ಎಂಬುದನ್ನು ಜಗತ್ತಿಗೆ ತೋರಿಸಬೇಕಿತ್ತು. ಈ ಸಾಧನೆಯಿಂದ ಅದನ್ನು ತೋರಿಸಿದ್ದೇವೆ. ಇಂತಹದೊಂದು ಅಪೂರ್ವ ಅವಕಾಶ ನೀಡಿದ ಬಿಸಿಸಿಐಗೆ ಧನ್ಯವಾದಗಳು.

ಭಾರತ ತಂಡವು ಅಗ್ರಸ್ಥಾನದ-ಲ್ಲಿರುವಂತೆ ನೋಡಿಕೊಳ್ಳುವ ಹೊಣೆ ನಿಭಾಯಿಸಿದ್ದು ನನಗೆ ಹೆಮ್ಮೆ ಮತ್ತು ವಿಶೇಷ ಸಂಗತಿಯಾಗಿದೆ’ ಎಂದರು.

ಅಭಿಷೇಕ್ ಶರ್ಮಾ ಆರ್ಭಟ

ಟಿ20 ಕ್ರಿಕೆಟ್: ಭಾರತಕ್ಕೆ 4–1ರಿಂದ ಸರಣಿ ಜಯ • ಬಸವಳಿದ ಇಂಗ್ಲೆಂಡ್



ಭಾರತ ಕ್ರಿಕೆಟ್ ತಂಡದ ಬ್ಯಾಟರ್ ಅಭಿಷೇಕ್ ಶರ್ಮಾ ಮಿಂಚಿನ ಶತಕ ದಾಖಲಿಸಿ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಟಿ20 ಕ್ರಿಕೆಟ್‌ನಲ್ಲಿ ವೇಗದ ಶತಕಗಳು

ಎಸೆತ	ಆಟಗಾರ	ಎದುರಾಳಿ	ಸ್ಥಳ	ವರ್ಷ
35	ಡೇವಿಡ್ ಮಿಲ್ಲರ್ (ದ.ಆಫ್ರಿಕಾ)	ಬಾಂಗ್ಲಾ	ಪಾಚೆಸ್ಟ್ರೂಮ್	2017
35	ರೋಹಿತ್ ಶರ್ಮಾ (ಭಾರತ)	ಶ್ರೀಲಂಕಾ	ಇಂದೋರ್	2017
37	ಅಭಿಷೇಕ್ ಶರ್ಮಾ (ಭಾರತ)	ಇಂಗ್ಲೆಂಡ್	ವಾಂಖೆಡೆ	2025
39	ಜಾನ್ಸನ್ ಚಾರ್ಲ್ಸ್ (ವಿಂಡೀಸ್)	ದ.ಆಫ್ರಿಕಾ	ಸೆಂಚುರಿಯನ್	2023
40	ಸಂಜು ಸ್ಯಾಮ್ಸನ್ (ಭಾರತ)	ಬಾಂಗ್ಲಾ	ಹೈದರಾಬಾದ್	2024

ಅಂತರರಾಷ್ಟ್ರೀಯ ಟಿ20ಯಲ್ಲಿ ವೈಯಕ್ತಿಕ ಗರಿಷ್ಠ ಸ್ಕೋರ್ (ಭಾರತ)

ರನ್	ಬ್ಯಾಟರ್	ದೇಶ	ಸ್ಥಳ	ವರ್ಷ
135	ಅಭಿಷೇಕ್ ಶರ್ಮಾ	ಇಂಗ್ಲೆಂಡ್	ವಾಂಖೆಡೆ	2025
126*	ಶುಭಮನ್ ಗಿಲ್	ನ್ಯೂಜಿಲೆಂಡ್	ಅಹಮದಾಬಾದ್	2023
123	ಋತುರಾಜ್ ಗಾಯಕವಾಡ	ಆಸ್ಟ್ರೇಲಿಯಾ	ಗುವಾಹಟಿ	2023
122*	ವಿರಾಟ್ ಕೊಹ್ಲಿ	ಅಫ್ಗಾನಿಸ್ತಾನ	ದುಬೈ	2022
121*	ರೋಹಿತ್ ಶರ್ಮಾ	ಅಫ್ಗಾನಿಸ್ತಾನ	ಬೆಂಗಳೂರು	2024

ಟಿ20 ಕ್ರಿಕೆಟ್ ಪಂದ್ಯದಲ್ಲಿ ಹೆಚ್ಚು ಸಿಕ್ಸರ್ ಹೊಡೆದವರು (ಭಾರತ)

ಸಿಕ್ಸರ್	ಆಟಗಾರ	ಎದುರಾಳಿ	ಸ್ಥಳ	ವರ್ಷ
13	ಅಭಿಷೇಕ್ ಶರ್ಮಾ	ಇಂಗ್ಲೆಂಡ್	ವಾಂಖೆಡೆ	2025
10	ರೋಹಿತ್ ಶರ್ಮಾ	ಶ್ರೀಲಂಕಾ	ಇಂದೋರ್	2017
10	ಸಂಜು ಸ್ಯಾಮ್ಸನ್	ದ.ಆಫ್ರಿಕಾ	ಡರ್ಬನ್	2024
10	ತಿಲಕ್ ವರ್ಮಾ	ದ.ಆಫ್ರಿಕಾ	ಜೋಹಾನೆಸ್‌ಬರ್ಗ್	2024

ಮುಂಬೈ (ಪಿಟಿಐ): ಪಂಜಾಬ್ ಹುಡುಗ ಅಭಿಷೇಕ್ ಶರ್ಮಾ ಭಾನುವಾರ ರಾತ್ರಿ ವಾಂಖೆಡೆ ಕ್ರೀಡಾಂ-ಗಣದಲ್ಲಿ ಸಮುದ್ರದಂತೆ ಭೋರ್ಗರೆದರು.

ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಶರವೇಗದ ಶತಕ ಬಾರಿಸಿದ ಎರಡನೇ ಭಾರತೀಯ ಬ್ಯಾಟರ್ ಆದರು. ಕೇವಲ 37 ಎಸೆತಗಳಲ್ಲಿ ಅವರು ಶತಕ ಪೂರೈಸಿದರು. ಅದರಿಂದಾಗಿ ಭಾರತ ತಂಡವು ಇಂಗ್ಲೆಂಡ್ ವಿರುದ್ಧದ 5ನೇ ಟಿ20 ಪಂದ್ಯದಲ್ಲಿ 150 ರನ್‌ಗಳಿಂದ ಜಯಿಸಿತು. 4–1ರಿಂದ ಸರಣಿ ಜಯಿಸಿತು.

ಭಾರತ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 247 ರನ್ ಗಳಿಸಿತು. ಅದಕ್ಕುತ್ತರ-ವಾಗಿ ಇಂಗ್ಲೆಂಡ್ 10.3 ಓವರ್‌ಗಳಲ್ಲಿ 97 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ವೇಗಿ ಮೊಹಮ್ಮದ್ ಶಮಿ (25ಕ್ಕೆ3), ಸ್ಪಿನ್ನರ್ ವರುಣ್ ಚಕ್ರವರ್ತಿ (25ಕ್ಕೆ2), ಶಿವಂ ದುಬೆ (11ಕ್ಕೆ2) ಮತ್ತು ಅಭಿಷೇಕ್ ಶರ್ಮಾ (3ಕ್ಕೆ2) ಇಂಗ್ಲೆಂಡ್ ತಂಡದ ಹೆಡೆಮುರಿ ಕಟ್ಟಿದರು.

ಆರಂಭಿಕ ಬ್ಯಾಟರ್ ಶರ್ಮಾ ಅವರು 18ನೇ ಓವರ್‌ನಲ್ಲಿ ಆದಿಲ್ ರಶೀದ್ ಎಸೆತದಲ್ಲಿ ಔಟಾಗುವ ಮುನ್ನ 54 ಎಸೆತಗಳಲ್ಲಿ 135 ರನ್ ಗಳಿಸಿದರು. ಅವರು ಕ್ರೀಸ್‌ನಲ್ಲಿ ಇದ್ದಷ್ಟು ಹೊತ್ತು ಪ್ರೇಕ್ಷಕರ ಗ್ಯಾಲರಿಯಲ್ಲಿ ಸಂಭ್ರಮವೋ ಸಂಭ್ರಮ. 250ರ ಸ್ಟ್ರೈಕ್‌ರೇಟ್‌ನಲ್ಲಿ ಅವರು ರನ್ ಸೂರೆ ಮಾಡಿದರು.

ಸಾಲು ಸಾಲು ಸಿಕ್ಸರ್, ಬೌಂಡರಿಗಳ ಆರ್ಭಟಕ್ಕೆ ಇಂಗ್ಲೆಂಡ್ ಬೌಲರ್‌ಗಳು ನಡುಗಿದರು. ಒಟ್ಟು 13 ಸಿಕ್ಸರ್‌ಗಳು ಮತ್ತು 7 ಬೌಂಡರಿಗಳು ಅವರ ಬ್ಯಾಟಿನಿಂದ ಸಿಡಿದವು.

ಅಭಿಷೇಕ್ ಅವರು ಜೆಮಿ ಓವರ್ಟನ್ ಹಾಕಿದ 5ನೇ ಓವರ್‌ನಲ್ಲಿ ಸಿಕ್ಸರ್ ಎತ್ತಿ ಅರ್ಧಶತಕ (17 ಎಸೆತ) ಪೂರೈಸಿದರು. ವೇಗದ ಅರ್ಧಶತಕ ಗಳಿಸಿದ ಭಾರತದ ಎರಡನೇ ಬ್ಯಾಟರ್ ಆದರು. ಅವರು ತಿಲಕ್ ವರ್ಮಾ (24 ರನ್) ಅವರೊಂದಿಗೆ 2ನೇ ವಿಕೆಟ್ ಜೊತೆಯಾಟದಲ್ಲಿ 115 ರನ್ ಸೇರಿಸಿದರು. ಅವರ ಆಟದ ವೇಗಕ್ಕೆ ತಂಡದ ಮೊತ್ತವು 9 ಓವರ್‌ಗಳಲ್ಲಿ 136 ರನ್‌ಗಳಾಗಿದ್ದವು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದ್ದ ಇಂಗ್ಲೆಂಡ್ ತಂಡದ ನಾಯಕ ಜೋಸ್ ಬಟ್ಲರ್ ಮತ್ತು ಸಹ ಆಟಗಾರರು ಅಭಿಷೇಕ್ ಆಟಕ್ಕೆ ಬಸವಳಿದರು.

2017ರಲ್ಲಿ ರೋಹಿತ್ ಶರ್ಮಾ ಅವರು ಶ್ರೀಲಂಕಾ ಎದುರು 35 ಎಸೆತಗಳಲ್ಲಿ ಶತಕ ಗಳಿಸಿದ್ದರು. ಅಭಿಷೇಕ್ ಅವರು ರೋಹಿತ್‌ಗಿಂತ ಎರಡು ಎಸೆತ ಹೆಚ್ಚು ತೆಗೆದುಕೊಂಡರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 9ಕ್ಕೆ247 (ಸಂಜು ಸ್ಯಾಮ್ಸನ್ 16, ಅಭಿಷೇಕ್ ಶರ್ಮಾ 135, ತಿಲಕ್ ವರ್ಮಾ 24, ಶಿವಂ ದುಬೆ 30, ಅಕ್ಷರ್ ಪಟೇಲ್ 15, ಮಾರ್ಕ್ ವುಡ್ 32ಕ್ಕೆ2, ಬ್ರೈಡನ್ ಕೇರ್ಸ್ 38ಕ್ಕೆ3) ಇಂಗ್ಲೆಂಡ್: 10.3 ಓವರ್‌ಗಳಲ್ಲಿ 97 (ಫಿಲಿಪ್ ಸಾಲ್ಟ್ 55, ಜೇಕಬ್ ಬೆತೆಲ್ 10, ಮೊಹಮ್ಮದ್ ಶಮಿ 25ಕ್ಕೆ3, ವರುಣ ಚಕ್ರವರ್ತಿ 25ಕ್ಕೆ2, ಶಿವಂ ದುಬೆ 11ಕ್ಕೆ2, ಅಭಿಷೇಕ್ ಶರ್ಮಾ 3ಕ್ಕೆ2, ರವಿ ಬಿಷ್ಣೋಯಿ 9ಕ್ಕೆ1) ಫಲಿತಾಂಶ: ಭಾರತ ತಂಡಕ್ಕೆ 150 ರನ್ ಜಯ. ಸರಣಿಯಲ್ಲಿ 4–1ರಿಂದ ಗೆಲುವು.

ಪಂದ್ಯಶ್ರೇಷ್ಠ: ಅಭಿಷೇಕ್ ಶರ್ಮಾ

ರಾಷ್ಟ್ರೀಯ ಕ್ರೀಡಾಕೂಟ: ಕರ್ನಾಟಕಕ್ಕೆ ಏಳು ಪದಕ

ಶ್ರೀಹರಿ, ನೀನಾಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಶ್ರೀಹರಿ ನಟರಾಜ್ ಮತ್ತು ನೀನಾ ವೆಂಕಟೇಶ್ ಅವರು ಉತ್ತರಾಖಂಡದ ಹಲ್‌ದ್ವಾನಿಯಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಚಿನ್ನದ ಸಾಧನೆ ಮಾಡಿದರು. ಕೂಟ ಐದನೇ ದಿನವಾದ ಭಾನುವಾರವೂ ಕರ್ನಾಟಕದ ಈಜುಪಟುಗಳು ಪ್ರಾಬಲ್ಯ ಮುಂದುವರಿಸಿದ್ದು, ಒಂದೇ ದಿನ ಏಳು ಪದಕ ತಮ್ಮದಾಗಿಸಿಕೊಂಡರು.

24 ವರ್ಷ ವಯಸ್ಸಿನ ಒಲಿಂಪಿಯನ್ ಶ್ರೀಹರಿ ನಟರಾಜ್ ಅವರು ಪುರುಷರ 100 ಮೀಟರ್ ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ 56.26 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿ ಚಾಂಪಿಯನ್ ಆದರು. ಕರ್ನಾಟಕದ ಮತ್ತೊಬ್ಬ ಈಜುಪಟು ಆಕಾಶ್ ಮಣಿ (56.36ಸೆ) ಮತ್ತು ಮಹಾರಾಷ್ಟ್ರದ ರಿಷಭ್ ದಾಸ್ (56.80ಸೆ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು.

ಮಹಿಳೆಯರ 50 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ರಾಜ್ಯದ ನೀನಾ ಮತ್ತು ಒಲಿಂಪಿಯನ್ ಧಿನಿಧಿ ದೇಸಿಂಗು ಕ್ರಮವಾಗಿ ಮೊದಲೆರಡು ಸ್ಥಾನ ಗಳಿಸಿದರು. 20 ವರ್ಷ ವಯಸ್ಸಿನ ನೀನಾ 28.38 ಸೆಕೆಂಡ್‌ಗಳಲ್ಲಿ ಗುರಿಮುಟ್ಟಿದರೆ, 14 ವರ್ಷ ವಯಸ್ಸಿನ ಧಿನಿಧಿ 28.80 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಮಹಾರಾಷ್ಟ್ರದ ರುಜುಟ ರಾಜಾದ್ಯಾ (29.12ಸೆ) ಕಂಚಿನ ಪದಕ ಜಯಿಸಿದರು.

ಮಹಿಳೆಯರ 1500 ಮೀಟರ್ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಕರ್ನಾಟಕ ಅದಿತಿ ಎನ್. ಮುಲಾಯ್ (18ನಿ.11.92ಸೆ) ಮತ್ತು ಶಿರೀನ್ (18.14.98ಸೆ) ಕ್ರಮವಾಗಿ ಬೆಳ್ಳಿ ಮತ್ತು ಕಂಚು ತಮ್ಮ-ದಾಗಿಸಿಕೊಂಡರು. ದೆಹಲಿಯ ಭವ್ಯಾ ಸಚದೇವಾ (17ನಿ.42.81ಸೆ) ಅವರು ಚಿನ್ನ ಗೆದ್ದರು.

ಪುರುಷರ 400 ಮೀಟರ್ ಫ್ರೀಸ್ಟೈಲ್‌ನಲ್ಲಿ ಕರ್ನಾಟಕದ ಅನೀಶ್ ಎಸ್.ಗೌಡ (4ನಿ.0.45ಸೆ) ಬೆಳ್ಳಿ ಸಾಧನೆ ಮಾಡಿದರು. ದೆಹಲಿಯ ಕುಶಾಗ್ರ ರಾವತ್ (3ನಿ.57.89ಸೆ) ಮತ್ತು ಗುಜರಾತಿನ ಆರ್ಯನ್ ನೆಹ್ರಾ (4ನಿ.02.60ಸೆ) ಕ್ರಮವಾಗಿ ಚಿನ್ನ ಮತ್ತು ಕಂಚಿನ ಪದಕಕ್ಕೆ ಮುತ್ತಿಕ್ಕಿದರು.

ಪುರುಷರ 50 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ತಮಿಳುನಾಡಿನ ಬೆನೆಡಿಕ್ಟನ್ ರೋಹಿತ್ (24.39ಸೆ) ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು. ಮಹಾರಾಷ್ಟ್ರದ ಮಹಿತ್ ಅಂಬ್ರೆ (25.02ಸೆ) ಮತ್ತು ಹರಿಯಾಣದ ಹರ್ಷ್ ಸರೋಹಾ (25.22ಸೆ) ಕ್ರಮವಾಗಿ ನಂತರದ ಸ್ಥಾನ ಪಡೆದರು.

ವಾಟರ್ ಪೋಲೊ ಸ್ಪರ್ಧೆಯಲ್ಲಿ ಕರ್ನಾಟಕದ ಪುರುಷರ ತಂಡ ಕೊನೆಗೂ ಜಯ ಸಾಧಿಸಿತು. ಮೊದಲೆರಡು ಪಂದ್ಯ ಸೋತಿದ್ದ ಕರ್ನಾಟಕ ತಂಡ 14–6ರಿಂದ ಪಂಜಾಬ್ ತಂಡವನ್ನು ಮಣಿಸಿತು. ಆದರೆ, ಮಹಿಳೆಯರ ತಂಡ ನಿರಾಸೆ ಮೂಡಿಸಿತು. 3–8ರಿಂದ ಕೇರಳ ತಂಡಕ್ಕೆ ಮಣಿಯಿತು.

ಮಹಿಳೆಯರ 50 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ಪದಕ ಗೆದ್ದ ಕರ್ನಾಟಕದ ಧಿನಿಧಿ ದೇಸಿಂಗು (ಬೆಳ್ಳಿ), ನೀನಾ ವೆಂಕಟೇಶ್ (ಚಿನ್ನ) ಮತ್ತು ಮಹಾರಾಷ್ಟ್ರದ ರುಜುಟ ರಾಜಾದ್ಯಾ (ಕಂಚು)

ಟೋಗೊ ವಿರುದ್ಧ ಭಾರತಕ್ಕೆ ಗೆಲುವು

ಎನ್.ಶ್ರೀರಾಮ್ ಬಾಲಾಜಿ ಮತ್ತು ರಿತ್ವಿಕ್ ಚೌಧರಿ ಬೊಲ್ಲಿಪಲ್ಲಿ –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಅನುಭವಿ ಜೋಡಿ ಎನ್.ಶ್ರೀರಾಮ್ ಬಾಲಾಜಿ ಮತ್ತು ರಿತ್ವಿಕ್ ಚೌಧರಿ ಬೊಲ್ಲಿಪಲ್ಲಿ ಅವರ ಅಮೋಘ ಆಟದ ಬೆನ್ನಲ್ಲೇ ಕರಣ್ ಸಿಂಗ್ ತನ್ನ ಪದಾರ್ಪಣೆ ಪಂದ್ಯದಲ್ಲಿ ಮಿಂಚು ಹರಿಸಿದರು. ಹೀಗಾಗಿ, ಭಾರತ ತಂಡವು ಡೇವಿಸ್ ಕಪ್ ಟೆನಿಸ್ ವಿಶ್ವಗುಂಪಿನ ಪಂದ್ಯದಲ್ಲಿ ಟೋಗೊ ವಿರುದ್ಧ 4–0ಯಿಂದ ಸುಲಭ ಜಯ ಸಾಧಿಸಿತು.

ಶನಿವಾರವೇ 2–0 ಮುನ್ನಡೆ ಪಡೆದಿದ್ದ ಆತಿಥೇಯ ತಂಡವು ಭಾನುವಾರ ನಿಗದಿಯಾಗಿದ್ದ ಮೂರು ಪಂದ್ಯಗಳ ಪೈಕಿ ಕನಿಷ್ಠ ಒಂದನ್ನು ಗೆಲ್ಲಬೇಕಿತ್ತು. ಆದರೆ, ಆರಂಭದ ಎರಡು ಪಂದ್ಯಗಳನ್ನೂ ನಿರಾಯಾಸವಾಗಿ ಗೆದ್ದ ಭಾರತದ ಆಟಗಾರರು, ಪಶ್ಚಿಮ ಆಫ್ರಿಕಾದ ಸಣ್ಣ ದೇಶದ ವಿರುದ್ಧ ಸಂಪೂರ್ಣ ಪಾರಮ್ಯ ಮೆರೆದರು.

ಚೆಸ್: ಪ್ರಜ್ಞಾನಂದ, ಗುಕೇಶ್‌ಗೆ ಮುನ್ನಡೆ

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್), (ಪಿಟಿಐ): ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿಯ 12ನೇ ಸುತ್ತಿನಲ್ಲಿ ಜೋರ್ಡನ್ ವಾನ್ ಫೊರೀಸ್ಟ್ (ನೆದರ್ಲೆಂಡ್ಸ್) ಜೊತೆ ಡ್ರಾ ಮಾಡಿಕೊಂಡರೆ, ಆರ್.ಪ್ರಜ್ಞಾನಂದ, ಸರ್ಬಿಯಾದ ಅಲೆಕ್ಸಿ ಸರನ ಅವರನ್ನು ಸೋಲಿಸಿದರು. ಇದರಿಂದ ಭಾರತದ ಇಬ್ಬರು ಆಟಗಾರರು ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ಸತತ ಮೂರನೇ ಗೆಲುವು ಸಾಧಿಸಿದ ಪ್ರಜ್ಞಾನಂದ ಟೂರ್ನಿಯು ರೋಚಕ ಹಂತಕ್ಕೆ ತಲುಪುವಂತೆ ಮಾಡಿದ್ದಾರೆ. ಭಾರತದ ಆಟಗಾರರಿಬ್ಬರೂ 8.5 ಪಾಯಿಂಟ್ಸ್ ಸಂಗ್ರಹಿಸಿ-ದ್ದಾರೆ.

11ನೇ ಸುತ್ತಿನವರೆಗೆ ಎರಡನೇ ಸ್ಥಾನದಲ್ಲಿದ್ದ ಉಜ್ಬೇ-ಕಿಸ್ತಾನದ ಗ್ರ್ಯಾಂಡ್ ಮಾಸ್ಟರ್ ನದಿರ್ಬೆಕ್ ಅಬ್ದುಸತ್ತಾ-ರೋವ್ (7.5) ಅವರನ್ನು ಶನಿವಾರ ಭಾರತದ ಅರ್ಜುನ್ ಇರಿಗೇಶಿ ಸೋಲಿಸಿದರು. ಹೀಗಾಗಿ ಉಜ್ಬೇಕ್ ಆಟಗಾರನ ಪ್ರಶಸ್ತಿ ಆಸೆ ದೂರವಾಗಿದೆ.

ಟಿಟಿ: ತನಿಷ್ಕಾ ಕಾಲಭೈರವ ಗೆ ಸಿಂಗಲ್ಸ್ ಕಿರೀಟ

ಬೆಂಗಳೂರು: ಕರ್ನಾಟಕದ ತನಿಷ್ಕಾ ಕಾಲಭೈರವ ಅವರು ಇಂದೋರ್‌ನಲ್ಲಿ ನಡೆದ 86ನೇ ಕೆಡೆಟ್ ಮತ್ತು ಸಬ್ ಜೂನಿಯರ್ ರಾಷ್ಟ್ರೀಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ 13 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ಕಿರೀಟ ಮುಡಿಗೇರಿಸಿಕೊಂಡರು.ಫೈನಲ್ನಲ್ಲಿ ತನಿಷ್ಕಾ 11-2, 11-8, 11-6ರ ನೇರ ಗೇಮ್‌ಗಳಿಂದ ಶ್ರೀಯೋಶ್ರೀ ಅವರನ್ನು ಮಣಿಸಿದರು. ಅದಕ್ಕೂ ಮುನ್ನ ಸೆಮಿಫೈನಲ್‌ನಲ್ಲಿ ಕರ್ನಾಟಕದ ಆಟಗಾರ್ತಿ 5-11, 11-4, 11-5, 11-3ರಿಂದ ದೆಹಲಿಯ ಆಕಾಂಕ್ಷಾ ಸಿಂಘಾಲ್ ಅವರನ್ನು ಹಿಮ್ಮೆಟ್ಟಿಸಿದ್ದರು.ಬಾಲಕಿಯರ ಡಬಲ್ಸ್‌ನಲ್ಲೂ ತನಿಷ್ಕಾ ಕಂಚಿನ ಪದಕ ಗೆದ್ದರು. ಪಿಎಸ್‌ಪಿಬಿಯ ಪ್ರಾಗ್ನ್ಯಾ ಮತ್ತು ಶಾನ್ವಿ ಜೋಡಿಯು 14-12, 11-9, 10-12, 11-7ರಿಂದ ಆಟಗಾರ್ತಿಯ-ರನ್ನು ಸೋಲಿಸಿ, ಫೈನಲ್ ಪ್ರವೇಶಿಸಿತು.

ಬಿಯುಸಿಸಿ ತಂಡಕ್ಕೆ 750 ರನ್ ಜಯ

ಬೆಂಗಳೂರು: ರೋಹನ್ ಆರ್. (339;133ಎ) ಅವರ ತ್ರಿಶತಕ ಮತ್ತು ರಿಷಿಕೇಶ್ (ಔಟಾಗದೇ 206;70ಎ) ಅವರ ದ್ವಿಶತಕದ ನೆರವಿನಿಂದ ಬೆಂಗಳೂರು ಯುನೈಟೆಡ್ ಕ್ರಿಕೆಟ್ ಕ್ಲಬ್ (2) ತಂಡವು ಜೆ.ಬಿ. ಮಲ್ಲಾರಾಧ್ಯ ಟ್ರೋಫಿಗಾಗಿ ನಡೆಯುತ್ತಿರುವ ಕೆಎಸ್‌ಸಿಎ ಗುಂಪು 1ರ ವಿ ಡಿವಿಷನ್ ಲೀಗ್‌ನ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ವೈಎಂಸಿಎ ಕ್ರಿಕೆಟ್ ಕ್ಲಬ್ (1) ವಿರುದ್ಧ 750 ರನ್‌ಗಳ ಜಯ ಸಾಧಿಸಿತು.

ರಾಜರಾಜೇಶ್ವರಿ ಮೆಡಿಕಲ್ ಕಾಲೇಜು ಮೈದಾನದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಯುನೈಟೆಡ್ ತಂಡವು ರೋಹನ್, ರಿಷಿಕೇಶ್ ಮತ್ತು ಸತೀಶ್ ಟಿ. (113;56ಎ) ಅವರ ಬ್ಯಾಟಿಂಗ್ ನೆರವಿನಿಂದ 50 ಓವರ್‌ಗಳಲ್ಲಿ 3 ವಿಕೆಟ್‌ಗೆ 785 ರನ್ ಗಳಿಸಿತು.

ರೋಹನ್ ಇನಿಂಗ್ಸ್‌ನಲ್ಲಿ 52 ಬೌಂಡರಿ, 12 ಸಿಕ್ಸರ್ ಇದ್ದವು. ರಿಷಿಕೇಶ್ 32 ಬೌಂಡರಿ ಮತ್ತು ಆರು ಸಿಕ್ಸರ್ ಗಳಿಸಿದರು. ಹೀಗಾಗಿ, ಯುನೈಟೆಡ್ ತಂಡವು 15.7ರ ಸರಾಸರಿಯಲ್ಲಿ ರನ್ ಪೇರಿಸಿತು. ಬೌಂಡರಿ ಮತ್ತು ಸಿಕ್ಸರ್‌ನಿಂದಲೇ 574 ರನ್ ಗಳಿಸಿತು.

ವೈಎಂಸಿಎ ತಂಡವು 9.1 ಓವರ್‌ಗಳಲ್ಲಿ 7 ವಿಕೆಟ್‌ಗೆ 35 ರನ್ ಗಳಿಸಿ ಹೋರಾಟ ಮುಗಿಸಿತು. ಈ ತಂಡವು ಕೇವಲ ಎಂಟು ಆಟಗಾರರೊಂದಿಗೆ ಆಡಿತ್ತು.

ಫಲಿತಾಂಶ: ಬೆಂಗಳೂರು ಯುನೈಟೆಡ್ ಕ್ಲಬ್‌ಗೆ 750 ರನ್‌ಗಳ ಜಯ

ಸೋಲು ತಪ್ಪಿಸಿದ ಸ್ಮರಣ್ ಶತಕ

ರಣಜಿ ಟ್ರೋಫಿ: ಕರ್ನಾಟಕದ ಅಭಿಯಾನಕ್ಕೆ ತೆರೆ • ಮಿಂಚಿದ ಹಾರ್ದಿಕ್

• ಗಿರೀಶ ದೊಡ್ಡಮನಿ

ಬೆಂಗಳೂರು: ಪ್ರತಿಭಾನ್ವಿತ ಬ್ಯಾಟರ್ ಸ್ಮರಣ್ ರವಿಚಂದ್ರನ್ ಅವರು ಕರ್ನಾಟಕ ತಂಡದ ಸೋಲು ತಪ್ಪಿಸುವಲ್ಲಿ ಯಶಸ್ವಿಯಾದರು.

ಈ ಸಲದ ಟೂರ್ನಿಯಲ್ಲಿ ನಾಕೌಟ್ ಪ್ರವೇಶ ಸಿಗದ ಬೇಸರದಲ್ಲಿರುವ ಕರ್ನಾಟಕ ತಂಡವು ಗುಂಪಿನ ಕೊನೆಯ ಹಂತದ ಪಂದ್ಯದಲ್ಲಿ ಪರಾಭವದಿಂದ ಪಾರಾಗಲು ಸ್ಮರಣ್ (ಅಜೇಯ 133; 217ಎ, 4X14, 6X2) ತಾಳ್ಮೆಯುತ ಶತಕ ಕಾರಣವಾಯಿತು. ಅದರಿಂದಾಗಿ ಹರಿಯಾಣ ವಿರುದ್ಧ ಸಿ ಗುಂಪಿನ ಕೊನೆಯ ಪಂದ್ಯ ಡ್ರಾ ದಲ್ಲಿ ಮುಕ್ತಾಯವಾಯಿತು.

ಮೊದಲ ಇನಿಂಗ್ಸ್ ಮುನ್ನಡೆಯಿಂದ 3 ಅಂಕ ಗಳಿಸಿದ ಹರಿಯಾಣ (29 ಪಾಯಿಂಟ್) ಗುಂಪಿನ ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಗಳಿಸಿತು. ಎಂಟರ ಘಟ್ಟಕ್ಕೆ ಪ್ರವೇಶಿಸಿತು. ಕರ್ನಾಟಕಕ್ಕೆ 1 ಅಂಕ ಲಭಿಸಿತು. ಹೋದವಾರ ಇಲ್ಲಿ ನಡೆದಿದ್ದ ಪಂಜಾಬ್ ಎದುರಿನ ಪಂದ್ಯದಲ್ಲಿ ಸ್ಮರಣ್ ದ್ವಿಶತಕ ಗಳಿಸಿದ್ದರು.

ಕೊನೆಯ ಪಂದ್ಯದ ಮೂರನೇ ದಿನವಾದ ಶನಿವಾರ ಹರಿಯಾಣ ತಂಡವು ಮೊದಲ ಇನಿಂಗ್ಸ್‌ನಲ್ಲಿ 146 ರನ್‌ಗಳ ಮುನ್ನಡೆ ಸಾಧಿಸಿತ್ತು. ಅದಕ್ಕುತ್ತರ-ವಾಗಿ ಕರ್ನಾಟಕ 32 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 108 ರನ್ ಗಳಿಸಿತ್ತು. ದೇವದತ್ತ ಪಡಿಕ್ಕಲ್ (41) ಮತ್ತು ಸ್ಮರಣ್ (9) ಕ್ರೀಸ್‌ನಲ್ಲಿದ್ದರು. ಕೊನೆಯ ದಿನದಾಟದ ಊಟದ ವಿರಾಮಕ್ಕೂ ಮುನ್ನವೇ ಕರ್ನಾಟಕದ ಇನಿಂಗ್ಸ್‌ಗೆ ಕೊನೆ ಹಾಡಿ ನಂತರ ಲಭಿಸುವ ಚಿಕ್ಕ ಗುರಿಯನ್ನು ಮುಟ್ಟಿ ಜಯಗಳಿಸುವ ಯೋಜನೆ ಹರಿಯಾಣ ತಂಡದ್ದಾಗಿತ್ತು

ಅದಕ್ಕೆ ತಕ್ಕಂತೆ ದಿನದಾಟದ ಎಂಟನೇ ಓವರ್‌ನಲ್ಲಿ ವೇಗಿ ಅನ್ಶುಲ್ ಕಾಂಭೋಜ್ ಅವರು ಪಡಿಕ್ಕಲ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ಅನ್ಶುಲ್ ಹಾಕಿದ ಇನ್ನೊಂದು ಓವರ್‌ನಲ್ಲಿ ಕೆ.ಎಲ್. ಶ್ರೀಜಿತ್ ಅವರು ಯುವರಾಜ್ ಸಿಂಗ್‌ಗೆ ಕ್ಯಾಚಿತ್ತರು. ಈ ಹಂತದಲ್ಲಿ ಆತಿಥೇಯ ಬಳಗಕ್ಕೆ ಆತಂಕ ಮೂಡಿತ್ತು.

ಕರ್ನಾಟಕ ತಂಡದ ಬ್ಯಾಟರ್ ಸ್ಮರಣ್ ರವಿಚಂದ್ರನ್ ಶತಕ ಸಂಭ್ರಮ– ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

ಈ ಹಂತದಲ್ಲಿ ಯಶೋವರ್ಧನ್ ಪರಂತಾಪ್ (12; 37ಎ, 4X1) ಅವರು ಸ್ಮರಣ್‌ಗೆ ಉತ್ತಮ ಬೆಂಬಲ ನೀಡಿದರು. ಯಾವುದೇ ಅವಸರ, ಅಬ್ಬರಗಳಿಗೆ ಆಸ್ಪದ ಕೊಡದೇ ಇವರಿಬ್ಬರೂ ಅವಕಾಶ ಸಿಕ್ಕಾಗ ರನ್ ಗಳಿಸಿದರು. 6ನೇ ವಿಕೆಟ್ ಜೊತೆಯಾದಲ್ಲಿ 35ರನ್ ಕಲೆಹಾಕಲು 72 ಎಸೆತ ಆಡಿದರು. ದಾಳಿ ಆರಂಭಿಸಿದ ಅನುಭವಿ ಆಫ್‌ಸ್ಪಿನ್ನರ್ ಜಯಂತ್ ಯಾದವ್ ಅವರ ಎಸೆತವನ್ನು ರಕ್ಷಣಾ-ತ್ಮಕವಾಗಿ ಆಡುವ ಪ್ರಯತ್ನದಲ್ಲಿ ಯಶೋವರ್ಧನ್ ಎಲ್‌ಬಿಡಬ್ಲ್ಯು ಆದರು. ಜೊತೆಯಾಟ ಮುರಿಯಿತು.

ಸ್ಮರಣ್–ಹಾರ್ದಿಕ್ ಜೊತೆಯಾಟ: ಊಟದ ನಂತರದ ಆಟದಲ್ಲಿ ಸ್ಮರಣ್ ಮತ್ತು ಹಾರ್ದಿಕ್ ರಾಜ್ ಜೊತೆಯಾಟ ಗಮನಸೆಳೆಯಿತು.ಹರಿಯಾಣದಗೆಲುವಿನಆಸೆಗೆಇವರಿಬ್ಬರ ಆಟ ಅಡ್ಡಿಯಾಯಿತು. ಒಂದು ಕಡೆ ಸ್ಮರಣ್ ಚೆಂದದ ಡ್ರೈವ್‌ಗಳ ಆಟವಾಡುತ್ತಿದ್ದರೆ, ಹಾರ್ದಿಕ್ ಅದಕ್ಕೆ ಪೂರಕವಾಗಿ ರಕ್ಷಣಾತ್ಮಕ ಹೊಡೆತಗಳ ಮೂಲಕ ಒಂಟಿ ಮತ್ತು ಎರಡು ರನ್‌ಗಳನ್ನು ಹೆಕ್ಕುವುದರಲ್ಲಿ ನಿರತರಾಗಿದ್ದರು. ಸ್ಮರಣ್, 149 ಎಸೆತಗಳಲ್ಲಿ ಶತಕ ಪೂರೈಸಿದರು. 229 ನಿಮಿಷಗಳ ಆಟದಲ್ಲಿ ಅವರು ಈ ಸಾಧನೆ ಮಾಡಿದರು. ಅದರಲ್ಲಿ 10 ಬೌಂಡರಿ ಮತ್ತು 2 ಸಿಕ್ಸರ್ ಇದ್ದವು. ಹಾರ್ದಿಕ್ 78 ಎಸೆತಗಳಲ್ಲಿ 40 ರನ್ ಗಳಿಸಿದರು. 7ನೇ ವಿಕೆಟ್ ಜೊತೆಯಾಟದಲ್ಲಿ 98ರನ್ ಸೇರಿಸಿದರು. 75ನೇ ಓವರ್‌ನಲ್ಲಿ ಹಾರ್ದಿಕ್ ಅವರನ್ನು ಜಯಂತ್ ಎಲ್‌ಬಿ ಬಲೆಗೆ ಕೆಡವಿದರು. ಎರಡು ಓವರ್‌ಗಳ ನಂತರ ಪ್ರಸಿದ್ಧಕೃಷ್ಣ ಕೂಡ ಔಟಾದರು. ಸ್ಮರಣ್ ಜೊತೆಗೆ ಸೇರಿಕೊಂಡ ವಾಸುಕಿ ಕೌಶಿಕ್ 22 ಎಸೆತಗಳಲ್ಲಿ 1 ರನ್ ಮಾತ್ರ ಗಳಿಸಿದರು. ಆದರೆ ವಿಕೆಟ್ ಪತನಕ್ಕೆ ಆಸ್ಪದ ಕೊಡಲಿಲ್ಲ. ಕರ್ನಾಟಕ ತಂಡವು 90 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 295 ರನ್ ಗಳಿಸಿತು. 149 ರನ್‌ಗಳ ಮುನ್ನಡೆ ಗಳಿಸಿತು. ಚಹಾ ವಿರಾಮದ ಹೊತ್ತಿಗೆ ಹರಿಯಾಣ ಆಟಗಾರರು ಡ್ರಾಗೆ ಸಮ್ಮತಿಸಿದರು. ಕರ್ನಾಟಕದ ಆಟಗಾರರ ಕೈಕುಲುಕಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ 304. ಹರಿಯಾಣ: 450. ಎರಡನೇ ಇನಿಂಗ್ಸ್: ಕರ್ನಾಟಕ: 90 ಓವರ್‌ಗಳಲ್ಲಿ 8ಕ್ಕೆ295 (ದೇವದತ್ತ ಪಡಿಕ್ಕಲ್ 43, ಸ್ಮರಣ್ ರವಿಚಂದ್ರನ್ ಅಜೇಯ 134, ಹಾರ್ದಿಕ್ ರಾಜ್ 40, ಅನ್ಶುಲ್ ಕಾಂಭೋಜ್ 40ಕ್ಕೆ3, ಅನುಜ್ ಠಕ್ರಾಲ್ 70ಕ್ಕೆ2, ಜಯಂತ್ ಯಾದವ್ 62ಕ್ಕೆ2) ಫಲಿತಾಂಶ: **ಪಂದ್ಯ ಡ್ರಾ.**

ರಣಜಿ ಟ್ರೋಫಿ ಎಲೀಟ್ ಸಿ ಗುಂಪು

ತಂಡ	ಪಂದ್ಯ	ಜಯ	ಸೋಲು	ಡ್ರಾ	ಅಂಕ
ಹರಿಯಾಣ	7	3	0	4	29
ಕೇರಳ	7	3	0	4	28
ಬಂಗಾಳ	7	2	1	3	21
ಕರ್ನಾಟಕ	7	2	0	5	20
ಮಧ್ಯಪ್ರದೇಶ	7	1	1	5	14